BUDGET ESTIMATES FOR 1975-76
DEMAND Nos. 17 AND 23

SRI M. MALLIKARJUNASWAMY (Minister for Education).—Madam, on the recommendation of the Government., I beg to move :

"That a sum not exceeding Rs. 2,06,90,000 be granted to the Government to defray the charges which will come in course of payment during the financial year ending 31st day of March 1976 in respect of Demand No. 17 "Stationery and Printing" ".

Madam, on the recommendation of the Governor, I beg to move :

"That a sum not exceeding Rs 91,23,92 000 be granted to the Government to defray the charges which will come in course of payment during the financial year ending 31st day of March 1976 in respect of Demand No. 23, "Eductaion (excluding Youth Services) Scientific Research and Art and Culture" ".

MADAM SPEAKER.—Motion moved :—

"That a sum not exceeding Rs. 2,06,90,000 be granted to the Government to defary the charges which will come in course of payment during the fincial year ending 31st day of March 1976 in respect of Demand No. 17 "Stationery ann Printing" ".

"That a sum not exceeding Rs. 91,23,92,000 be granted to the Government to defray the charges which will come in course of payment during the financial year ending 31st day of March 1976 in respect of Demand No. 23 of 'Education (excluding youth Services) ScientificResearch and Art and Culture".

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೇ ನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗ ಏನು ಸಭೆಯ ಮುಂದೆ ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಚಿವರು ಈ ಸಭೆಯ ಮಂಜೂರಾತಿಗೆ ಮಂಡಿಸಿದ್ದಾರೆ, ಈ ಒಂದು ಬೇಡಿಕೆಗಳ ಬಗ್ಗೆ ಸಭೆಯ ಮಂಜೂರಾತಿ ಕೊಡುವುದಕ್ಕಿಂತ ಮುಂಚೆ ಕೆಲವು ವಿಷಯಗಳನ್ನು ಪರಿಶೀಲನೆ ಮಾಡತಕ್ಕುದು ಅತಿ ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ ಈ ಮನೆಯಲ್ಲಿ ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಗಳ ಮೇಲೆ ಚರ್ಚೆ ನಡೆಯುತಕ್ಕ ಕಾಲದಲ್ಲಿ ಹಲವಾರು ಸಾರಿ ಈ ಮನೆಯ ಸದಸ್ಯರು ಕೂಡ ಎಲ್ಲ ಕಡೆಯಿಂದ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರುವಂಥಾದ್ದರಲ್ಲಿ ಬಹುಶಃ ಇನ್ನು ಸರ್ಕಾರಕ್ಕೆ ಸಾಕಷ್ಟು ಶಕ್ತಿ ಬೆಳೆದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಅದಕ್ಕೆ ಕಾರಣ ಏನು ? ಸರ್ಕಾರಕ್ಕೆ ದೋಷಾರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಈ ಇಲಾಖೆಯ ಆಡಳಿತದ ವೆಚ್ಚ ಸುಮಾರು ೯೧ ಕೋಟಿ ರೂಪಾಯಿಗಳಿಗೆ ಮುಟ್ಟಿದೆ. ಇಷ್ಟು ಬೃಹತ್ ಪ್ರಮಾಣದ ಹಣವನ್ನು ನಾವು ಇಲಾಖೆಗೆ ಕೊಡುತ್ತಿದ್ದು ಇವತ್ತಿಗೂ ಕೂಡ ಸಮಸ್ಯೆ ಗಾತ್ರವನ್ನು ಪರಿಶೀಲನೆ ಮಾಡುವಾಗ ಬಹುಶಃ ಇಲಾಖೆಗೆ ಕೊಡತಕ್ಕ ಹಣ ಸಾಕಾಗುವುದಿಲ್ಲ ಎನ್ನತಕ್ಕದ್ದು ನನಗೆ ಸಂಶಯ ಬರುತ್ತದೆ. ಈ ಇಲಾಖೆಯಲ್ಲಿ ಸರಿಯಾದಂಥ ಒಂದು ವ್ಯವಸ್ಥಿತ ಸುಧಾರಣೆಯನ್ನು ತರತಕ್ಕುದ್ದು ಇನ್ನು ಹೆಚ್ಚು ಹಣವನ್ನು ಖರ್ಚುಮಾಡತಕ್ಕ ಪರಿಸ್ಥಿತಿ ಬರುತ್ತದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಇವೊತ್ತು ನಾವು ಕೊಟ್ಟಿರತಕ್ಕ ಇಲಾಖೆ ವರದಿ ಇದೆ, ಅದನ್ನು ನೋಡಿದಾಗ ಸಾಕಷ್ಟು ಬೃಹದಕಾರವಾಗಿ ಈ ಇಲಾಖೆ ಬೆಳೆದಿದೆ ಎನ್ನುವುದು ಗೋಚರವಾದರೂ ಕೂಡ ಗುಣಮಟ್ಟದ ದೃಷ್ಟಿಯಿಂದ ಇಲಾಖೆಯಲ್ಲಿ ಸಾಕಷ್ಟು ಮಾರ್ಪಾಡ ಬೇಕಾದ್ದು ಅತಿ ಅವಶ್ಯಕ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಪ್ರಪ್ರಥಮವಾಗಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಗುಣಮಟ್ಟದ ದೃಷ್ಟಿಯಿಂದ ನೋಡಿದರೆ ಈ ಇಲಾಖೆಯ ಬೆಳವಣಿಗೆ ಯಾರಿಗೂ ಒಂದು ತೃಪ್ತಿ ತರತಕ್ಕ ರೀತಿಯಲ್ಲಿ ಕಾರ್ಯ

ವಾಗಿಲ್ಲ ಎಂದು ಹೇಳಬೇಕಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಹೇಳುತ್ತೇನೆ ಈಗ ಒದಗಿರತಕ್ಕ ಹಣ ಸಾಲದು, ಗುಣಮಟ್ಟದ ದೃಷ್ಟಿಯಿಂದ ಶಕ್ತಿ ಹೆಚ್ಚಿಸಬೇಕಾದರೆ, ಸಮರ್ಪಣೆ ಬೆಳೆಸಬೇಕಾದರೆ, ಗುಣಮಟ್ಟವನ್ನು ಪ್ರತಿಹಂತದಲ್ಲೂ ಸರಿಯಾದಂಥ ರೀತಿಯಲ್ಲಿ ಜಾರಿಗೆ ತರಬೇಕಾದರೆ, ವ್ಯವಸ್ಥೆಯನ್ನು ಮಾಡಬೇಕಾದರೆ ಇನ್ನು ಹೆಚ್ಚು ಹಣ ಬೇಕಾಗುತ್ತದೆ ಎಂದು ಮಾನವರಿಕೆ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಕೇವಲ ಸರ್ಕಾರಕ್ಕೆ ದೋಷ ಕೊಡಲಿಕ್ಕೆ ಹೋಗುವುದಿಲ್ಲ. ನಾವು ಹೇಳುವ ಉದ್ದೇಶ ಇಷ್ಟೇ, ಈ ಇಲಾಖೆಯ ಆಡಳಿತವನ್ನು ನಡೆಸಿಕೊಂಡು ಬಂದಿರತಕ್ಕ ಮಂತ್ರಿಗಳ ಬಗ್ಗೆ ನಾನು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಪ್ರೈಮರಿ ಎಜುಕೇಷನ್ ಬೋರ್ಡ್ ಇದೆ, ಟೆಕ್ನಿಕಲ್ ಎಜುಕೇಷನ್ ಬೋರ್ಡ್ ಇದೆ. ಸೆಕೆಂಡರಿ ಎಜುಕೇಷನ್ ಬೋರ್ಡ್ ಇದೆ. ಆದುದರಿಂದ ಪ್ರಿ ಪ್ರೈಮರಿ ಎಜುಕೇಷನ್ ಒಂದು ಅಡ್ವೈಸರಿಬೋರ್ಡ್ ಸ್ಥಾಪನೆಮಾಡಿ, ಅದರಲ್ಲಿ ಪರಿಣಿತರನ್ನು ನೇಮಕ ಮಾಡಿ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲಿಕ್ಕೆ ಅವರು ಒಂದು ವರದಿಯನ್ನು ಕೊಡತಕ್ಕ ಅವಕಾಶವನ್ನು ಕಲ್ಪಿಸಿಕೊಡುವುದು ಸೂಕ್ತ ಎಂದು ನನ್ನ ಅಭಿಪ್ರಾಯ. ಹಿಂದೆ ಶ್ರೀಮಾನ್ ಮಲ್ಲಾರಾಧ್ಯ ಅವರ ನೇತೃತ್ವದಲ್ಲಿ ಒಂದು ಕಮಿಟಿ ಆಗಿತ್ತು. ಅವರು ಕೂಡ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಸಲಹೆಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆಯೋ ಯಶಸ್ವಿಗೊಳಿಸಿದ್ದಾರೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಣದ ಒತ್ತಡದಿಂದ ಈ ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಆತಂಕವಾಗಿದೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಒಂದು ಸಲಹಾ ಸಮಿತಿಯನ್ನು ನೇಮಕ ಮಾಡಿದ್ದರು, ಆ ಸಲಹಾ ಸಮಿತಿಯವರು ಕೂಡ ವರದಿಯನ್ನು ಕೊಟ್ಟಿದ್ದಾರೆ. ನನಗನ್ನಿಸುತ್ತಿದೆ, ಅದೇರೀತಿ ರಾಜ್ಯಮಟ್ಟದಲ್ಲಿ ಡಿ.ಪಿ.ಐ ಏನಿದ್ದಾರೆ ಅವರಿಗೆ ಸಲಹೆಯನ್ನು ಮಾಡುವುದಕ್ಕೆ ಮೇಲ್ವಿಚಾರಣೆ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು ಎಂದು. ಪ್ರಿ ಪ್ರೈಮರಿ ಎಜುಕೇಷನ್‌ನಲ್ಲಿ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಸ್ಪೆಷಲ್ ಆಫೀಸರನ್ನು ನೇಮಕ ಮಾಡತಕ್ಕದ್ದು, ಜಾಯಿಂಟ್ ಡೈರೆಕ್ಟರನ್ನು ನೇಮಕ ಮಾಡತಕ್ಕದ್ದು. ಒಂದು ಹೊಸ ಹುದ್ದೆಯನ್ನು ಕಲ್ಪನೆ ಮಾಡತಕ್ಕದ್ದು ಅನಾವಶ್ಯಕ ಆ ದೃಷ್ಟಿಕೋನದಿಂದ ಹೇಳುವುದಾದರೆ ನನ್ನ ಅಭಿಪ್ರಾಯದಲ್ಲಿ ಸಾಮಾನ್ಯವಾಗಿ ಒಬ್ಬ ಮಹಿಳಾ ಅಧಿಕಾರಿಯನ್ನು ನೇಮಕ ಮಾಡಿದರೆ ಬಹಳ ಒಳ್ಳೆಯದು. ಪ್ರಿ ಪ್ರೈಮರಿ ಎಜುಕೇಷನ್‌ನಲ್ಲಿ ಮಕ್ಕಳ ವಿಚಾರಣೆ ಮಾಡಬೇಕಾದರೆ ಒಂದು ಸರಿಯಾದಂಥ ಮಾರ್ಗದರ್ಶನ ಮಾಡಬೇಕಾದರೆ ಸಾಮಾನ್ಯವಾಗಿ ಮಹಿಳೆಯವರು ಆ ಒಂದು ಜಾಗದಲ್ಲಿ ವಿಚಾರಣಾ ಅಧಿಕಾರಿ ಆದರೆ ಬಹಳ ಒಳ್ಳೆಯದು ಎನ್ನುವ ದೃಷ್ಟಿಯಿಂದ ನಾನು ಈ ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಸರ್ಕಾರ ಇದರ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಮನ್ನು ಹಾಕಬೇಕು, ವರ್ಷಕ್ಕೆ 10 ರಂತೆ ಶಿಶು ವಿಹಾರಗಳನ್ನು ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಬೇಕು. ಕೊನೆಯ ಪಕ್ಷ ಶಾಲೆ ಆದರೂ ಮಾಡಬೇಕು. ಏತಕ್ಕೆಂದರೆ ನಿಮ್ಮ ರಿಸೋರ್ಸ್ ಸ್ವಲ್ಪ ಕಷ್ಟವಿದೆ. ಆದುದರಿಂದ ಹಂತ ಹಂತವಾಗಿ ಮಾಡಿ, ಇವತ್ತು ಬಹುಶಃ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಮಕ್ಕಳ ಒಂದು ಭವಿಷ್ಯ ಸರಿಯಾದಮಾರ್ಗದಲ್ಲಿ ರೂಪಿತವಾಗಬೇಕಾದರೆ ಇದೇ ಒಂದು ತಳಹದಿ ಈ ಒಂದು ತಳಹದಿ ಭದ್ರವಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ಒಂದು ಕೆಲಸವನ್ನು ಮಾಡಿ ಎನ್ನತಕ್ಕಂಥ ಸಲಹೆಯನ್ನು ತಮಗೆ ಕೊಡಲಿಚ್ಛಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಣಿಯವರೇ ಇದು ಪ್ರಿ ಪ್ರೈಮರಿ ಎಜುಕೇಷನ್ ಪರಿಸ್ಥಿತಿ ಆದರೆ ಇನ್ನು ಪ್ರೈಮರಿ ಎಜುಕೇಷನ್ ವಿಷಯವನ್ನು ಹೇಳುವುದಾದರೆ, ಇದು ಬೃಹದಾಕಾರವಾಗಿ ಬೆಳೆದಿದೆ ಎಂದು ಮೊದಲು ತಿಳಿಸಿದ್ದೇನೆ. ಈ ವಿಷಯದ ಬಗ್ಗೆ ಮಾನ್ಯ ಹನುಮೇಗೌಡರವರು ಹೇಳಿದ್ದಾರೆ. ನಾವು ಸಹ ಪದೇ ಪದೇ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದೇವೆ ಇವತ್ತು ಇದರ ಗುಣಮಟ್ಟದ ದೃಷ್ಟಿಯಿಂದ ಮನಸ್ಸಿಗೆ ಸಮರ್ಪಕವಾದ ರೀತಿಯಲ್ಲಿ ಬೆಳೆದಿಲ್ಲ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಇದಕ್ಕೆ ಮೂಲ ಕಾರಣವನ್ನು ಕೂಡ ನಾವು ಹುಡುಕಬೇಕಾಗುತ್ತದೆ. ಮೊದಲನೆಯದಾಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದರಲ್ಲಿ ದೋಷವಿದೆಂದು ನನ್ನಗನ್ನಿಸುತ್ತದೆ. ಏತಕ್ಕೆಂದರೆ ಇವತ್ತು ನಾವು ಒಬ್ಬ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವಾಗ ಬಹಳ ಎಚ್ಚರಿಕೆಯನ್ನು ವಹಿಸಿಕೊಳ್ಳಬೇಕಾಗುತ್ತದೆ ಕಾರಣವಿಷ್ಟೆ ಅವನಿಗೆ ಒಂದು ಉದ್ಯೋಗ ಸಿಕ್ಕಿದರೆ ಸಾಕು, ಒಂದು ಸಂಬಳ ಬರತಕ್ಕಂಥ ಕೆಲಸ ಸಿಕ್ಕರೆ ಸಾಕು ಎನ್ನತಕ್ಕಂಥವನಿಗೆ ಈ ಒಂದು ಉದ್ಯೋಗವನ್ನು ಒದಗಿಸಿಕೊಟ್ಟರೆ ಬಹುಶಃ ಗುಣಮಟ್ಟದ ಮೊದಲನೆಯ ಪೆಟ್ಟು ಬೀಳುತ್ತದೆ ಎನ್ನತಕ್ಕಂಥದ್ದನ್ನು ಅರ್ಥಮಾಡಿಕೊಳ್ಳಬೇಕು. ಈಗ ಯಾವುದೋ ಒಂದು ಫ್ಯಾಕ್ಟರಿಯಲ್ಲಿ ಬೇರೆ ಕೆಲಸ ಮಾಡತಕ್ಕಂಥವನ ನೇಮಕ ಏನಿದೆಯೋ ಅದರಲ್ಲಿ ಒಂದು ವೇಳೆ ಸ್ವಲ್ಪ ಹೆಚ್ಚು ಕಡಿಮೆ ಯಾದರೂ ಕೂಡ ಆಗತಕ್ಕಂಥ ನಷ್ಟ ಸ್ವಲ್ಪವೇ ಹೊರತು ಅಷ್ಟು ದೊಡ್ಡ ಪ್ರಮಾಣದ ನಷ್ಟವಲ್ಲ. ಆದರೆ

ಇವತ್ತು ಶಿಕ್ಷಕರನ್ನು ನೇಮಕ ಮಾಡಿಕೊಳ್ಳತಕ್ಕಂಥ ಕಾಲದಲ್ಲಿ ಅವನು ಕೇವಲ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸ್ ಮಾಡಿದ್ದಾನೆ, ಟೀಚರ್ಸ್ ಟ್ರೇನಿಂಗ್ ಮಾಡಿದ್ದಾನೆಂದು ಒಂದು ಸಮಾಧಾನದಿಂದ ಅವರನ್ನು ನೇಮಕ ಮಾಡತಕ್ಕಂಥದ್ದು ಉಚಿತವಲ್ಲವೆಂದು ನಾನು ಹೇಳುತ್ತೇನೆ. ನಾನು ಕೇಳಿದ ಹಾಗೆ ಡಿಸ್ಟ್ರಿಕ್ಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಡಿ.ಡಿ.ಪಿ.ಐ ಮತ್ತಿತರ ಇನ್ನು ಯಾರೋ ಒಬ್ಬಬ್ಬರು ಆಫೀಸರು ಇರುತ್ತಾರೆನ್ನುವುದನ್ನು ಒಬ್ಬೊಬ್ಬರು ಶಿಫಾರಸ್ಸು ಮಾಡಿ ಎಂದು ಬಂದಂಥ ಅಭ್ಯರ್ಥಿಗಳಿಂದ ತಿಳಿದುಕೊಂಡಿದ್ದೇನೆ. ಈಗ ಸುಮಾರು [illegible] ಟೀಚರ್ಸ್ ಪೋಸ್ಟ್‌ಗೆ ಕಾಲ್ ಫಾರ್ ಮಾಡುತ್ತಾರೆಂದರೆ ಸಾವಿರಾರು ಅರ್ಜಿಗಳು ಬರುತ್ತವೆ. ಹಿಂದೆ ಅಭ್ಯರ್ಥಿಗಳ ಕೊರತೆ ಇದ್ದಂಥ ಕಾಲವೊಂದಿತ್ತು ಆದರೆ ಇವತ್ತು ಬೇಕಾದಷ್ಟು ಅರ್ಜಿಗಳು ಬರುತ್ತಿರುವಾಗ ನೀವು ಅವರನ್ನು ಆಯ್ಕೆ ಮಾಡುವಾಗ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಬಹಳ ಕಟ್ಟುನಿಟ್ಟಾದ ಕೆಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಈ ಕ್ರಮಗಳನ್ನು ಅನುಸರಿಸಬೇಕೆನ್ನುವಂಥ ಕಾಲದಲ್ಲಿ ಬಹುಶಃ ನನ್ನ ಮನಸ್ಸಿನಲ್ಲಿರತಕ್ಕಂಥ ಕೆಲವು ವಿವರಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಕೇವಲ ಒಂದು ಬ್ಯಾಕ್‌ವರ್ಡ್ ಕ್ಲಾಸ್, ಷೆಡ್ಯೂಲ್ಡ್ ಕ್ಯಾಸ್ಟ್ ಶೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿಯೂ ಕೂಡ ಇವತ್ತು ಪರಿಣಿತರಾಗಿರತಕ್ಕಂಥವರು ಯೋಗ್ಯರೂ ಇದ್ದಾರೆ. ಆ ಪರ್ಸೆಂಟೇಜನ್ನು ಮೇನ್‌ಟೇನ್ ಮಾಡಿ ಬೇಡವೆಂದು ಹೇಳುವುದಿಲ್ಲ. ಪರ್ಸೆಂಟೇಜನ್ನು ಮೇನ್‌ಟೇನ್ ಮಾಡತಕ್ಕಂಥ ಕಾಲದಲ್ಲಿ ಅತಿ ಹೆಚ್ಚು ಇದರ ಬಗ್ಗೆ ಶ್ರದ್ಧೆ ಇರತಕ್ಕಂಥವರನ್ನು ನೇಮಕ ಮಾಡಿಕೊಳ್ಳಬೇಕು. ನೇಮಕ ಮಾಡಿಕೊಳ್ಳದಿದ್ದರೆ ಏನು ಆಗುತ್ತದೆಂದರೆ ಬಹುಶಃ ಅವನ ೩೦ ವರ್ಷದ ಸರ್ವಿಸ್‌ನಲ್ಲಿ ಬೀಡಿ ಸೇದಿಕೊಂಡು ಇಸ್ಪೀಟ್ ಆಡಿಕೊಂಡು ರಾಜಕೀಯ ಮಾಡಿಕೊಂಡು ಇಲ್ಲ ಮತ್ತೊಂದು ಮಗದೊಂದು ಮಾಡಿಕೊಂಡು ಮಕ್ಕಳಿಗೆ ಪಾಠವನ್ನು ಮಾಡದೇ ಅವನ ಭವಿಷ್ಯವನ್ನು ಹಾಳು ಮಾಡುತ್ತಾನೆ. ಆದುದರಿಂದ ಇವತ್ತು ನೀವು ಸೆಲೆಕ್ಷನ್ ಮಾಡುವಾಗ ಯಾವುದೋ ಒಂದು ಪ್ರಶ್ನೆ ಕೇಳುತ್ತೀರಿ, ಉದಾಹರಣೆಗೆ ಈ ರಾಜ್ಯದ ವಿದ್ಯಾ ಮಂತ್ರಿಗಳು ಯಾರು ? ಎಂದು ಕೇಳುತ್ತೀರಿ ಎಂದು ಇಟ್ಟುಕೊಳ್ಳಿ ಯಾರೋ ಒಬ್ಬ ಮಾನ್ಯ ಮಲ್ಲಿಕಾರ್ಜುನಸ್ವಾಮಿ ಎಂದು ಹೇಳಿಬಿಡುತ್ತಾನೆ. ಅವನು ಆ ಇಂಟರ್‌ವ್ಯೂನಲ್ಲಿ ಪಾಸ್ ಆಗುತ್ತಾನೆ. ಆದುದರಿಂದ ಈ ಒಂದು ಆಯೋಗದ ಕ್ರಮವೇನಿದೆ ಅದು ಸ್ವಲ್ಪ ಬದಲಾವಣೆಯಾಗಬೇಕಾಗಿದೆ. ಅವನಿಗೆ ಸಾಕಷ್ಟು ಪರ್ಸನಾಲಟಿ ಇದೆಯೋ, ಅವನಿಗೆ ಸಾಕಷ್ಟು ಪ್ರಭಾವವಿದೆಯೋ ಎನ್ನತಕ್ಕಂಥದ್ದನ್ನು ನೋಡಬಾರದು. ಇವತ್ತು ನಾನು ಹೇಳುತ್ತೇನೆ ಅನೇಕ ಜನ ಟೀಚರ್ಸ್‌ಗೆ ಸರಿಯಾಗಿ ಕನ್ನಡದಲ್ಲಿಯೇ ಬರೆಯುವುದಕ್ಕೆ ಬರುವುದಿಲ್ಲ. ಆಲ್ ಇಂಡಿಯಾ ಗೌವರ್ನ್‌ಮೆಂಟ್ ಸರ್ವೆಂಟ್ಸ್ ಎಂದು ಬರೀ ಎಂದರೆ ಬರೆಯುವುದಕ್ಕೆ ಬರುವುದಿಲ್ಲ. ಎಗ್ಸಿಕ್ಯೂಟಿವ್ ಇಂಜನಿಯರ್ ಎಂದು ಬರೆಯೆಂದರೆ ಎಜುಕೇಟಿವ್ ಇಂಜಿನಿಯರ್ ಎಂದು ಬರೆಯುತ್ತಾನೆ. ನಾನು ಅನೇಕ ಪ್ರೈಮರಿ ಸ್ಕೂಲ್ ಮಾಸ್ಟರ್‌ಗಳನ್ನು ನೋಡಿದ್ದೇನೆ, ಗ್ರಾಮಾಂತರ ಪ್ರದೇಶಗಳಲ್ಲಿ ಕೆರೆ ಕೆಲಸಕ್ಕೆ ಅರ್ಜಿಯನ್ನು ಬರೆಸಿಕೊಂಡು ಬಾರಯ್ಯಾ ಎಂದರೆ ಅವನು ಬರೆಸಿಕೊಂಡು ಬಂದಿರುತ್ತಾನೆ. ಯಾರ ಹತ್ತಿರ ಬರೆಸಿಕೊಂಡು ಬಂದಿದ್ದೀಯಾ ಎಂದು ಕೇಳಿದರೆ ಪ್ರೈಮರಿ ಸ್ಕೂಲ್‌ಮಾಸ್ಟರ್ ಹತ್ತಿರ ಬರೆಸಿಕೊಂಡು ಬಂದೆ ಎಂದು ಹೇಳುತ್ತಾನೆ. ಹಿಂದೆ ಇದ್ದವರೇ ಆಗಲೀ, ಪೂರ್ವದಲ್ಲಿದ್ದವರೇ ಆಗಲಿ, ಇವತ್ತು ಹಾಲಿ ಕೆಲಸ ಮಾಡತಕ್ಕ ಮಂತ್ರಿಗಳೇ ಆಗಲೀ ನಾನು ವೈಯಕ್ತಿಕವಾಗಿ ಹೇಳುವುದಾದರೆ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಅವರುಗಳ ವಿಚಾರದಲ್ಲಿ ದೋಷ ಮಾಡಲಿಕ್ಕೆ ನಾನು ತಯಾರಾಗಿಲ್ಲ. ಇವತ್ತು ನಾನು ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚು ಮಾಡಬೇಕಾದರೆ ನಾವು ಇನ್ನೂ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ವಿದ್ಯಾ ಇಲಾಖೆಯ ಅಧಿಕಾರಿಗಳು ಕೂಡ ಯೋಗ್ಯವಾದ ಅಧಿಕಾರಿಗಳಿದ್ದಾರೆ, ಹಿರಿಯ ಅಧಿಕಾರಿಗಳಾಗಿದ್ದಾರೆ, ಸರ್ಕಾರದಲ್ಲಿ ಮಂತ್ರಿಗಳೂ ಕೂಡ ಯೋಗ್ಯರಾಗಿದ್ದಾರೆ. ಈ ಇಲಾಖೆಗೆ ನಾವು ಏನು ೯೨ ಕೋಟಿ ರೂಪಾಯಿ ಹಣವನ್ನು ಕೊಡುತ್ತಿದ್ದೇವೆ ಇದು ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ ಏನೇನು ಸಾಧ್ಯವಾಗುವುದಿಲ್ಲ ಎನ್ನುವುದನ್ನು ಪ್ರಾಮಾಣಿಕವಾಗಿ ತಿಳಿಸಿ, ಇದರಲ್ಲಿರತಕ್ಕ ದೋಷಗಳನ್ನು ಸರ್ಕಾರ ಪರಿಶೀಲನೆ ಮಾಡಬೇಕು ಎನ್ನುವ ದೃಷ್ಟಿಯಿಂದ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

2-30 P.M.

ಮಾನ್ಯ ಸಭಾಧ್ಯಕ್ಷರವರೇ, ಪ್ರಥಮವಾಗಿ ಪ್ರೈಮರಿ ಎಜುಕೇಷನ್ ಬಗ್ಗೆ ಒಂದು ವಿಷಯ ಹೇಳಿದರೆ ಒಳ್ಳೆಯದು ಎಂದು ತಿಳಿದುಕೊಂಡು ಪ್ರಸ್ತಾಪ ಮಾಡುತ್ತೇನೆ. ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತರಬೇಕು ಎಂದು ನಿರ್ಣಯ ಮಾಡಿದ್ದೇವೆ. ಈ ನಿರ್ಣಯವನ್ನು ೧೦ ವರ್ಷಗಳ ಹಿಂದೆ ಮಾಡಿದ್ದರೂ ಕೂಡ ಅದು ಸರಿಯಾದಂಥ ರೀತಿಯಲ್ಲಿ ಇವತ್ತು ಕಾರ್ಯರೂಪಕ್ಕೆ ಬರಲಿಕ್ಕೆ ಸಾಧ್ಯವಾಗಿಲ್ಲ. ಇವತ್ತು [illegible] ಎಜುಕೇಷನನ್ನು

ನಮ್ಮ ರಾಜ್ಯದಲ್ಲಿ ೬ ವರ್ಷಗಳಿಂದ ೧೦ ವರ್ಷದ ಮಕ್ಕಳಿಗೆ ಕೊಡಬೇಕು ಎಂದು ಮಾಡಿದ್ದೇವೆ. ಆದರೆ ರಾಜ್ಯಾಂಗದಲ್ಲಿ ೬ ರಿಂದ ೧೪ ವರ್ಷದವರೆಗಿನ ಮಕ್ಕಳಿಗೆ ಕೊಡಬೇಕು ಎಂದು ಇದ್ದರೂ ಕೂಡ ನಾವು ೬ ರಿಂದ ೧೦ ವರ್ಷದ ಮಕ್ಕಳಿಗೆ ಕೊಡಬೇಕು ಎಂದು ನಿರ್ಣಯ ಮಾಡಿಕೊಂಡಿದ್ದೇವೆ ಇವತ್ತು ಇದನ್ನೂ ಕೂಡ ವ್ಯವಸ್ಥಿತ ರೂಪದಲ್ಲಿ ಕೊಡಲಿಕ್ಕೆ ಆಗಿಲ್ಲ. ಇದಕ್ಕೆ ಪೂರ್ವಭಾವಿಯಾಗಿ ಕಡ್ಡಾಯ ಶಿಕ್ಷಣ ಏನು ಇದೆ; ಇದು ಯಶಸ್ವಿಯಾಗಬೇಕಾದರೆ ಬಹುಶಃ ಪ್ರಿ ಪ್ರೈಮರಿ ಎಜುಕೇಷನ್ ಅಷ್ಟೇ ಪ್ರಾಮುಖ್ಯವಾದುದು ಎನ್ನುವುದನ್ನು ಅರ್ಥಮಾಡಿಕೊಂಡಿಲ್ಲವೋ ಅಥವಾ ಮಾಡಿಕೊಂಡಿದ್ದೀರೋ ಏನೇ ಆಗಲಿ ಈ ದಿಶೆಯಲ್ಲಿ ಸರ್ಕಾರ ಸರಿಯಾದಂಥ ವ್ಯವಸ್ಥೆ ಮಾಡಬೇಕು. ಇದಕ್ಕೆ ಹಣದ ಕೊರತೆ ಇದೆ ಯೆಂದು ಅರ್ಥವಾಗುತ್ತದೆ. ಪ್ರಿಪ್ರೈಮರಿ ಎಜುಕೇಷನ್‌ನ್ನು ಇವತ್ತು ಸರ್ಕಾರ ನೇರವಾಗಿ ವಹಿಸಿ ಕೊಳ್ಳುವುದಕ್ಕೆ ರಾಜ್ಯಾಂಗಬದ್ಧವಾಗಿ ಏನು ಅಂಥ ಸೂಚನೆ ಇಲ್ಲದೇ ಹೋದರೂ ಕೂಡ ನೈತಿಕ ಜವಾಬ್ದಾರಿ ಇವತ್ತು ಸರ್ಕಾರದ ಮೇಲಿದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಇದನ್ನು ಮನವರಿಕೆ ಮಾಡಿಕೊಂಡು ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡವುದರ ಮುಖಾಂತರ ಇವತ್ತು ಏನು ಒಂದು ಕಡ್ಡಾಯ ಶಿಕ್ಷಣ ಇದೆ ಅದನ್ನು ಯಶಸ್ವಿಗೊಳಿಸಲಿಕ್ಕೆ ಒಳ್ಳೆಯ ಅಡಿಪಾಯವಾಗುತದೆ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೇ, ಇವತ್ತು ಪಟ್ಟಣಗಳಲ್ಲಿ ಪ್ರಿ ಪ್ರೈಮರಿ ಎಜುಕೇಷನ್‌ನು ಕಾರ್ಪೊರೇಷನ್ ಆಗಲೀ ಅಥವಾ ಸ್ಥಾನೀಕ ಸಂಸ್ಥೆಗಳಾಗಲೀ ಸ್ವಲ್ಪಮಟ್ಟಿಗೆ ಅಲ್ಲಿ ಇಲ್ಲಿ ಕೆಲವೊಂದು ದೊರಕಿಸಿಕೊಟ್ಟಿದ್ದಾರೆ. ಉದಾಹರಣೆ ಹೇಳುವುದಾದರೆ ಬೆಂಗಳೂರು ನಗರದಲ್ಲಿ ಇರಬಹುದು, ಕೆಲವು ಕಡೆ ಕಾರ್ಪೊರೇಷನ್ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ ಎಂದು ಸಮಾಧಾನ ಪಟ್ಟುಕೊಳ್ಳಬೇಕಾಗಿಲ್ಲ, ಆದರೆ ಇನ್ನೂ ದೊಡ್ಡ ದೊಡ್ಡ ನಗರದಲ್ಲಿ ಅಂದರೆ ಹುಬ್ಬಳ್ಳಿ–ಧಾರವಾರ, ಮೈಸೂರು ಅಂತಹ ದೊಡ್ಡ ದೊಡ್ಡ ಪ್ರಮುಖ ಪಟ್ಟಣಗಳಲ್ಲಿ ಸ್ವಲ್ಪವಾದರೂ ಕೂಡ ವ್ಯಾಪಕ ರೀತಿಯಲ್ಲಿ ನಾವು ಆಲೋಚನೆ ಮಾಡುವುದಾದರೆ ಪ್ರಿ ಪ್ರೈಮರಿ ಎಜುಕೇಷನ್‌ಗೆ ಸಾಕಷ್ಟು ಪ್ರೋತ್ಸಾಹ ದೊರೆತಿಲ್ಲ ಎನ್ನುವ ದೃಷ್ಟಿ ಯಿಂದ ನಾನು ಈ ಮಾತನ್ನು ಹೇಳಬೇಕಾಗಿದೆ, ಗ್ರಾಮಾಂತರ ಪ್ರದೇಶದಲ್ಲಿ ಈ ಕಾರ್ಯ ಏನೇನೂ ನಡೆದಿಲ್ಲ ಎಂದು ಹೇಳಬೇಕಾಗುತ್ತದೆ. ಇವತ್ತು ಈ ಸಂಸ್ಥೆಗಳನ್ನು ನಡೆಸತಕ್ಕ ಜವಾಬ್ದಾರಿ ಸರ್ಕಾರ ಹೊತ್ತಿರತಕ್ಕ ಕಾಲದಲ್ಲಿ ನಾವು ಬೇರೆಯವರ ಮೇಲೆ ಅವರು ಆಶ್ರಯದಲ್ಲಿ ಬಿಡುವುದರಿಂದ ಖಾಸಗಿ ಸಂಸ್ಥೆಗಳು ಹಾಗೂ ಸ್ಥಾನಿಕ ಸಂಸ್ಥೆಗಳು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ಗಳು, ಪಂಚಾಯಿತಿಗಳು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಸೋಷಿಯಲ್ ವೆಲ್‌ಫೇರ್ ಬೋರ್ಡ್‌ಸಿ ಅಲ್ಲಿ ಇಲ್ಲಿ ಚೂರು ಪಾರು ಕೆಲಸಗಳನ್ನು ಮಾಡುವುದಕ್ಕೆ ಪ್ರಾರಂಭಮಾಡಿದರೂ ಕೂಡ ಇದರ ಒಂದು ವ್ಯವಸ್ಥೆ ನಮ್ಮ ಮನಸ್ಸಿಗೆ ಸಮಾಧಾನವಾಗತಕ್ಕ ರೀತಿಯಲ್ಲಿ ನಡೆದಿಲ್ಲ ಎಂದು ಅರ್ಥ ಮಾಡಿಕೊಂಡಿದ್ದೇನೆ. ಬಹುಶಃ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಿಲ್ಲ, ಆದರೆ ಈ ದಿಶೆಯಲ್ಲಿ ನಡೆಸಿಕೊಂಡು ಬಂದಿರತಕ್ಕ ಒಂದು ಕಾರ್ಯ ಅಷ್ಟೊಂದು ಸಮರ್ಪಕವಾಗಿಲ್ಲ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳಬೇಕಾಗಿದೆ,

ಮಾನ್ಯ ಸಭಾಧ್ಯಕ್ಷಿಣಿಯವರೇ ಇವತ್ತು ಪ್ರಿ ಪ್ರೈಮರಿ ಎಜುಕೇಷನ್ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಮೇಷ್ಟ್ರುಗಳಿಗೆ ಸೇವಾ ನಿಯಮ ಇಲ್ಲ, ಸಂಬಳಸಾರಿಗೆ ಬಗ್ಗೆ ಯಾವುದೇ ಒಂದು ನಿಯಮಗಳಿಲ್ಲ. ಒಂದೊಂದು ಸಾರಿ ಎಲ್ಲೂ ಹುದ್ದೆ ಸಿಕ್ಕದೆ ಇರತಕ್ಕ ಹೆಣ್ಣುಮಕ್ಕಳು ೫೦–೧೦೦ ರೂಪಾಯಿಗೆ ಕೂಡ ಇಲ್ಲದೆ ಇದ್ದಾರೆ. ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಅಲ್ಲಿ ಸರ್ಕಾರ ಗ್ರಾಂಟ್ ಕೊಡತಕ್ಕ ಪರಿಸ್ಥಿತಿ ಕೂಡ ಇಲ್ಲ. ಸರ್ಕಾರದವರು ಕೆಲವು ಕಡೆ ಗ್ರಾಂಟ್ ಕೊಡುತ್ತಾರೆ. ಕೆಲವು ಕಡೆ ಇಲ್ಲ. ಅಲ್ಲಿನ ಸಂಸ್ಥೆಗಳಿಗೆ ಯಾವುದೇ ಒಂದು ಸಹಾಯ ಕೂಡ ದೊರೆಯದೇ ಇರತಕ್ಕ ಪರಿಸ್ಥಿತಿ ಇದೆ. ಗ್ರಾಮಾಂತರ ಪ್ರದೇಶದಲ್ಲಿ ಸರಿಯಾದ ಕಟ್ಟಡಗಳಿಲ್ಲ. ಮಕ್ಕಳಿಗೆ ಆಟ ಆಡುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಪ್ರಿ ಪ್ರೈಮರಿ ಎಜುಕೇಷನ್ ತೆಗೆದುಕೊಡರೆ ಇದರಲ್ಲಿ ಮಕ್ಕಳಿಗೆ ಮಾನಸಿಕ ಬೆಳವಣಿಗೆಯಾಗಿ ಮುಂದೆ ಆ ಮಗು ಪ್ರೈಮರಿ ಎಜುಕೇಷನ್ ಬಂದಂಥ ಕಾಲದಲ್ಲಿ ಅವನು ಯೋಗ್ಯ ವಾದಂಥ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಅನುಕೂಲವಾಗತಕ್ಕ ಭೂಮಿಕೆಯನ್ನು ನಾವು ತಯಾರು ಮಾಡಬೇಕು. ಅದಕ್ಕೆ ಸಾಕಷ್ಟು ವ್ಯವಸ್ಥೆ ಮಾಡದೇ ಇರತಕ್ಕ ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ನಮ್ಮ ಕಡ್ಡಾಯ ಶಿಕ್ಷಣ ಏನಿದೆ ಅದು ಸಫಲವಾಗಲಿಕ್ಕೆ ನಾಂದಿಯಾಗುವುದಿಲ್ಲ ಎನ್ನುವ ದೃಷ್ಟಿಯಿಂದ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇನ್ನೊಂದು ವಿಷಯ ಏನೆಂದರೆ, ಯಾವ ಭಾಷೆಯಲ್ಲಿ ಮಕ್ಕಳಿಗೆ ತರಬೇತು ಮಾಡಬೇಕು ಎನ್ನುವುದು. ಮಕ್ಕಳ ಮಾನಸಿಕ ಬೆಳವಣಿಗೆಯಾಗಬೇಕಾದರೆ ವಿದ್ಯಾಭ್ಯಾಸ ಅವರು ಆಡತಕ್ಕ ಭಾಷೆಯಲ್ಲಿ ಅಥವಾ ಕಥೆ ಹೇಳತಕ್ಕ ಭಾಷೆಯಲ್ಲಿ ಮಾಡಬೇಕೇ ಯಾವ ಭಾಷೆಯಲ್ಲಿ ಮಾಡಬೇಕು ಎನ್ನುವುದು ಮುಖ್ಯ. ಕೆಲವು ಬೇರೆ ಬೇರೆ ಸಂಸ್ಥೆಗಳಿವೆ ಶಿಶುವಿಹಾರಗಳಿವೆ, ಬಾಲವಾಡಿಗಳಿವೆ ಅಲ್ಲಿ ಅವರಿಗೆ ಬೇಕಾದಂಥ ಇಂಗ್ಲೀಷ್ ಭಾಷೆಯಲ್ಲಿ ಬೇರೆ ಬೇರೆ ಭಾಷೆಯಲ್ಲಿ ಮಕ್ಕಳನ್ನ

ತರಪೇತು ಮಾಡುತ್ತಿದ್ದಾರೆ. ಇವೆಲ್ಲವನ್ನೂ ಪರಿಶೀಲನೆ ಮಾಡಬೇಕು. ಅನೇಕ ಸೇವಾ ನಿಯಮಗಳನ್ನು ಮಾಡಬೇಕು. ವಿದ್ಯಾಸಂಸ್ಥೆಗಳು ಕೆಲಸ ಮಾಡುವುದಕ್ಕೆ ಸರ್ಕಾರ ಹಣ ಕೊಡುತ್ತಿದೆ. ಆದರೆ ಈ ಸಂಸ್ಥೆಗಳು ಮೇಲುಸ್ತುವಾರಿಯನ್ನು ಯಾರೂ ಸರಿಯಾದ ನೋಡುತ್ತಾ ಇಲ್ಲ. ಹಳ್ಳಿಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಗ್ರಾಜುಯೇಟ್ಸ್ ಇನ್ಸ್‌ಪೆಕ್ಟರ್‌ಗಳ್ಸ್ ಕೆಲಸ ಮಾಡುತ್ತಾರೆ. ಅವರು ಪ್ರೈಮರಿ ಸ್ಕೂಲುಗಳನ್ನು ತನಿಕೆ ಮಾಡುತ್ತಾರೆ. ಗ್ರಾಜುಯೇಟ್ ಟೀಚರ್ಸ್‌ಗೆ ಸಾಮಾನ್ಯವಾಗಿ ಇದರ ಬಗ್ಗೆ ಅನುಭವ ಇರುವುದಿಲ್ಲ. ಅವನು ಬಿ.ಇ.ಡಿ. ಟ್ರೈನಿಂಗ್ ಪಾಸ್ ಮಾಡಿಕೊಂಡಿರುತ್ತಾನೆ. ಟೀಚರ್ ಮಕ್ಕಳಿಗೆ ಮಾನಸಿಕ ಬೆಳವಣಿಗೆ ಕೊಡತಕ್ಕ ಒಂದು ತಿಳುವಳಿಕೆ ಅವನಿಗೆ ಇದೆಯೋ ಇಲ್ಲವೇ ಎಂದು ನೋಡಬೇಕಾದರೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ, ಅವರಿಂದ ಸರಿಯಾದ ಒಂದು ಸೂಚನೆ ತರಿಸುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದು.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಕಲ್ಲಂಗಡಿ ಹಣ್ಣು ಎನ್ನುವುದಕ್ಕೆ ಸ್ಟೋನ್ ಶಾಪ್ ಫ್ರೂಟ್ ಎನ್ನುವಂಥ ಮಾಸ್ಟರ್‌ಗಳೇ ಏನೋ ಇರುವುದು ನಿಮ್ಮ ಹತ್ತಿರ.

ಶ್ರೀ ಎಚ್. ಡಿ. ದೇವೇಗೌಡ.— ಆದುದರಿಂದ ಈ ಸೇವಾ ನಿಯಮವೇನಿದೆ ಇದನ್ನು ಸ್ವಲ್ಪ ಮಾರ್ಪಾಡು ಮಾಡಬೇಕಾಗಿದೆ. ಇದನ್ನು ಟೀಕೆ ಮಾಡಬೇಕೆಂದು ಅಲ್ಲ. ನೀವು ಆದಷ್ಟು ಅಭ್ಯರ್ಥಿಗಳನ್ನು ನೇಮಕ ಮಾಡುವಾಗ ಸರಿಯಾದ ಅಭ್ಯರ್ಥಿಗಳನ್ನೇ ನೇಮಕ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು ಎನ್ನತಕ್ಕಂಥ ಮಾತನ್ನು ತಮಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಇದನ್ನು ಮಾಡದೇ ಹೋದರೆ ನಾನು ಹೇಳುತ್ತೇನೆ ಬಹುಶಃ ಇದರ ಒಂದು ಗುಣ ಮಟ್ಟವನ್ನು ಹೆಚ್ಚಿಸಲಿಕ್ಕೆ ಸಾಧ್ಯವಿಲ್ಲ, ಸಾಧ್ಯವೂ ಆಗುವುದಿಲ್ಲ. ಆದುದರಿಂದ ಇವತ್ತು ಸ್ವಲ್ಪ ಪರಿಣಿತರನ್ನು ಕರೆಸಿ ಅವರೊಡನೆ ತಾವು ಸಮಾಲೋಚನೆ ಮಾಡಿ ಇದರ ಬಗ್ಗೆ ಪರಿಶ್ರಮವಿರತಕ್ಕಂಥ ಹಿರಿಯ ಅಧಿಕಾರಿಗಳೊಡನೆ ಕುಳಿತು, ಸಮಾಲೋಚನೆ ಮಾಡಿ ನೀವು ನಿಬಂಧನೆಗಳನ್ನು ಹಾಕಬೇಕು ಏಕೆಂದು ಹೇಳಿದರೆ, ಹಿಂದೆ ಪೂರ್ವ ಕಾಲದಲ್ಲಿ ನಾವು ಪ್ರೈಮರಿ ಸ್ಕೂಲ್‌ನಲ್ಲಿ ಓದುವಾಗ ಸಂಜೆ ೭ ಗಂಟೆಯಾದಮೇಲೆ, ಸ್ಕೂಲ್ ಬಿಟ್ಟಮೇಲೆ ನಮ್ಮನ್ನೆಲ್ಲಾ ಕೂರಿಸಿಕೊಂಡು ಕಥೆಗಳನ್ನು ಹೇಳುತ್ತಿದ್ದರು. ನಾನು ಹೇಳುತ್ತಿರುವುದನ್ನು ಅನ್ಯಥಾ ಭಾವನೆ ಮಾಡಬೇಡಿ ಜಾತಿ ಆಧಾರದಮೇಲೆ ಉಪಾಧ್ಯಾಯರುಗಳನ್ನು ನೇಮಕ ಮಾಡಿದ ಮೇಲೆ ಇದು ಒಂದು ಅನಾಹುತ ವಾಯಿತೇನೋ ಎಂದು ಅನ್ನಿಸುತ್ತದೆ. ಅನೇಕರು ಸ್ಕೂಲ್ ಬಿಟ್ಟಮೇಲೆ ತಕ್ಷಣ ಓಡಿ ಹೋಗುತ್ತಾರೆ, ಕೋರ್ಟಿಗೋ, ಕಛೇರಿಗೋ, ಹೊಲಕ್ಕೋ, ತಮ್ಮ ತಮ್ಮ ಕೆಲಸ ನೋಡಿಕೊಳ್ಳಲು ಹೊರಟು ಹೋಗುತ್ತಾರೆ. ಆದರೆ ಹಿಂದೆ ನಾವು ಓದುವಾಗ ಬ್ರಾಹ್ಮಣರು ಇದ್ದರು, ಅವರು ಸಂಜೆ ೭ ಗಂಟೆಯಾದ ಮೇಲೆ ಎಲ್ಲಾ ಮಕ್ಕಳನ್ನೂ ಕೂರಿಸಿಕೊಂಡು ಪಾಠ ಹೇಳುತ್ತಿರಲಿಲ್ಲ. ಮಹಾಭಾರತದ ಬಗ್ಗೆ, ರಾಮಾಯಣದ ಬಗ್ಗೆ ವಿಷಯಗಳನ್ನು ತಿಳಿಸುತ್ತಿದ್ದರು. ಆದರೆ ಇವತ್ತು ಅವರು ಚಕ್ಕರ್ ಹೊಡೆಯುವುದಕ್ಕೆ ಶುರು ಮಾಡಿದ್ದಾರೆ. ಅವರೂ ಕದಿಯುವುದಕ್ಕೆ ಶುರು ಮಾಡಿದ್ದಾರೆ. ಮುಖ್ಯವಾಗಿ ಇವತ್ತು ಈ ರಂಗದಲ್ಲಿ ಶ್ರತ್ರಮವಾಗಿ ಕೆಲಸಮಾಡತಕ್ಕಂಥ ಶಿಕ್ಷಕರು ಸಿಕ್ಕುವುದು ಕಷ್ಟದ ಪರಿಸ್ಥಿತಿ ಬಂದಿದೆ. ಏತಕ್ಕೆಂದರೆ ನೀವು ಯೋಗ್ಯರಾದಂಥವರಿಗೆ ಚೆನ್ನಾಗಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರುಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಡುವುದಿಲ್ಲ. ಯಾರು ಇವತ್ತು ಚುನಾವಣೆಯ ಸಂದರ್ಭದಲ್ಲಿ ಯಾರು ಪ್ರೋತ್ಸಾಹ ಕೊಡುತ್ತಾನೆ ಅವನಿಗೆ ಪ್ರಮೋಷನ್ ಎಲ್ಲಾ ಕೊಡುವುದು, ಯಾರು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಕೆಲಸ ಮಾಡುತ್ತಾನೆ ಅವನಿಗೆ ಪ್ರೋತ್ಸಾಹ ಕೊಡದೆ ಇರುವುದರಿಂದ ಈ ಒಂದು ವಾತಾವರಣ ಬೆಳೆದಿದೆ. ಅದಕ್ಕೋಸ್ಕರ ನಾನು ನಿಮಗೆ ಈ ರಿಕ್ರೂಟ್‌ಮೆಂಟ್ ಬಗ್ಗೆ ಸ್ವಲ್ಪ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬರೀ ಅವನ ಪರ್ಸನಾಲಿಟಿ ನೋಡಿ, ಅವನ ಕ್ವಾಲಿಫಿಕೇಷನ್ ನೋಡದೇ ಅವನಿಗೆ ಆ ವಿಷಯದಲ್ಲಿ ಸಾಕಷ್ಟು ಶ್ರದ್ಧೆ ಇದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕು. ಮಕ್ಕಳ ಮೇಲೆ ಅವನಿಗೆ ಪ್ರೇಮವಿದೆಯೋ ಇಲ್ಲವೋ ಎನ್ನುವವನ್ನು ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಮತ್ತು ಆತನ ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್ ಏನು ಎಂಬುದನ್ನು ಇಂಟರ್‌ವ್ಯೂನಲ್ಲಿ ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಒಬ್ಬ ಮೇಸ್ಟರು ಪಾಠ ಮಾಡದೆ ಇಸ್ಪೀಟ್ ಆಡುತ್ತಿದ್ದರು ಅವರನ್ನು ಹಿಡಿದು ಹಾಕಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.— ನಾನು ಸ್ವಲ್ಪ ದಿವಸ ಟೀಚರ್ ಆಗಿ ಕೆಲಸ ಮಾಡಿದ್ದೇನೆ. ಒಬ್ಬ ಮಾಸ್ಟರ್‌ರವರು ಬುದ್ಧಿವಂತರಿದ್ದರು. ಅವರು ಪ್ರತಿದಿನವೂ ೮-೧೦ ಮೈಲಿಗಳಿಂದ ನಡೆದುಕೊಂಡು ಬರಬೇಕು. ಅವರು ಪಾಠ ಮಾಡಿ ಮಧ್ಯಾಹ್ನ ಬಿಸಿಲಿನಲ್ಲಿ ಬನಿಯನ್ ಶರ್ಟ್ ಎಲ್ಲಾ ಬಿಚ್ಚಿ ಇಸ್ಪೀಟ್ ಆಟ ಆಡುತ್ತಿದ್ದರು. ಆಗ ಅದೇ ಸಮಯಕ್ಕೆ ಒಬ್ಬ ಇನ್ಸ್‌ಪೆಕ್ಟರ್‌ರವರು ಚೆಕಿಂಗ್ ಹೋಗುತ್ತಾರೆ, ಹೋದಾಗ ಆ ಮಾಸ್ಟರ್ ಬಹಳ ಜಾಣ್ಮೆಯಿಂದ ಎದ್ದು ನಿಂತಾಗ ಈವಾಗ ಅಸ್ತಿಪಂಜರದ ರಚನೆ ಹೇಗೆ ಎಂದು ಹೇಳುತ್ತಿದ್ದೆ ಸಾರ್ ಎಂದು ಇನ್ಸ್‌ಪೆಕ್ಟರ್‌ರವರಿಗೆ ಹೇಳುತ್ತಾನೆ. ಆ ದಕ್ಷ ತನಿಖಾಧಿಕಾರಿ ಇನ್ಸ್‌ಪೆಕ್ಟರ್‌ರವರಿಗೆ ಇವನು ಶೆಖೆ ಬೀಸಿಕೊಳ್ಳುವುದಕ್ಕಾಗಿ ಶರ್ಟು ಬಿಚ್ಚಿದ್ದನೆಂದು ಏನು ಗೊತ್ತು ?

ಶ್ರೀ ಬಿ. ಪುಟ್ಟಸ್ವಾಮಯ್ಯ.— ಆ ಮಾಸ್ಟರ್‌ರವರು ನಿಮ್ಮ ಸೈಡ್ ಇದ್ದರೋ ಅಥವಾ ಶಾಂತಣ್ಣನವರ ಸೈಡೋ ?

ಶ್ರೀ ಎಚ್. ಡಿ. ದೇವೇಗೌಡ.— ಇವತ್ತು ಉಪಾಧ್ಯಾಯರುಗಳು ಬಹಳ ಮುಂದೆ ಹೋಗಿದ್ದಾರೆ. ಈ ಒಂದು ವಿಷಯದಲ್ಲಿ ಮಕ್ಕಳಿಗೆ ಪಾಠ ಕಲಿಸಿಕೊಡುವುದರಲ್ಲಿ ಶ್ರದ್ಧೆ ಕಡಿಮೆಯಾಗಿದೆ. ಆದುದರಿಂದ ರಿಕ್ರೂಟ್‌ಮೆಂಟ್ ಬಗ್ಗೆ ತಾವು ದಯವಿಟ್ಟು ಪುನರ್‌ಪರಿಶೀಲನೆ ಮಾಡಬೇಕೆಂದು ತಿಳಿಸಲಿಚ್ಛಿಸುತ್ತೇನೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಬಹುತೇಕ ಸಿಂಗಲ್ ಟೀಚರ್ಸ್ ಸ್ಕೂಲ್‌ಗಳಿವೆ. ಅವುಗಳ ಪರಿಸ್ಥಿತಿಯನ್ನು ಹೇಳಲಿಕ್ಕೆ ಮನಸ್ಸಿಗೆ ತುಂಬಾ ವೇದನೆಯಾಗುತ್ತದೆ. ಏಕೆಂದರೆ ಕಾರಣ ಇಷ್ಟೆ. ಒಂದೊಂದು ಕಡೆ ೩-೪ ತರಗತಿಗಳಿರುತ್ತವೆ. ಒಬ್ಬ ಟೀಚರ್ ಎಲ್ಲಾ ತರಗತಿಯ ಮಕ್ಕಳನ್ನೂ ಕೂಡ ನೋಡಿಕೊಳ್ಳಬೇಕಾಗುತ್ತದೆ. ಕೆಲವೊಂದು ಶಾಲೆಗಳಲ್ಲಿ ೪೦-೪೫-೫೦ ಮಕ್ಕಳು ಇರುವಂತಹ ಸನ್ನಿವೇಶ ಇರುತ್ತದೆ. ಸಿಂಗಲ್ ಟೀಚರ್ಸ್ ಸ್ಕೂಲ್‌ಗಳಲ್ಲಿ ಹೆಚ್ಚು ಹುಡುಗರಿದ್ದರೆ ಸರ್‌ಪ್ಲಸ್ ಇರುವ ಕಡೆಗಳಿಂದ ಉಪಾಧ್ಯಾಯರನ್ನು ಡೆಪ್ಯುಟೇಷನ್ ಕಳುಹಿಸಿಕೊಡಿ. ಆಕೆ ತರಗತಿಯ ಮಕ್ಕಳಿಗೆ ಪಾಠ ಹೇಳುವ ಶಕ್ತಿ, ಪರಿಜ್ಞಾನ ಆ ಉಪಾಧ್ಯಾಯನಲ್ಲಿರಬೇಕು. ಆದರೆ ಅನೇಕರಿಗೆ ಈ ಮಾಹಿತಿ ಇರುವುದಿಲ್ಲ. ಅಂಥವರು ಆ ಜೋಗಿನ ಗೌಡರನ್ನೊ ಅಥವಾ ಡೆವಲಪ್‌ಮೆಂಟ್ ಕಮಿಟಿಯ ಮೆಂಬರನ್ನೊ ಸೇರಿಸಿಕೊಂಡು ಬೀಡಿ ಸೇದುತ್ತಾ ಕುಳಿತಿರುತ್ತಾರೆ. ಮಕ್ಕಳು ಇನ್ನೆಲ್ಲೊ ಹರಟೆ ಹೊಡೆಯುತ್ತಾ ಇರುತ್ತಾರೆ. ಅಲ್ಲಿಯ ಅವ್ಯವಸ್ಥೆಯನ್ನು ಹೇಳತೀರದು. ದುರ್ದೈವದಿಂದ ಆ ಉಪಾಧ್ಯಾಯರು ರಜಾ ಹೋದರೆ ಆ ಸ್ಕೂಲ್ ಬಾಗಿಲು ಮುಚ್ಚಿಯೇ ಇರುತ್ತದೆ. ಬೇಕಾದರೆ ತಾವು ಇನ್‌ಫರ್ಮೇಷನ್ ತರಿಸಿಕೊಂಡು ನೋಡಿ. ಎಷ್ಟು ಸಿಂಗಲ್ ಟೀಚರ್ಸ್ ಸ್ಕೂಲ್‌ಗಳಲ್ಲಿ ಉಪಾಧ್ಯಾಯರುಗಳು ರಜಾ ಹೋದರೆ ಮತ್ತೆ ಅವರು ವಾಪಸ್ಸು ಬರುವವರೆಗೂ ಆ ಶಾಲೆಗಳು ಖಾಲಿ ಬಿದ್ದಿರುತ್ತವೆ ಮತ್ತು ಬೀಗ ಹಾಕಿರುತ್ತದೆ ಎಂಬುದನ್ನು. ಇದಕ್ಕೆಲ್ಲಾ ಅವಕಾಶವನ್ನು ಕೊಡಬಾರದು. ಯಾರಾದರೂ ಒಬ್ಬ ಉಪಾಧ್ಯಾಯರು ೨ ತಿಂಗಳು ರಜಾ ಹೋದರೂ ಕೂಡ ಅವರ ಜಾಗಕ್ಕೆ ಇನ್ನೊಬ್ಬರನ್ನು ನೇಮಕ ಮಾಡಿ, ಇಲ್ಲದೇ ಹೋದರೆ ಸರ್‌ಪ್ಲಸ್ ಇರುವ ಕಡೆಯಿಂದ ಅಲ್ಲಿಗೆ ಡೆಪ್ಯೂಟ್ ಮಾಡಿ. ತಾವು ಹಾಗೆ ಮಾಡದೆ ಹೋದರೆ ಅಲ್ಲಿನ ಮಕ್ಕಳ ಮನಸ್ಸು ಬೇರೆ ಕಡೆಗೆ ತಿರುಗುತ್ತದೆ. ಇವತ್ತಿನ ದಿವಸ ಒಬ್ಬ ರೈಲ್ವೆ ಸ್ಟೇಷನ್ ಮಾಸ್ಟರ್ ರಜಾ ಹೋದರೆ ಕೇವಲ ಒಂದು ದಿವಸದ ಮಟ್ಟಿಗೆ ಅಲ್ಲಿಗೆ ಒಬ್ಬ ರಿಲೀವಿಂಗ್ ಸ್ಟೇಷನ್ ಮಾಸ್ಟರನ್ನು ಹಾಕುತ್ತೇವೆ. ಅಂಥಾದ್ದರಲ್ಲಿ ೨-೩ ತಿಂಗಳು ರಜಾ ಹೋದರೂ ಕೂಡ ಅಲ್ಲಿ ಕೇಳುವವರಿರುವುದಿಲ್ಲ. ತಾವು ಬೇಕಾದರೆ ಒಂದೊಂದು ತಾಲ್ಲೂಕಿಗೂ ೫ ಜನ ಅಥವಾ ೧೦ ಜನ ಉಪಾಧ್ಯಾಯರನ್ನು ಸರ್‌ಪ್ಲಸ್ ಆಗಿ ಅಪಾಯಿಂಟ್ ಮಾಡಿ ಇಟ್ಟುಕೊಳ್ಳಿ. ಇದರಿಂದ ಸರ್ಕಾರಕ್ಕೆ ಅಡಿಷನಲ್ ಬರ್ಡನ್ ಆದರೂ ಚಿಂತೆಯಿಲ್ಲ. ಈ ರೀತಿ ಎಲ್ಲೆಲ್ಲಿ ರಜಾ ಹೋಗುತ್ತಾರೆ ಅಂಥ ಕಡೆಗಳಿಗೆ ಇವರನ್ನು ಕಳುಹಿಸಿಕೊಡಿ. ಹಾಗೇನಾದರೂ ರಜಾ ಹೋಗದೆ ಇದ್ದ ಪಕ್ಷದಲ್ಲಿ ಹೈಯರ್, ಪ್ರೈಮರಿ ಸ್ಕೂಲ್‌ಗಳಿಗೆ ಎಕ್ಸ್‌ಟ್ರಾ ವರ್ಕ್‌ಗೆ ಹಾಕಿ, ಅಲ್ಲಿ ಕೆಲಸ ಮಾಡುತ್ತಾರೆ. ಸರ್ಕಾರ ಈ ವಿಷಯದಲ್ಲಿ ಅತಿ ಶೀಘ್ರವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿ ಸೂಚಿಸಬಯಸುತ್ತೇನೆ. ಬೇಕಾದರೆ ೨-೩ ತಿಂಗಳಿಗೆ ತಾತ್ಕಾಲಿಕವಾಗಿ ಬೇಕಾಗುವ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಎ.ಇ.ಓ ಗೆ ಅಧಿಕಾರವನ್ನು ಕೊಡಿ. ಉಪಾಧ್ಯಾಯರುಗಳು ರಜಾ ಹೋದರೂ ಕೂಡ ಶಾಲೆಗಳನ್ನು ನಡೆಸತಕ್ಕ ಹೊಣೆಗಾರಿಕೆ ಸರ್ಕಾರಕ್ಕೆ ಸೇರಿದ್ದು. ಹಿಂದೆ ಇದ್ದವರು ಯಾರೂ ಕೂಡ ಈ ರೀತಿ ಮಾಡದೆ ಇರುವುದರಿಂದ ನಾನು ತಮಗೆ ಈ ಸೂಚನೆಯನ್ನು ಕೊಡಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷಿಣಿಯವರೆ, ಇವತ್ತು ನಮ್ಮ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸತಕ್ಕಂಥಾದ್ದು ನಮ್ಮ ಇನ್‌ಸ್ಪೆಕ್ಟೊರೇಟ್‌ಗೇ ಸೇರಿದ್ದು. ೭೫ ಶಾಲೆಗಳಿಗೆ ಒಬ್ಬ ಇನ್‌ಸ್ಪೆಕ್ಟರ್ ಎಂದು ಮಾಡಿದ್ದಾರೆ. ಒಂದು ತಾಲ್ಲೂಕಿಗೆ ೩-೪-೫-೬ ಜನ ಇನ್‌ಸ್ಪೆಕ್ಟರ್‌ಗಳಿರುತ್ತಾರೆ, ಅವರೆಲ್ಲರೂ ಗ್ರಾಜುಯೇಟ್ಸ್. ಉಪಾಧ್ಯಾಯರು ಎಂದರೆ ಮಕ್ಕಳ ಮನಸ್ಸಿನ ಮೇಲೆ ಮಾನಸಿಕವಾಗಿ ಪರಿಣಾಮ ಉಂಟು ಮಾಡುವಂತೆ ಪಾಠ ಹೇಳುವ ಶಕ್ತಿ ಹೊಂದಿರಬೇಕು. ಈಗ ಬಿ.ಇಡಿ. ಟ್ರೈನಿಂಗ್ ಮಾಡಿಕೊಂಡು ಬರುವವರಿಗೆ ಈ ರಂಗದಲ್ಲಿ ಸಾಕಷ್ಟು ಮಾಹಿತಿ ಇರುವುದಿಲ್ಲ. ಜೊತೆಗೆ ಹೆಚ್ಚಿನ ಪರಿಣತಿಯನ್ನೂ ಕೂಡ ಹೊಂದಿರುವುದಕ್ಕೆ ಸಾಧ್ಯವಿಲ್ಲ. ನಾವು ಓದುತ್ತಿದ್ದ ಕಾಲದಲ್ಲಿ ಪ್ರೈಮರಿ ಶಾಲೆಗಳಿಗೆ ಇನ್‌ಸ್ಪೆಕ್ಟರ್ ಬಂದರೆ ಉಪಾಧ್ಯಾಯರುಗಳಿಗೇ ಪಾಠ ಮಾಡಿ ತೋರಿಸಿಕೊಡುವ ವ್ಯವಸ್ಥೆ ಇತ್ತು. ಈಗಿನ ಈ ಒಂದು ವ್ಯವಸ್ಥೆಯನ್ನು ಬಹುಶಃ ಮಾರ್ಪಾಡು ಮಾಡಬೇಕಾಗುತ್ತದೆಂದು ನನಗನಿಸುತ್ತದೆ. ಹಿಂದೆ ಪ್ರೈಮರಿ ಸ್ಕೂಲ್‌ಗಳಲ್ಲಿ, ಮಿಡಲ್ ಸ್ಕೂಲ್‌ಗಳಲ್ಲಿ ಹೆಡ್‌ಮಾಸ್ಟರ್ ಆಗಿ, ಅಥವಾ ೨೫ ವರ್ಷಗಳು ಸರ್ವೀಸ್ ಆಗಿದ್ದಂಥವರನ್ನು ಡೆಪ್ಯುಟಿ ಇನ್‌ಸ್ಪೆಕ್ಟರ್‌ಗಳಾಗಿ ಒಂದೊಂದು ತಾಲ್ಲೂಕಿಗೆ ನೇಮಕ ಮಾಡುತ್ತಿದ್ದರು. ಈಗಲೂ ಕೂಡ ಹಿಂದಿನ ಪದ್ಧತಿಯನ್ನೇ ಪುನರ್ ಪರಿಶೀಲನೆ ಮಾಡುವುದು ಉಚಿತವೆಂದು ನನಗನಿಸುತ್ತದೆ. ವಿದ್ಯಾರಂಗದಲ್ಲಿ ಅವರಿಗೆ ಹೆಚ್ಚು ಅನುಭವ ಮತ್ತು ಮಾಹಿತಿ ಇರುವುದರಿಂದ ಅವರನ್ನು ಉಳಿಸಿಕೊಳ್ಳು

ವುದು ಒಳ್ಳೆಯದು. ಇಲ್ಲದೆ ಹೋದ ಪಕ್ಷದಲ್ಲಿ ಈಗಿರುವವರಿಗೇ ಒಂದು ಷಾರ್ಟ್ ಟ್ರೈನಿಂಗ್ ಕೋರ್ಸ್ ಎಂದು ಮಾಡಿ ಅವರಿಗೆ ಇದರ ಬಗ್ಗೆ ಹೆಚ್ಚು ಮಾಹಿತಿಯನ್ನು ದೊರಕಿಸಿಕೊಟ್ಟು ಉತ್ತಮ ರೀತಿಯಲ್ಲಿ ಅವರು ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸಲಹೆ ಮಾಡಲಿಚ್ಛಿಸುತ್ತೇನೆ. ಇವತ್ತು ಇನ್‌ಸ್ಪೆಕ್ಷನ್ ಮಾಡತಕ್ಕಂಥ ಒಂದು ಕ್ರಮವನ್ನು ನೋಡಿದರೆ ಅದು ಅಷ್ಟು ಸಮರ್ಪಕವಾಗಿಲ್ಲ. ಇದು ನನ್ನ ವೈಯುಕ್ತಿಕವಾದ ಮತ್ತು ಸ್ಪಷ್ಟವಾದ ಅಭಿಪ್ರಾಯ. ಇವತ್ತಿನ ದಿವಸ ಉಪಾಧ್ಯಾಯರು ಯಾವ ರೀತಿಯಲ್ಲಿ ಹುಡುಗರಿಗೆ ಪಾಠ ಹೇಳಿಕೊಡುತ್ತಾರೆ ಎಂಬುದನ್ನು ನೋಡಿ ಅವರಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ತಿದ್ದಬೇಕಾಗುತ್ತದೆ. ಈ ರೀತಿಯಾದ ಸುಧಾರಣೆಗಳನ್ನು ಮಾಡಿದರೆ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿನ ರೀತಿಯಲ್ಲಿ ಮಾರ್ಪಾಡು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಮತ್ತೊಂದು ಮಾತು ಹೇಳಬೇಕೆಂದರೆ ಕಂಪಲ್ಸರಿ ಎಜುಕೇಷನ್ ಪೂರ್ಣ ರೀತಿಯಲ್ಲಿ ಯಶಸ್ವಿಯಾಗುವುದಕ್ಕೆ ಕೆಲವು ಲೋಪದೋಷಗಳಿವೆ. ಇವತ್ತಿನ ದಿವಸ ನಮ್ಮ ಮಕ್ಕಳ ಪೋಷಕರು ಏನಿದ್ದಾರೆ ಅವರ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ, ಹಾಗೂ ಸರ್ಕಾರದ ಆಡಳಿತದಲ್ಲಿರತಕ್ಕ ದೋಷಗಳು, ಹೀಗೆ ಹಲವಾರು ಕಾರಣಗಳಿಂದ ಇವತ್ತು ಈ ಒಂದು ಕಂಪಲ್ಸರಿ ಎಜುಕೇಷನ್ ಯಶಸ್ವಿಯಾಗುವುದಕ್ಕೆ ಸಾಧ್ಯವಾಗಿಲ್ಲ.

ನಾನು ಕೇಳಿದ್ದೇನೆ ಅನೇಕ ವಿದ್ಯಾಶಾಲೆಗಳಲ್ಲೂ ಕೂಡ ಹಿಂದೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಂಥ ಕಾಲದಲ್ಲಿ ಬಹಳ ಮುಂದುವರಿದಂಥ ರಾಷ್ಟ್ರಗಳು ಏನು ಇವೆ, ಆ ರಾಷ್ಟ್ರಗಳಲ್ಲಿಯೂ ಕೂಡ ನಾನು ಕೇಳಿದ್ದೇನೆ. ಮೇನ್‌ಟೆನೆನ್ಸ್ ಅಲೋಯೆನ್ಸ್ ಗ್ರ್ಯಾಂಟ್ ರೂಪದಲ್ಲಿ ಕೊಟ್ಟಿದ್ದಾರೆ. ಬಹಳ ಕಡುಬಡವರು ಮಕ್ಕಳನ್ನು ಜೀತಕ್ಕೆ ಇರಿಸಿದರೆ ಮೂರು, ನಾಲ್ಕು, ಹತ್ತು ರೂಪಾಯಿಗಳು ಸಿಕ್ಕುತ್ತದೆ ಎನ್ನುವವರು ಇದ್ದಾರೆ ನಾಲ್ಕು ವರ್ಷದ ಮಕ್ಕಳು ದನ ಕಾಯುತ್ತಾರೆ. ನಿಮ್ಮ ವರ್ಗದವರೇ ಇರಲಿ ಬೇರೆ ಯಾರಾದರೂ ಆಗಲಿ ತಂದೆ ತಾಯಿಗಳಿಗೆ ದುಡಿದುಕೊಂಡು ಬರುತ್ತಾರೆ, ೧೦ ರೂಪಾಯಿಗಳನ್ನು ಸಂಪಾದನೆ ಮಾಡುತ್ತಾರೆ. ಅವರಿಗೆ ಆ ಕಡೆ ಗಮನ ಹೋಗುತ್ತದೆ. ಶಾಲೆಗೆ ಮಕ್ಕಳನ್ನು ಕಳುಹಿಸಬೇಕು ಎನ್ನುವ ಕಡೆ ಗಮನ ಹೋಗುವುದಿಲ್ಲ. ಈ ರೀತಿಯಾದ ಮೇನ್‌ಟೆನೆನ್ಸ್ ಗ್ರ್ಯಾಂಟನ್ನು ಕೊಡುವುದರ ಮುಖಾಂತರ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಈ ಒಂದು ಕಾರ್ಯವನ್ನು ಜಾರಿಗೆ ತರತಕ್ಕಂಥದ್ದು ಅವಶ್ಯಕವೆಂದು ನನ್ನ ಭಾವನೆ ಇದೆ.

ಇನ್ನು ಮುಂದುವರಿದ ರಾಷ್ಟ್ರಗಳಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಂಥ ಕಾಲದಲ್ಲಿ ಅಲ್ಲೂ ಕೂಡ ಒಂದು ರೀತಿಯಾದ ಪ್ರೋತ್ಸಾಹ ಸಿಕ್ಕಲಿಲ್ಲ ಬೇರೆ ಕಡೆ ಕೆಲಸ ಮಾಡಿದರೆ ಹೆಚ್ಚಿಗೆ ಕಾಸು ಸಿಕ್ಕುತ್ತದೆ ಎನ್ನುವುದು ಮುಂದುವರಿದ ರಾಷ್ಟ್ರಗಳಲ್ಲೂ ಇತ್ತು ಎಂದು ಕೇಳಿದ್ದೇನೆ. ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ, ಮೇನ್‌ಟೆನೆನ್ಸ್ ಗ್ರ್ಯಾಂಟನ್ನು ಕೊಟ್ಟು ಮಕ್ಕಳು ಶಾಲೆಗೆ ಬರುವುದಕ್ಕೆ ಪ್ರೋತ್ಸಾಹ ಕೊಡುವ ನಿರ್ಣಯವನ್ನು ತೆಗೆದುಕೊಂಡರೆಂದು ಕೇಳಿದ್ದೇನೆ, ಈ ದಿಸೆಯಲ್ಲಿ ಸರ್ಕಾರ ಆಲೋಚನೆ ಮಾಡಿದರೆ ಈ ಒಂದು ಕಡ್ಡಾಯ ಶಿಕ್ಷಣವನ್ನು ಬಹಳ ಆಶಾದಾಯಕವಾದ ರೀತಿಯಲ್ಲಿ ನಾವು ಕಾರ್ಯರೂಪಕ್ಕೆ ತರಲಿಕ್ಕೆ ಸಾಧ್ಯವಾಗುತ್ತದೆಂದು ಸಲಹೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ನಾವು ಶಿಕ್ಷಣವನ್ನು ಕಡ್ಡಾಯ ಮಾಡಬೇಕು ಆದರೆ ಅದನ್ನು ಹೇಗೆ ಮಾಡಬೇಕು ಎಂದರೆ ಈವತ್ತು ನನ್ನ ಕಟುವಾದ ಅನುಭವದಲ್ಲಿ ಹೇಳುವುದಾದರೆ ಅದನ್ನು ಅಷ್ಟು ಯಶಸ್ವಿಯಾಗಿ ಜಾರಿಗೆ ತರುವುದಕ್ಕಾಗುವುದಿಲ್ಲ. ಸರ್ಕಾರ ಈ ಸಲಹೆಯನ್ನು ಪರಿಶೀಲನೆ ಮಾಡಬೇಕು. ಸ್ಟ್ಯಾಗನೇಷನ್ ಎಷ್ಟಾಗುತ್ತದೆ ಎಂದು ಹೇಳುವಾಗ ಎಷ್ಟು ಹಣವನ್ನು ವ್ಯಯ ಮಾಡುತ್ತಾರೆ, ಪ್ರತ್ಯಕ್ಷವಾಗಿ ಸರ್ಕಾರದ ಮೇಲೆ ಬೀಳತಕ್ಕ ಭಾರದ ಬಗ್ಗೆ ಮಾತನಾಡುತ್ತೇನೆ. ಸಮಾಜದಲ್ಲಿ ಕಡುಬಡವರ ಮಕ್ಕಳು ಏನಿದ್ದಾರೆ ಅವರ ಪೋಷಕರಿಗೆ ಕೊಡುವ ಹಣ ಏನು ಇದೆ ಅದು ಅಷ್ಟು ಭಾರವಾಗಲಾರದು. ಇದನ್ನು ಪರಿಶೀಲನೆ ಮಾಡಬೇಕು ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ ಪ್ರೋಗ್ರಾಮ್ ಮತ್ತು ರೀಸರ್ಚ್ ಬಗ್ಗೆ ಒಂದು ಸಲಹೆಯನ್ನು ಕೊಡುವುದಾದರೆ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಷನ್ ೧೯೬೧ರಲ್ಲಿ ರಾಷ್ಟ್ರ ಮಟ್ಟದಲ್ಲಿ ಸ್ಥಾಪನೆಯಾಗಿ ಇಂದು ಅಸ್ತಿತ್ವಕ್ಕೆ ಬಂದಿದೆ. ಅದೇ ಆಧಾರದ ಮೇಲೆ ಸ್ಟೇಟ್ ಕೌನ್ಸಿಲ್ ಮಾಡಬೇಕು ಎಂದು ನಿರ್ಣಯ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಕೂಡ ಇದರ ಬಗ್ಗೆ ನಿರ್ಣಯ ಮಾಡಿ ಕೇಳಿದ್ದರೂ ಕೂಡ ಅದು ಕಾರ್ಯರೂಪಕ್ಕೆ ಬಂದಿಲ್ಲ ಬಹುಶಃ ಇದಕ್ಕೆ ಹಣದ ಆತಂಕವನ್ನು ಮುಂದೆ ಬರಬಹುದು ಎಂದು ತಿಳಿದುಕೊಂಡಿದ್ದೇನೆ. ವಿದ್ಯಾನಗರ, ಚಿಕ್ಕಬಳ್ಳಾಪುರ ರೋಡಿನಲ್ಲಿ ೮೦ ಎಕರೆ ಭೂಮಿ ಇದೆ ಎಂದು ಕೇಳಿದ್ದೇನೆ, ಅಲ್ಲಿ ಎರಡು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ರನ್ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೇನೆ, ಆಂಧ್ರಪ್ರದೇಶದಲ್ಲಿ ಈಗಾಗಲೇ ಕಾರ್ಯರೂಪಕ್ಕೆ ಇದನ್ನು ತಂದಿದ್ದಾರೆ. ಈ ದಿಸೆಯಲ್ಲಿ

ತಾವು ಈ ಕೆಲಸಗಳನ್ನು ಮಾಡಬೇಕೆಂದು ನಾನು ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ವಿಚಾರ ಟೀಚರ್ಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಏನು ಇವೆ ಅದು ಒಂದು ರೀತಿಯಾದ ಸೈಕಲಾಜಿಕಲ್ ಆಗಿ ಉಪೇಕ್ಷಿಸಲ್ಪಟ್ಟ ಸಂಸ್ಥೆ ಇದ್ದ ಹಾಗೆ ಇವೆ. ಜೂನಿಯರ್ ಕಾಲೇಜ್ ಪ್ರಿನ್ಸಿಪಾಲರು ಏನು ಇದ್ದಾರೆ ಅವರಿಗೆ ೪೫೦ ರಿಂದ ೯೦೦ ರೂಪಾಯಿಗಳ ತನಕ ಗ್ರೇಡ್ ಸಂಬಳ ಕೊಡುತ್ತಾರೆ, ಆದೇ ಟೀಚರ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ಗೆ ಏನು ಮಾಡುತ್ತಾರೆಂದರೆ ಯಾವ ಹೈಸ್ಕೂಲು ಸಿಕ್ಕದೆ ಇರುವ ಹೆಡ್ ಮಾಸ್ಟರ್ ಯಾರು ಇದ್ದಾರೆ ಅಂಥವರನ್ನು ಅಲ್ಲಿಗೆ ಹಾಕುತ್ತಾರೆ ಅಲ್ಲಿಗೆ ಕಳುಹಿಸುವಾಗ ಒಂದು ರೀತಿ ಯಾದ ಭಾವನೆ ಇದೆ. ಅತೃಪ್ತಿ ಇದೆ. ನಾನು ಒಂದು ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ, ಅದೇನೆಂದರೆ ಟೀಚರ್ ಟ್ರೈನಿಂಗ್ ಆಗಿರತಕ್ಕ ಉಪಾಧ್ಯಾಯರುಗಳು ಎಸ್ ಎಸ್.ಎಲ್.ಸಿ. ಆದ ಮೇಲೆ ಜೂನಿಯರ್ ಕಾಲೇಜಿನ ಎರಡು ವರ್ಷಗಳ ಶಿಕ್ಷಣವನ್ನು ಪಡೆದಿರುತ್ತಾರೆ. ಅವರನ್ನು ನ್ಯಾಷನಲ್ ಲೆವೆಲ್‌ನಲ್ಲಿ ಇಡು ವುದಕ್ಕೆ ಅವಕಾಶವಿರಬೇಕು. ಕೆಲವು ಹೈಸ್ಕೂಲ್‌ಗಳಲ್ಲಿ ಎರಡು ವರ್ಷದ ಜೂನಿಯರ್ ಕಾಲೇಜುಗಳನ್ನು ತೆರೆದಿದ್ದಾರೆ, ಅಲ್ಲಿ ಎಂ.ಎ. ಎಂ.ಇ.ಡಿ. ಪಾಸ್ ಆದವರಿಗೆ ೪೫೦ ರೂಪಾಯಿ ಸಂಬಳ ಕೊಡುತ್ತಾರೆ. ಹೈ ಸ್ಕೂಲ್‌ನಲ್ಲಿ ಎರಡು ವರ್ಷ ಜೂನಿಯರ್ ಕಾಲೇಜ್‌ನಲ್ಲಿ ಗವರ್ನ್‌ಮೆಂಟ್ ಏಡೆಡ್ ಟೀಚರ್ಸ್ ಟ್ರೈನಿಂಗ್ ಸ್ಕೂಲ್‌ನಲ್ಲಿ ೨೫೦–೫೫೦ ರೂಪಾಯಿಗಳವರೆಗೆ ಗ್ರೇಡನ್ನು ಮಾಡಿಕೊಂಡಿರುವುದರಿಂದ ಒಂದು ರೀತಿಯಾದ ಅಸಂತೋಷ ಅತೃಪ್ತಿ ಇದೆ. ಅವು ನೆಗೆಲೆಕ್ಟ್ ಆಗಿರತಕ್ಕ ಸಂಸ್ಥೆಗಳು ಎನ್ನುವ ಭಾವನೆ ಬರುತ್ತದೆ. ದಯಮಾಡಿ ಜೂನಿಯರ್ ಕಾಲೇಜಿಗೆ ಏನು ಒಂದು ಸ್ಟೇಟಸ್ ಕೊಟ್ಟಿದ್ದೀರಿ ಅದೇ ರೀತಿ ಸ್ಟೇಟಸ್‌ನ್ನು ಅವುಗಳಿಗೂ ಕೊಡತಕ್ಕದ್ದು ಒಳ್ಳೆಯದು ಎನ್ನತಕ್ಕ ಸಲಹೆಯನ್ನು ನಾನು ನಿಮಗೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ವಿಷಯವೆಂದರೆ ಪ್ರಾಥಮಿಕ ಶಾಲೆಗಳ ಗುಣಮಟ್ಟವನ್ನು ಸುಧಾರಿಸಬೇಕಾಗಿದೆ. ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡತಕ್ಕ ಕಾಲದಲ್ಲಿ ಕುಳಿತುಕೊಳ್ಳುವುದಕ್ಕೆ ಒಳ್ಳೆಯ ಜಾಗವಿಲ್ಲದೆ ಅವರು ಕೆಳಗಡೆ ತಟ್ಟೆ ಕಟ್ಟಿಕೊಂಡು ಜಗಲಿಯಲ್ಲಿ ಕೂರಿಸಿರುತ್ತಾರೆ. ಕೆಲವು ಕಡೆ ದೇವಸ್ಥಾನದಲ್ಲಿ ಶಾಲೆ ನಡೆಯು ತ್ತದೆ. ಕೆಲವು ಕಡೆ ಮರದ ಕೆಳಗೆ ಹೀಗೆ ಹಲವಾರು ನಿದರ್ಶನಗಳನ್ನು ನಾವು ನೋಡಬಹುದು. ಈವತ್ತಿನ ದಿವಸ ಇದುವರೆಗೆ ಕೂಡ ಶಾಲಾ ಕಟ್ಟಡಗಳನ್ನು ವ್ಯವಸ್ಥಿತವಾದ ಒಂದು ಸಮರ್ಪಕವಾದ ರೀತಿಯಲ್ಲಿ ಮಾಡಿಲ್ಲ. ನಿಮಗೆ ಹಣದ ಆತಂಕ ಇರಬಹುದು. ಮೊದಲು ೬೦ ಪರ್ಸೆಂಟ್ ಸಹಾಯ ಮಾಡುತ್ತಿದ್ದರು ಅದನ್ನು ೪೦ ಪರ್ಸೆಂಟ್‌ಗೆ ಇಳಿಸಿದಿರಿ, ಅನಂತರ ಮತ್ತೆ ೬೦ ಪರ್ಸೆಂಟ್ ಕೊಡಬೇಕು ಎಂದಾಯಿತು. ಅದಾದಮೇಲೆ ಈಗ ೨ ಸಾವಿರ ಮಾಡಿದ್ದೀರಿ. ಗ್ರಾಮಸ್ಥರು ಸ್ವಲ್ಪ ಸ್ವಲ್ಪ ಕೊಡುತ್ತಾರೆ. ತಾಲ್ಲೂಕು ಬೋರ್ಡ್‌ನವರು ಕೊಡುವುದಿಲ್ಲ. ಪಂಚಾಯಿತಿ ಬೋರ್ಡ್‌ನವರು ಬೇಕಾದರೆ ಕೊಡಬಹುದು. ಈ ಸಮಸ್ಯೆಯನ್ನು ಬಿಡಿಸತಕ್ಕದರಲ್ಲಿ ಸರ್ಕಾರ ಬಹಳ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ನೀವು ಬೇಕಾದರೆ ಕಡಿಮೆ ಬೆಲೆಯಲ್ಲಿ ಕಟ್ಟಡ ಕಟ್ಟುವುದಕ್ಕೆ ಸಾಧ್ಯವಿದ್ದರೆ ಚೀಪ್ ಮಾಡಲ್ ಹೌಸನ್ನು ಪ್ರೀ ಫ್ಯಾಬ್ರಿಕೇಟ್ ಮಾಡಿ ಅನೇಕ ಕಡೆ ಅವುಗಳನ್ನು ತೆಗೆದುಕೊಂಡು ಹೋಗಿ ಎಂಜಿನಿಯರ್‌ಗಳು ಜೋಡಿಸಲು ಬಹುದು. ಕಾಸ್ಟನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅಂದರೆ ಎರಡು, ಮೂರು, ನಾಲ್ಕು ಸಾವಿರದಲ್ಲಿಯೇ ಇದನ್ನು ಮಾಡಲಿಕ್ಕೆ ಸಾಧ್ಯವಿದೆ. ಶಾಲೆಗಳು ಈ ರೀತಿಯಾದ ಒಂದು ಒಳ್ಳೆಯ ವಾತಾವರಣದಲ್ಲಿ ಆಗಬೇಕು ಎನ್ನುವ ದೃಷ್ಟಿಯನ್ನು ಸರ್ಕಾರ ಇಟ್ಟುಕೊಂಡು ಯೋಚನೆ ಮಾಡಲಿ ಎಂದು ಸಲಹೆ ಕೊಡುತ್ತೇನೆ. ಕೆಲವು ರಾಷ್ಟ್ರಗಳಲ್ಲಿ ಸ್ಕೂಲ್ ಬಿಲ್ಡಿಂಗ್ ಕಾರ್ಪೊರೇಷನ್ ಮಾಡಿ ವಿದ್ಯಾಭ್ಯಾಸದ ಇಲಾಖೆಯವರಿಗೆ ಬಾಡಿಗೆಗೆ ಕೊಡುತ್ತಿರುವುದು ಇದೆ. ಅಲ್ಲಿ ಸ್ಕೂಲುಗಳನ್ನು ನಡೆಸುತ್ತಿದ್ದರೆ ಒಂದು ವ್ಯಾಪಾರ ಸಂಸ್ಥೆಯ ರೀತಿಯಲ್ಲಿ ಕಟ್ಟಡಗಳನ್ನು ಕಟ್ಟಿ ಬಾಡಿಗೆಗೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಕೆಲವು ರಾಷ್ಟ್ರಗಳಲ್ಲಿ ಸ್ಕೂಲ್ ಬಿಲ್ಡಿಂಗ್ ಕಾರ್ಪೊರೇಷನ್ ಎನ್ನತಕ್ಕ ಸಂಸ್ಥೆಗಳನ್ನು ಮಾಡಿಕೊಂಡು ಈ ಸಂಸ್ಥೆಗಳನ್ನು ಮಾಡಿ ಕೊಂಡು ಈ ಸಮಸ್ಯೆಯನ್ನು ಬಗೆ ಹರಿಸಿವೆ ಎಂದು ಕೇಳಿದ್ದೇನೆ. ಇದು ಏನೆ ಇರಲಿ ಇದರ ಬಗ್ಗೆ ಆಲೋಚನೆ ಮಾಡಬೇಕು. ನಗರಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಸ್ಕೂಲ್‌ಗಳನ್ನು ನಡೆಸುತ್ತಿದ್ದಾರೆ. ಬೆಂಗಳೂರು ಪಟ್ಟಣದಲ್ಲಿ ಬೇಕಾದಷ್ಟು ಸ್ಕೂಲ್‌ಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಅವು ಆಟದ ಮೈದಾನವಿರುವುದಿಲ್ಲ, ಸಣ್ಣ ಪುಟ್ಟ ಕೊಠಡಿಗಳಲ್ಲಿ ಖಾಸಗಿಯವರು ನಡೆಸುತ್ತಿರುತ್ತಾರೆ. ಮಾನಸಿಕವಾಗಿ ಮಕ್ಕಳು ಬೆಳೆಯಬೇಕಾದರೆ ಕೆಲವು ಸೌಲಭ್ಯಗಳನ್ನು ದೊರಕಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಆಟದ ಮೈದಾನ, ಸ್ಕೂಲ್ ಕಟ್ಟಡ ಇವುಗಳನ್ನೆಲ್ಲಾ ಅತಿ ಕಡಿಮೆ ವೆಚ್ಚದಲ್ಲಿ ದೊರಕಿಸಬೇಕು. ಈ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸುತ್ತೇನೆ.

ಅನೇಕ ಶಾಲೆಗಳಲ್ಲಿ ಶೀತೋಪಕರಣಗಳಿಲ್ಲ. ನೆಲ ಕಿತ್ತು ಗುಂಡಿ ಬಿದ್ದಿರುತ್ತದೆ. ಹಿಂದೆ ನಾವು ಓದುತ್ತಿದ್ದಾಗ ನಮ್ಮ ಕೈಯಲ್ಲಿ ಶಾಲೆಯ ನೆಲವನ್ನು ಸಾರಿಸುತ್ತಿದ್ದರು. ಆದರೆ ಈಗ ಎಲ್ಲದಕ್ಕೂ ಸರ್ಕಾರದ ಕಡೆ ಕೈ ತೋರಿಸುವ ಪ್ರವೃತ್ತಿ ಬೆಳೆದುಕೊಂಡು ಬಂದಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆ ಮಾಡಿದ

ಮೇಲೆ ಇಂಥ ಪ್ರವೃತ್ತಿ ಬೆಳೆದು ಕೊಂಡು ಬಂದಿದೆ. ಶಾಲಾ ಕಟ್ಟಡದ ಸಮಸ್ಯೆ, ಪೀಠೋಪಕರಣಗಳ ಪ್ರಶ್ನೆಯನ್ನು ಬಗ್ಗೆ ಹರಿಸುವುದರಲ್ಲಿ ಸರ್ಕಾರದವರು ಸ್ವಲ್ಪ ಪ್ರಯತ್ನ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ಸಾಮಾನ್ಯವಾದ ಹಲಗೆಗಳನ್ನು ಕೂಡ ಕೊಡುವುದಿಲ್ಲ. ಅತಿ ಆವಶ್ಯಕವಾದ ಕೆಲವು ಪೀಠೋಪಕರಣಗಳನು ಕಪ್ಪು ಬೋರ್ಡನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸುತ್ತೇನೆ.

ಪ್ರಾಥಮಿಕ ಶಾಲೆಗಳಿಗೆ ಇನ್ನೂ ಹೆಚ್ಚು ಮಂಜೂರಾತಿ ಕೊಡಿರಿ, ಬೇಡವೆನ್ನುವುದಿಲ್ಲ. ಅವುಗಳ ಅವಶ್ಯಕತೆ ಇದೆ. ಆದರೆ ಹೈಸ್ಕೂಲುಗಳು, ಜೂನಿಯರ್ ಕಾಲೇಜುಗಳು, ಟೀಚರ್ಸ್ ಟ್ರೇನಿಂಗ್ ಕಾಲೇಜ್ ಇವುಗಳಿಗೆ ಕೆಲವು ಕಾಲ ಹಾಲ್ಟ್ ಕೊಡಬೇಕಾದ ಅವಶ್ಯಕತೆ ಇದೆ ಎಂದು ನನ್ನ ಭಾವನೆ. ಇರತಕ್ಕ ಶಾಲಾ ಕಾಲೇಜುಗಳ ಗುಣಮಟ್ಟವನ್ನು ಹೆಚ್ಚು ಮಾಡುವ ಕಡೆಗೆ ಗಮನ ಕೊಟ್ಟು ಹೊಸದಾಗಿ ತೆರೆಯುವುದಕ್ಕೆ ಸ್ವಲ್ಪ ದಿವಸ ರಜ ಕೊಟ್ಟರೆ ಒಳ್ಳೆಯದು. ರಾಜ್ಯದಲ್ಲಿರುವ ೨೫೦೦ ಹೈಸ್ಕೂಲುಗಳ ಪೈಕಿ ಎಂಟುನೂರು ಶಾಲೆಗಳಲ್ಲಾದರೂ ೪೦ ಮಕ್ಕಳು, ೫೦ ಮಕ್ಕಳು, ೬೦ ಮಕ್ಕಳು ಹೀಗೆ ಇರುತ್ತಾರೆ. ಕೆಲವು ಕಡೆ ಪೈಪೋಟಿಯಿಂದ ಶಾಲೆಗಳನ್ನು ತೆರೆದಿರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ರಾಜಕೀಯ ಮಾಡಿಕೊಂಡು ಶಾಲೆಗಳನ್ನು ತೆರೆದಿರುತ್ತಾರೆ. ಹೀಗೆ ಮಾಡುವುದಕ್ಕೆ ಅವಕಾಶ ಕೊಡಬಾರದು. ಈಗ ತೆರೆದಿರುವುದನ್ನು ಮುಚ್ಚಬೇಕು ಎಂದು ನಾನು ಹೇಳುತ್ತಿಲ್ಲ. ಇರುವುದನ್ನು ಚೆನ್ನಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿ, ಗುಣಮಟ್ಟವನ್ನು ಉತ್ತಮ ಪಡಿಸುವ ಕಡೆಗೆ ಗಮನ ಕೊಟ್ಟು ಹೊಸದಾಗಿ ಹೈಸ್ಕೂಲು ಜೂನಿಯರ್ ಕಾಲೇಜು ಮುಂತಾದುವನ್ನು ತೆರೆಯುವುದನ್ನು ನಿಲ್ಲಿಸಬೇಕು. ಸಂಪನ್ಮೂಲಗಳನ್ನು ಇರತಕ್ಕವುಗಳಲ್ಲಿ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುವುದಕ್ಕೆ ಮೊದಲು ವೆಚ್ಚ ಮಾಡಬೇಕೆಂದು ಹೇಳುತ್ತೇನೆ.

ಹೈಸ್ಕೂಲುಗಳಿಗೆ ಸಂಬಂಧಪಟ್ಟ ಹಾಗೆ ಸೇವಾ ನಿಯಮಗಳ ಬಗ್ಗೆ ಒಂದೆರಡು ಮಾತು ಹೇಳುವುದು ಒಳ್ಳೆಯದು. ಕಂಟ್ರಾಕ್ಟ್ ಅಪಾಯಿಂಟ್‌ಮೆಂಟ್ ಕೆಲವು ಕಾಲ ಮಾಡಿದರು, ಇನ್ನು ಕೆಲವು ಕಾಲ ಟೆಂಪೊರರಿ ಅಪಾಯಿಂಟ್‌ಮೆಂಟ್ ಮಾಡಿದರು. ಇದರಿಂದ ಆಗಿರತಕ್ಕ ತೊಂದರೆಗಳನ್ನು ಈ ಮಾನ್ಯ ಸಭೆಯಲ್ಲಿ ಸರ್ಕಾರದ ಗಮನಕ್ಕೆ ತಂದು ಕೆಲವು ಸೂಚನೆಗಳನ್ನು ಕೊಟ್ಟು ಸರ್ಕಾರಕ್ಕೆ ಕಠಿಣವಾದ ರೀತಿಯಲ್ಲಿ ತಿಳಿಸಿರತಕ್ಕದ್ದು ಇದೆ. ಹಾಗೆಯೇ ಮಕ್ಕಳಿಗೆ ಆಗಿರತಕ್ಕ ತೊಂದರೆಗಳನ್ನೆಲ್ಲಾ ಹೇಳಿದ್ದೇವೆ. ನೇಮಕಾತಿಗಳು ಆಗುವಾಗ, ಪಿ.ಎಸ್.ಸಿ. ಮುಖಾಂತರ ನಡೆಯುವಾಗ ಒಂದೊಂದು ಸಾರಿ ಎಂಟು ತಿಂಗಳು ನಿಧಾನವಾಗಿರುವುದೂ ಉಂಟು. ಅವರು ನಾಲ್ಕು ಡಿವಿಜನ್‌ಗಳಲ್ಲಿ ಹೋಗಿ ಇಂಟರ್‌ವ್ಯೂ ಮುಗಿಸಿಕೊಂಡು ನಿಯಮಾವಳಿಗಳನ್ನು ಅನುಸರಿಸಿ ನೇಮಕಾತಿಗಳನ್ನು ಮಾಡುವುದರಲ್ಲಿ ಕಾಲ ವಿಳಂಬವಾಗುತ್ತದೆ. ಪಿ.ಎಸ್.ಸಿ. ಯವರಿಗೆ ಹೆಚ್ಚು ಕೆಲಸವಿರುವುದರಿಂದ ನಿಧಾನವಾಗುತ್ತದೆಂದು ನಾನು ಹೇಳುತ್ತಿಲ್ಲ. ಅವರ ಕೆಲಸವನ್ನು ಕಡಿಮೆ ಮಾಡಿದ್ದೇವೆ. ಅವರು ತೆಗೆದುಕೊಳ್ಳತಕ್ಕ ಕಾಲದ ಮಿತಿಯನ್ನು ನೋಡಿದಾಗ ಶಾಲೆಯಲ್ಲಿ ಉಪಾಧ್ಯಾಯರಿಲ್ಲದೆ ಎಂದು ಕಡೆ ತೊಂದರೆ ಪಡತಕ್ಕದ್ದು. ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆಯದೆ ಇರುವಾಗ ಎಂಟು ತಿಂಗಳು ತೆಗೆದುಕೊಂಡು ವಿಳಂಬವಾಗಿ ಆಯ್ಕೆ ಮಾಡುವುದಕ್ಕೆ ಇತಿ ಶ್ರೀ ಹಾಡಬೇಕು. ಇಲ್ಲದ ಇದ್ದರೆ ಅನೇಕ ಹೈಸ್ಕೂಲುಗಳಲ್ಲಿ ಪ್ರತಿಯೊಂದು ವಿಷಯವನ್ನೂ ಬೋಧಿಸುವುದಕ್ಕೆ ಉಪಾಧ್ಯಾಯರಿಲ್ಲದಂತಾಗುತ್ತದೆ. ಹೀಗಾದರೆ ಶಿಕ್ಷಣ ಮಟ್ಟ ಹೇಗೆ ಉತ್ತಮವಾಗುತ್ತವೆ ಎಂದು ಕೇಳಬಯಸುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿರುವ ಹೈಸ್ಕೂಲುಗಳ ಸ್ಥಿತಿಯನ್ನು ನಿಸ್ಸಂಕೋಚವಾಗಿ ಹೇಳುತ್ತೇನೆ. ಈ ಹೈಸ್ಕೂಲುಗಳು ಅನೇಕ ಪ್ರಾಥಮಿಕ ಶಾಲೆಗಳಿಗಿಂತ ಕಡಮೆಯಾಗಿವೆ. ಹಿಂದೆ ಶ್ರೀ ಗುಂಡಪ್ಪ ಗೌಡರು ಮಂತ್ರಿಗಳಾಗಿದ್ದಾಗ ಮತ್ತು ಅದಕ್ಕಿಂತ ಮೊದಲು ಇದ್ದ ಆಡಳಿತದ ಕಾಲದಲ್ಲಿ ಕಟ್ಟಿರುವ ಪ್ರಾಥಮಿಕ ಶಾಲೆಗಳು ಬಹಳ ಚೆನ್ನಾಗಿವೆ. ತಾಲ್ಲೂಕು ಬೋರ್ಡ್ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈ ಹೊತ್ತು ಕಟ್ಟಿರುವುದನ್ನು ನೋಡಿದರೆ ಪ್ರಾಥಮಿಕ ಶಾಲೆಗಳಿಗಿಂತ ಕಡಮೆ ಎಂದು ಹೇಳಬೇಕಾಗುತ್ತದೆ. ಸರಿಯಾದ ವಾತಾವರಣವಿಲ್ಲದೆ ಪ್ರತಿಯೊಂದು ವಿಷಯಕ್ಕೂ ಶಿಕ್ಷಕರು ಇಲ್ಲದೆ ಇರತಕ್ಕ ಸನ್ನಿವೇಶವನ್ನು ನಿರ್ಮಾಣ ಮಾಡಿದರೆ ಮಕ್ಕಳು ಹೇಗೆ ವಿದ್ಯಾಭ್ಯಾಸವನ್ನು ಮುಗಿಸಿ, ಸ್ಪರ್ಧೆಯ ಯುಗದಲ್ಲಿ ಪೇಟೆಯಲ್ಲಿ ವಿದ್ಯಾಭ್ಯಾಸ ಮಾಡಿರತಕ್ಕ ಮಕ್ಕಳ ಜೊತೆಯಲ್ಲಿ ಸ್ಪರ್ಧೆಯಲ್ಲಿ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆಯೆ ಎನ್ನುವುದನ್ನು ಯೋಚನೆ ಮಾಡಬೇಕು. ಈ ಹೊತ್ತು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಸೇವಾ ನಿಯಮಗಳೇನಿವೆ ಅವುಗಳನ್ನು ಬೇಕಾದರು ಮಾರ್ಪಾಟು ಮಾಡಿ ಅಥವಾ ಡಿಪಾರ್ಟ್‌ಮೆಂಟಲ್ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಏನು ನೇಮಕ ಮಾಡಿದ್ದೀರಿ ಅದರಲ್ಲಿ ಪ್ರತಿಯೊಂದು ಡಿವಿಜನ್ನಿಗೂ ರೆವೆನ್ಯೂ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿರುವಂತೆ ವಿದ್ಯಾ ಇಲಾಖೆಗೂ ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡತಕ್ಕದ್ದು ಸರಿಯೋ ತಪ್ಪೋ ಎಂದು ಯೋಚನೆ ಮಾಡಿ. ಮತ್ತು ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಆಗತಕ್ಕ ವಿಳಂಬವನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆಯೋ ಎನ್ನುವುದನ್ನೂ ಯೋಚನೆ ಮಾಡಿ. ಹಿಂದೆ

ಒಂದು ಸಲ ಡಿವಿಜನಲ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡುವಾಗ ಸಾವೇ ಟುವಾಗಿ ಟೀಕೆ ಮಾಡಿದ್ದೇವೆ ಆಗ ಡಿವಿಜನಲ್ ಕಮಿಷನರಾಗಿದ್ದರು ಅವರ ಜಾತಿಯವರಿಗೇ ಕೆಲಸಗಳನ್ನು ಕೊಟ್ಟರು ಎಂದು ಟೀಕೆ ಮಾಡಿದ್ದೇವೆ. ಆದರೆ ಈ ಮನೆಯ ಸದಸ್ಯರನ್ನೂ ಆಯ್ಕೆ ಸಮಿತಿಯಲ್ಲಿ ನೇಮಕ ಮಾಡುವುದರಿಂದ ಆ ಒಂದು ದೃಷ್ಟಿಕೋನದಿಂದ ಯೋಚನೆ ಮಾಡಿ ಯಾವರೀತಿ ಮಾಡಿದರೆ ಒಳ್ಳೆಯದು, ಬೇಗ ಶಿಕ್ಷಕರ ಆಯ್ಕೆಯಾಗುವುದಕ್ಕೆ ಸಹಾಯವಾಗುತ್ತದೆ ಎನ್ನುವುದನ್ನು ಆರು ತಿಂಗಳು ಮುಂಚೆ ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ತಿಳಿಸಿ, ಅವರು ಬಹಳ ಜರೂರಾಗಿ ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುವ ರೀತಿಯಲ್ಲಿ ಸರ್ಕಾರ ಡೈರೆಕ್ಷನ್ ಕೊಡಬೇಕು. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವ ರೀತಿಯಲ್ಲಿ ಮಾಡಿದರೆ ಉಚಿತ ಎಂಬುದನ್ನು ಯೋಜನೆ ಮಾಡಿ ಮಕ್ಕಳಿಗೆ ಸರಿಯಾದ ರೀತಿಯ ಶಿಕ್ಷಣ ದೊರೆಯುವಂತೆ ಮಾಡಬೇಕು. ಹಿಂದೆ ನಾವು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಹೆಡ್ ಮಾಸ್ಟರಿಗೇ ಎರಡು ಮೂರು ತಿಂಗಳ ಕಾಲ ಯಾವುದಾದರೂ ಉಪಾಧ್ಯಾಯರ ಸ್ಥಳ ಖಾಲಿ ಬಿದ್ದರೆ ಅದನ್ನು ಭರ್ತಿ ಮಾಡುವ ಅಧಿಕಾರವಿತ್ತು. ಅದನ್ನು ಈಗ ತೆಗೆದು ಹಾಕಿದ್ದಾರೆ. ಶಿಕ್ಷಕರು ಇಲ್ಲದೆ ಇದ್ದರೆ ಅದರಿಂದ ಆಗತಕ್ಕ ಅನಾಹುತವನ್ನು ಅರ್ಥಮಾಡಿಕೊಂಡು ಯಾವರೀತಿ ಮಾಡಿದರೆ ಸರಿ ಹೋಗುತ್ತದೆಯೋ ಆ ರೀತಿ ಮಾಡಬೇಕೆಂದು ಸೂಚಿಸಬಯಸುತ್ತೇನೆ.

ವಿದ್ಯಾಭ್ಯಾಸದಲ್ಲಿ ಗುಣಮಟ್ಟವನ್ನು ಹೆಚ್ಚು ಮಾಡಬೇಕೆಂಬ ಸಲಹೆಯನು ಮಾನ್ಯ ಮಂತ್ರಿಗಳ ಮುಂದೆ ಇಡುತ್ತಿದ್ದೇನೆ. ಸೆಕಂಡರಿ ಎಜುಕೇಷನ್ನಿಗೆ ಸಂಬಂಧಪಟ್ಟ ಹಾಗೆ ತನಿಖಾ ಸಿಬ್ಬಂದಿಯನ್ನು ಬಹಳ ಹೆಚ್ಚು ಮಾಡಿದ್ದಾರೆ. ಶ್ರೀಮಾನ್ ಶಂಕರೇಗೌಡರು ವಿದ್ಯಾ ಮಂತ್ರಿಗಳಾಗಿದ್ದಾಗ ತನಿಖಾ ಸಿಬ್ಬಂದಿಯನ್ನು ಹೆಚ್ಚು ಮಾಡುವುದರ ಮುಖಾಂತರ ಗುಣ ಮಟ್ಟವನ್ನೂ ಮಾಡುತ್ತೇವೆಂದು ಹೇಳಿದರು. ಅದಕ್ಕಾಗಿ ಅವರು ಇಲಾಖೆಯನ್ನು ರೀ ಆರ್ಗನೈಜ್ ಮಾಡಿದರು ಆಶಾದಾಯಕವಾದ ಮಾತನ್ನಾಡಿದ ಕಾಲ ಕೂಡ ಇತ್ತು. ಈ ವ್ಯವಸ್ಥೆಯನ್ನು ಮಾಡಿದ ಮೇಲೆ ಕೂಡ ಈ ಹೊತ್ತು ಈ ಒಂದು ರಂಗದ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ ಎನ್ನುವ ಭಾವನೆ ಬರುತ್ತಿದೆ.

ಈಗ ಒಂದೊಂದು ಡಿವಿಜನೆಗೆ ೬ ಜನ ಸಬ್ಜೆಟ್ ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡಲಾಗಿದೆ. ಅದರಂತೆ ನಮ್ಮ ರಾಜ್ಯದಲ್ಲಿ ಈಗ ಒಟ್ಟು ೧೨೦ ಜನ ಸಬ್ಜೆಟ್ ಇನ್ಸ್‌ಪೆಕ್ಟರ್‌ಗಳಿರಬಹುದು. ಇಂಗ್ಲೀಷ್‌ಗೆ ಒಬ್ಬರು, ಕನ್ನಡಕ್ಕೆ ಒಬ್ಬರು, ಫಿಜಿಕ್ಸ್‌ಗೆ ಒಬ್ಬರು ಕೆಮಿಸ್ಟ್ರಿಗೆ ಒಬ್ಬರು ಬಯಾಲಜಿಗೆ ಒಬ್ಬರು, ಮ್ಯಾಥಮೆಟಿಕ್ಸ್‌ಗೆ ಒಬ್ಬರು, ಮತ್ತು ಹಿಸ್ಟರಿ, ಜಾಗ್ರಫಿ ಮತ್ತು ಫಿಜಿಕಲ್ ಎಜುಕೇಸನ್‌ಗೆ ಒಬ್ಬರು ಈ ರೀತಿ ೬ ಜನರನ್ನು ನೇಮಕ ಮಾಡಲಾಗಿದೆ. ಈಗ ಕೆಲವು ಕಡೆಗಳಲ್ಲಿ ಏನಾಗಿದೆ ಎಂದರೆ. ಸಂಬಂಧಪಟ್ಟ ಸಬ್ಜೆಟ್ ವಿಷಯದಲ್ಲಿ ಮಾಹಿತಿ ಇಲ್ಲದವರನ್ನು ನೇಮಕ ಮಾಡಲಾಗಿದೆ. ಕೆಲಸ ಖಾಲಿ ಇದೆ ಎಂದು ಕಂಡುಬಂದಾಗ ಸಂಬಂಧಪಟ್ಟವರನ್ನು ನೇಮಕ ಮಾಡದೆ ಬೇರೆ ಸಬ್ಜೆಟ್‌ನಲ್ಲಿ ಮಾಹಿತಿ ಇರುವವರನ್ನು ನೇಮಕ ಮಾಡಿಬಿಟ್ಟಿದ್ದಾರೆ ಇಂತಹ ಕೇಸಸ್ ೨೫ ರಿಂದ ೩೦ ಪರ್ಸೆಂಟ್‌ವರೆಗೆ ಸಿಗುತ್ತದೆ. ಈ ರೀತಿ ನೇಮಕ ಮಾಡುವುದು ಸರಿಯಲ್ಲ : ಈ ಬಗ್ಗೆ ಸ್ವಲ್ಪ ಎಚ್ಚರಿಕೆ ವಹಿಸಬೇಕೆಂದು ಹೇಳುತ್ತೇನೆ. ಮತ್ತೆ ಕೆಲವು ಕಡೆಗಳಲ್ಲಿ ಕೆಲವು ಸಬ್ಜೆಟ್‌ಗಳಿಗೆ ಸಬ್ಜೆಟ್ ಇನ್ಸ್‌ಪೆಕರ್‌ಗಳನ್ನು ಇನ್ನೂ ನೇಮಕ ಮಾಡಿಲ್ಲ ; ಇಂತಹ ಕಡೆಗಳಿಗೆ ನೇಮಕ ಮಾಡುವಾಗ ಆಯಾ ವಿಷಯದಲ್ಲಿ ಪರಿಣಿತರಾದವರನ್ನೇ ನೇಮಕ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡದಿದ್ದರೆ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಡಿ.ಡಿ.ಪಿ.ಐ. ಅವರು ಅಡ್ಮಿನಿಸ್ಟ್ರೇಷನ್ ನೋಡಿಕೊಳ್ಳುತ್ತಾರೆ; ಇನ್ಸ್‌ಪೆಕ್ಷನ್ ಮಾಡುತ್ತಾರೆ ಏನಾದರು ಮಿಸ್‌ಅಪ್ರೋಪ್ರಿಯೇಷನ್ ಆಗಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ; ಆದರೆ ಸಬ್ಜೆಟ್ ಇನ್ಸ್‌ಪೆಕ್ಟರ್ಸ್ ಇಲ್ಲದಿದ್ದರೆ ಸಂಬಂಧಪಟ್ಟ ಸಬ್ಜೆಟ್‌ಗಳು ಸರಿಯಾಗಿ ನಡೆಯುತ್ತಿವೆಯೋ ಹೇಗೆ ಎಂದು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಇದರ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗ ಆಯಾ ಸಬ್ಜೆಟ್‌ಗಳ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ಸಾಕಷ್ಟು ಪ್ರಗತಿ ಸಾಧಿಸಿಲ್ಲ ಎಂದು ಹೇಳುತ್ತೇನೆ.

ಇನ್ನು ನಾವು ಹಿಂದಿಯನ್ನು ಮಿಡಲ್ ಸ್ಕೂಲ್ ಮಟ್ಟದಲ್ಲಿಯೇ ಕಡ್ಡಾಯವಾಗಿ ಕಲಿಯಬೇಕೆಂದಕ ನಿಯಮ ಮಾಡಿದ್ದೇವೆ ಆದರೆ ಅದರ ಬಗ್ಗೆ ನೋಡಿಕೊಳ್ಳಲು ಸಬ್ಜೆಟ್ ಇನ್ಸ್‌ಪೆಕ್ಟರ್‌ನ್ನು ನೇಮ. ಮಾಡಿಲ್ಲ ; ಅದೇರೀತಿ ಫಿಜಿಕಲ್ ಎಜುಕಷನ್ ಬಗ್ಗೆ ಸಹ ಸಾಕಷ್ಟು ಸಿಬ್ಬಂದಿಗಳನ್ನು ನೇಮಕ ಮಾಡಿಲ್ಲ ಇಂದಿಗೂ ಅನೇಕ ಹುದ್ದೆಗಳು ಭರ್ತಿಯಾಗಿಲ್ಲ ; ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದವರು ತೀವ್ರ ಕ್ರಮತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಹಿಂದಿಯನ್ನು ಮಿಡಲ್‌ಸ್ಕೂಲ್ ಮತ್ತು ಹೈಸ್ಕೂಲ್ ಮಟ್ಟದಲ್ಲಿ ಕಡ್ಡಾಯವಾಗಿ ಕಲಿಯಬೇಕೆಂದು ನಿಯಮ ಮಾಡಿದ್ದರೂ ಸಹ ಪರೀಕ್ಷೆಯಲ್ಲಿ ಆ ವಿಷಯವನ್ನು ಪಾಸ್ ಮಾಡಲೇ ಬೇಕು ಎಂಬ ನಿಯಮವೇನೂ ಇಲ್ಲ. ಅದನ್ನು ಅಭ್ಯಾಸ ಮಾಡಬೇಕು ಎಂಬ ದೃಷ್ಟಿಯಿಂದ ಕಡ್ಡಾಯ ಮಾಡಿದ್ದೇವೆ. ಈ ರೀತಿ ಕಡ್ಡಾಯ ಮಾಡಿದ್ದರೂ ಸಹ, ಅದನ್ನು ಹೇಳಿ

ಕೊಡಲು ಶಿಕ್ಷಕರನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಕ ಮಾಡಿಲ್ಲ. ಮಿಡಲ್ ಸ್ಕೂಲ್ ಮಟ್ಟದಲ್ಲಿ ಹೇಳುವುದಾದರೆ ಶೇಕಡ ೯೫ರಷ್ಟು ಶಾಲೆಗಳಲ್ಲಿ ಉಪಾಧ್ಯಾಯರಿಲ್ಲ. ಪಾರ್ಟ್ ಟೈಮ್ ಕೆಲಸ ಮಾಡಲು ಯಾರಾದರು ಸಿಕ್ಕಿದರೆ ನೇಮಕ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಈಗ ವಾರದಲ್ಲಿ ೩ ೪ ಪಿರೀಡ್ ತೆಗೆದುಕೊಳ್ಳಲಾಗುತ್ತಿದೆ, ಮತ್ತು ನಾಲ್ಕಾರು ಹಳ್ಳಿಗಳಿಗೆ ಸೇರಿದಂತೆ ಒಬ್ಬರನ್ನು ನೇಮಕ ಮಾಡಿಕೊಳ್ಳುವುದು ನಡೆಯುತ್ತಿದೆ. ಇದು ಯಶಸ್ವಿ ಪ್ರಯೋಗವಾಗುವುದಿಲ್ಲ. ನಾವು ಈ ವಿಷಯವನ್ನು ಕಡ್ಡಾಯ ಮಾಡಿರುವುದರಿಂದ, ಉಪಾಧ್ಯಾಯರನ್ನು ನೇಮಕ ಮಾಡುವ ವಿಚಾರದಲ್ಲಿ ಸಹ ಹೆಚ್ಚಿನ ಶ್ರದ್ಧೆ ವಹಿಸಬೇಕಾಗುತ್ತದೆ. ಇದು ಕೇವಲ ಫಾರ್ಸ್ ಆಗಬಾರದು ; ಭಾಷಾಗೊಂದಲ ಇನ್ನೂ ಇದ್ದೇ ಇದೆ. ಮಾನ್ಯ ಕೋಣಂದೂರು ಲಿಂಗಪ್ಪನವರಿಗೆ ಕನ್ನಡದ ಬಗ್ಗೆ ಹೆಚ್ಚಿನ ಅಭಿಮಾನ ಇದೆ. ಪ್ರಾಂತೀಯ ಭಾಷೆಯನ್ನು ಬೆಳೆಸಬೇಕು ಎಂಬ ಬಗ್ಗೆ ನನಗೂ ಸಹ ಶ್ರದ್ಧೆ ಇದೆ. ಆಸಕ್ತಿ ಇಲ್ಲ ಎಂದು ಅಲ್ಲ ; ಆದರೆ ನಾವು ಇಂದು ಹಿಂದಿಯನ್ನೂ ಕೂಡ ಕಡ್ಡಾಯ ಮಾಡಿದ್ದೇವೆ. ಆದಕಾರಣ ಇದನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದಕ್ಕೆ ಅವಕಾಶವಿರಬೇಕು. ನಮಗೆ ಸ್ವಾತಂತ್ರ್ಯ ಬಂದು ೨೨ ವರ್ಷಗಳು ಕಳೆದಮೇಲೂ ಸಹ ನಮ್ಮ ದೇಶಕ್ಕೆ ಒಂದು ರಾಷ್ಟ್ರೀಯ ಭಾಷೆ ಇಲ್ಲ ಎಂದರೆ, ನಾವೇನಾದರು ಬಿಹಾರ ರಾಜ್ಯಕ್ಕೆ ಹೋದರೆ ಪರದೇಶಕ್ಕೆ ಹೋದಂತೆ ಆಗುತ್ತದೆ ; ಮಹಾರಾಷ್ಟ್ರಕ್ಕೆ ಹೋದರೆ ಪರದೇಶಕೆ ಹೋದಂತೆ ಆಗುತ್ತದೆ ; ಇದು ಕೂಡದು ; ಹಿಂದೀ ಭಾಷೆಯ ಅಗತ್ಯ ನಮಗೆ ಇದೆ. ಪ್ರಾದೇಶಿಕ ಭಾಷೆ ಬೆಳೆಸುವ ಅಗತ್ಯ ನಮಗೆ ವಿಷ್ಟಿದೆಯೋ, ಅದೇ ಒಂದು ದೃಷ್ಟಿ ಕೋನದಲ್ಲಿ ರಾಷ್ಟ್ರಿಯ ಭಾಷೆಯನ್ನು ಬೆಳಸ ಬೇಕಾಗುತ್ತದೆ. ಈ ವಿಚಾರದಲ್ಲಿ ನಾವು ಯಾವುದೇ ಒಂದು ಪ್ರತಿಷ್ಠೆಯ ಕಣಕ್ಕೆ ನಿಲ್ಲುವುದು ಯೋಗ್ಯವಲ್ಲ. ಭಾರತೀಯರಾಗಿ ನಾವು ಕೂಡಿ ಬಾಳಬೇಕಾದರೆ ಒಂದು ದೇಶ ಭಾಷೆ ಅಗತ್ಯವಿದೆ. ಆದಕಾರಣ ಈ ವಿಚಾರದಲ್ಲಿ ನಾವು ಯಾವುದೇ ಸಂಕುಚಿತ ಭಾವನೆಯಿಂದ ನೋಡುವುದು ಯೋಗ್ಯವಲ್ಲವೆಂದು ಈ ಸಂರ್ಭದಲ್ಲಿ ತಿಳಿಸುತ್ತೇನೆ. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಯಾವುದೆ ರೀತಿಯಾದಂಥ ಅಂಜಿಕೆಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಇಂದು ಈ ರಾಷ್ಟ್ರಭಾಷೆಗೆ ಪ್ರೋತ್ಸಾಹ ಕೊಟ್ಟು ಬೆಳೆಸುವ ಬಗ್ಗೆ ಸಾಕಷ್ಟು ಕ್ರಮ ಕೈಕೊಳ್ಳದಿರುವುದು ವಿಷಾದನೀಯ ಎಂದು ಹೇಳಬೇಕಾಗಿದೆ. ನಾವು ಭಾರತ ಬಿಟ್ಟು ಹೋಗುವುದಕ್ಕೆ ಸಾಧ್ಯವಿಲ್ಲ ಮತ್ತು ಬೇರೆಬೇರೆ ಪ್ರಾಂತ್ಯಗಳನ್ನು ರಚನೆ ಮಾಡಿಕೊಂಡು ಇರುವುದಕ್ಕಾಗುವುದಿಲ್ಲ; ಈ ದೃಷ್ಟಿಯಿಂದ ನಮ್ಮ ಸರ್ಕಾರದವರು ಈ ಭಾಷೆಯನ್ನು ಬೆಳೆಸುವ ಬಗ್ಗೆ ಹೆಚ್ಚು ಶ್ರದ್ಧೆ ತೆಗೆದುಕೊಳ್ಳಬೇಕೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸರ್ಕಾರದವರು ತಾಲ್ಲೂಕ್ ಬೋರ್ಡಿನವರು ನಡೆಸುತ್ತಿದ್ದ ಮತ್ತು ಮುನಿಸಿಪಾಲಿಟಿಯವರು ನಡೆಸುತ್ತಿದ್ದ ಹೈಸ್ಕೂಲ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಆ ಶಾಲೆಗಲ್ಲಿ ಕೆಲಸ ಮಾಡುತ್ತಿದ್ದ ನೌಕರರ ಸೇವಾನಿಯಮ ಮತ್ತು ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುವುದರ ಬಗ್ಗೆ ಸರ್ಕಾರ ಹೆಚ್ಚು ಶ್ರದ್ಧೆ ತೋರಿಸಬೇಕೆಂದು ತಿಳಿಸುತ್ತೇನೆ, ಜೊತೆಗೆ ಇಲ್ಲಿಯವರೆಗೆ ತಾಲ್ಲೂಕ್ ಬೋರ್ಡಿನವರು ನಡೆಸುತ್ತಿದ್ದ ಶಾಲೆಗಳಿಗೆ ಸಂಬಂಧಪಟ್ಟಂತೆ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಸ್ವಲ್ಪ ಹಣ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಈ ಮೊದಲೇ ಅವರು ಅವರ ಭಾಗದ ೫೦ ಪರ್ಸೆಂಟ್ ಹಣವನ್ನು ಜೋಡಿಸಿದ್ದಾರೆ. ಉಳಿದ ೫೦ ಪರ್ಸೆಂಟ್ ಹಣವನ್ನು ಸರ್ಕಾರದವರು ಕೊಡಬೇಕೆಂದು ಅವರು ಕೇಳುತ್ತಿದ್ದಾರೆ. ಕಳೆದುವರ್ಷದ ಬಜೆಟ್‌ನಲ್ಲಿ ಈ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಹಣವನ್ನು ಇಟ್ಟಿರಲಿಲ್ಲ. ಈ ಸಲ ಅದಕ್ಕೆ ಎಷ್ಟು ಹಣ ಇಟ್ಟಿದ್ದಾರೋ ನನಗೆ ಗೊತ್ತಿಲ್ಲ: ಈ ಬಗ್ಗೆ ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸರ್ಕಾರದ ಧನಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇಂದು ಹೈಸ್ಕೂಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವರಮುಂದಿನ ಭವಿಷ್ಯದ ವಿಚಾರದಲ್ಲಿ ಸರಿಯಾದ ಗೈಡೆನ್ಸ್ ಕೊಡುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಮುಂದುವರೆದ ರಾಷ್ಟ್ರಗಳಲ್ಲಿ ಗೈಡೆನ್ಸ್ ಕೊಡುವುದಕ್ಕೆ ಪರಿಣತ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ಮೇಲೆ ಯಾವ ಯಾವ ವಿದ್ಯಾರ್ಥಿಗಳು ಮುಂದೆ ಯಾವ ಯಾವ ಮಾರ್ಗದಲ್ಲಿ ಹೋದರೆ ಒಳ್ಳೆಯದಾಗುತ್ತ ಎಂಬುದನ್ನು ಆಯಾ ವಿದ್ಯಾರ್ಥಿಗಳ ಮನಸ್ಸಿನಲ್ಲಿರುವ ತೀವ್ರತೆಯನ್ನು ಅರ್ಥ ಮಾಡಿಕೊಂಡು ಮಾರ್ಗದರ್ಶನ ಮಾಡುವುದು ಅತಿ ಅವಶ್ಯಕತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದಕಾರಣ ಕೆಲವರಿಗೆ ಈ ಬಗ್ಗೆ ಟ್ರೈನಿಂಗ್ ಕೊಟ್ಟಾದರೂ ಪ್ರತಿ ಹೈಸ್ಕೂಲ್‌ನಲ್ಲಿಯೂ ಒಬ್ಬೊಬ್ಬರನ್ನು ನೇಮಕ ಮಾಡುವುದು ಅವಶ್ಯಕವಿದೆ ಎಂದು ಹೇಳುತ್ತೇನೆ. ಎಸ್.ಎಸ್.ಎಲ್.ಸಿ. ಮುಗಿಸಿದ ಮೇಲೆ ಯಾರು ಯಾವ ಕಡೆಗೆ ಹೋಗಬೇಕು ಎಂಬ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಅವರ ತಂದೆತಾಯಿಗಳಿಗೆ ಮಾರ್ಗದರ್ಶನ ಮಾಡುವುದು ಅವಶ್ಯಕವೆಂದು ನಾನು ತಿಳಿದು ಕೊಂಡಿದ್ದೇನೆ. ಈ ರೀತಿ ಮಾರ್ಗದರ್ಶನ ಮಾಡಲು ಕೆಲವು ಕಡೆ ಕೆರಿಯರ್ ಮಾಸ್ಟರ್ ಎಂದು ಇದ್ದಾರೆಂದು ನಾನು ಕೇಳಿದ್ದೇನೆ. ಆ ಹೆಸರನ್ನಾದರೂ ಇಡಿ: ಅಥವಾ ಗೈಡೆನ್ಸ್ ಟೀಚರ್ಸ್ ಎಂದು ಹೆಸರನ್ನಾದರೂ ಇಡಿ, ಮುಖ್ಯವಾಗಿ ಇಂತಹ

ಹುದ್ದೆಗಳನ್ನು ನಿರ್ಮಾಣ ಮಾಡಿ ಪ್ರತಿಯೊಂದು ಹೈಸ್ಕೂಲ್‌ಗೂ ಒಬ್ಬೊಬ್ಬರನ್ನು ನೇಮಕ ಮಾಡುವುದು ಅವಶ್ಯಕವೆಂದು ನಾನು ತಿಳಿದಿದ್ದೇನೆ. ಇದರ ಕಡೆಗೆ ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ಈ ಸೂಚನೆ ಮಾಡುವುದಕ್ಕೆ ಇಚ್ಛೆ ಪಡುತ್ತೇವೆ.

Mr. Chairman (Sri H. T. Krishnappa) in the Chair

೩-೩೦ ಪಿ.ಎಂ.

ಮಾನ್ಯ ಅಧ್ಯಕ್ಷರೇ, ಕೊಠಾರಿ ಆಯೋಗದವರು ೧೯೬೬ರಲ್ಲಿ ಏನು ಶಿಫಾರಸು ಕೊಟ್ಟರು, ಅದರ ಆಧಾರದ ಮೇಲೆ ವರ್ಕ್ ಎಕ್ಸ್‌ಪೀರಿಯನ್ಸ್ ಈ ಕ್ರಾಫ್ಟ್ ಎಜುಕೇಷನ್ ಅಥವಾ ಬೇಸಿಕ್ ಎಜುಕೇಷನ್ ಇವುಗಳು ಬಗ್ಗೆ ನಾವು ಹೆಚ್ಚು ಆಸಕ್ತಿಯನ್ನು ವಹಿಸಿ ತಿಳಿಸುತ್ತಾ ಇದ್ದೆವು. ಇವತ್ತಿನ ದಿವಸ ವರ್ಕ್ ಎಕ್ಸ್‌ಪೀರಿಯನ್ಸ್ ಬಗ್ಗೆ ಹುಡುಗರಿಗೆ ಪ್ರೌಢಶಾಲಾ ಮಟ್ಟದಲ್ಲಿ ತರಬೇತಿ ಕೊಡುವುದಕ್ಕೆ ಇಂಟ್ರಡ್ಯೂಸ್ ಮಾಡಿದ್ದೀರಿ. ಆದರೆ ಅದೂ ಕೂಡ ಪರಿಪೂರ್ಣ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳ ಬೇಕಾಗಿದೆ. ಅಲ್ಲಿ ಎಕ್ವಿಪ್‌ಮೆಂಟ್ ಸರಿಯಾಗಿರಲಿಲ್ಲ, ಸಾಕಷ್ಟು ವ್ಯವಸ್ಥೆ ಇಲ್ಲ. ಈ ಒಂದು ದೃಷ್ಟಿ ಕೋನದಿಂದ ಹೇಳುವುದಾದರೆ, ಅಲ್ಲಿನ ಸಾಧನೆ ಗಣನೀಯ ಪ್ರಮಾಣದಲ್ಲಿ ಆಗಿಲ್ಲ ಎಂದು ಹೇಳಬೇಕಾಗುತ್ತದೆ. ಹಾರ್ಟಿಕಲ್ಚರ್ ಬಗ್ಗೆಯಾಗಲೀ, ವೀವಿಂಗ್ ಬಗ್ಗೆಯಾಗಲೀ ಅಥವಾ ಸ್ಮಿತಿ ಬಗ್ಗೆಯಾಗಲೀ, ಹೀಗೆ ಹಲವಾರು ವಿಷಯದಲ್ಲಿ ಮಕ್ಕಳಿಗೆ ಅಭ್ಯಾಸವನ್ನು ಕೊಡತಕ್ಕ ಕಾಲದಲ್ಲಿ ಸಾಧನೆ ಗಣನೀಯವಾಗಿ ಆಗಿಲ್ಲ. ನಮ್ಮಲ್ಲಿ ಒಂದು ರೀತಿಯ ಒಣ ಪ್ರತಿಷ್ಠೆ ಬೆಳೆದುಕೊಂಡು ಬಂದಿದೆ. ದೊಡ್ಡ ಹುದ್ದೆಯಲ್ಲಿದ್ದು, ಟೈ ಕಟ್ಟಿಕೊಂಡು ಬರುವವರು ದೊಡ್ಡ ಮನುಷ್ಯರು, ಎನ್ನುವುದು. ಕಾರ್ಖಾನೆಗಳಲ್ಲಿ ಕಾರ್ಮಿಕನಾಗಿ ಕೆಲಸ ಮಾಡುವವರಿಗೆ ಸಮಾಜದಲ್ಲಿ ಮಾನ್ಯತೆ ಇಲ್ಲದೇ ಇರುವುದು - ಈ ರೀತಿ ಒಂದು ವಾತಾವರಣ ಬೆಳೆದು ಕೊಂಡು ಬಂದಿದೆ. ಇದನ್ನು ಹೋಗಲಾಡಿಸಬೇಕಾದರೆ, ಮಕ್ಕಳ ಮನಸ್ಸಿನ ಮೇಲೆ ಮೊದಲಿನಿಂದಲೇ ಪರಿಣಾಮ ಆಗಬೇಕು. ಎಳೆಯ ವಯಸ್ಸಿನಲ್ಲೇ ಈ ದೃಷ್ಟಿಕೋನ ಬದಲಾವಣೆಯಾಗಬೇಕಾದರೆ, ಅವರ ಸ್ವಂತ ಕೈಯಲ್ಲೇ ಕೆಲಸ ಮಾಡತಕ್ಕ ಒಂದು ವಾತಾವರಣ ನಿರ್ಮಾಣ ಮಾಡಬೇಕಾದದು ಅತಿ ಅವಶ್ಯಕ ವಾದು ಕೊಠಾರಿ ಆಯೋಗದವರು, ಏನು ಒಂದು ಶಿಫಾರಸು ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರಲು ಸರಕಾರ ನಿರ್ಣಯ ತೆಗೆದುಕೊಂಡರೂ ಕೂಡ, ಯಶಸ್ವಿಯಾದಂಥ ಸಾಧನೆ ಈ ರಂಗದಲ್ಲಿ ಆಗಿಲ್ಲ ವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ನಾನು ಹೇಳುತ್ತೇನೆ, ಇದು ಅತ್ಯಂತ ಅವಶ್ಯಕವಾದುದರಿಂದ, ಇದರ ಬಗ್ಗೆ ಸರಕಾರದವರು ಕ್ರಮ ತೆಗೆದುಕೊಂಡು, ಈ ರಂಗವು ಫಲಪ್ರದವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಪೂರ್ವ ಜರ್ಮನಿ ಮತ್ತು ಕಮ್ಯೂನಿಸ್ಟ್ ದೇಶಗಳಲ್ಲಿ ಇದನ್ನು ಬಹಳ ಯೋಗ್ಯವಾದಂಥ ರೀತಿಯಲ್ಲಿ ಕಾರ್ಯರೂಪಕ್ಕೆ ತಂದಿದ್ದಾರೆ ಎಂದು ಕೇಳಿದ್ದೇನೆ. ಅಲ್ಲಿ ಒಂದು ವಾರಕ್ಕೆ ೪ ಪೀರಿಡುಗಳು ಇದರ ಬಗ್ಗೆ ತೆಗೆದುಕೊಂಡು ಸೂಚನೆ ಕೊಡುತ್ತಾರೆ ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲೂ ಕೂಡ ಈ ರೀತಿ ಒಂದು ವಾರಕ್ಕೆ ೪ ಪೀರೀಡು ಮಾಡಲಿ, ಅಥವಾ ಒಟ್ಟಾಗಿ ಸೇರಿಸಿ, ಎರಡು ತಿಂಗಳು ಮೂರು ತಿಂಗಳು ತೆಗೆದುಕೊಂಡು, ಫ್ಯಾಕ್ಟರಿಗಳಲ್ಲಿ ಬೇಕಾದರೆ ಕೆಲಸ ಮಾಡಿಸುವುದು, ತೋಟಗಾರಿಕೆ ಇಲಾಖೆಗಳಲ್ಲಿರುವ ತೋಟಗಳಲ್ಲಿ ತರಬೇತಿ ಕೊಡತಕ್ಕದು, ಹೀಗೆ ಕೊಡುವುದು. ಇಲ್ಲಿ ನನ್ನ ಒಟ್ಟಾರೆ ಅಭಿಪ್ರಾಯವೇನೆಂದರೆ ಏನು ವರ್ಕ್ ಎಕ್ಸ್‌ಪೀರಿಯನ್ಸನ್ನು ಮಕ್ಕಳಿಗೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ, ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಬೇಕು ಎನ್ನುವುದು. ವಾರಕ್ಕೆ ೪ ಪೀರಿಯಡ್ ತೆಗೆದುಕೊಂಡರೂ ಚಿಂತೆ ಇಲ್ಲ, ಒಟ್ಟಾರೆ ಒಂದು ವರ್ಷದಲ್ಲಿ ಒಂದು ತಿಂಗಳೋ, ಎರಡು ತಿಂಗಳೋ ತೆಗೆದುಕೊಂಡು, ಮಕ್ಕಳಿಗೆ ಒಂದು ಪರಿಜ್ಞಾನವನ್ನು ಉಂಟು ಮಾಡುವುದರ ಕಡೆಗೆ ಸರಕಾರ ಒಂದು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ವೇಸ್ಟೇಜ್ ಮತ್ತು ಸ್ಟಾಗ್ನೇಷನ್ ವಿಚಾರ. ಇದು ನಮ್ಮ ರಾಷ್ಟ್ರವನ್ನೇ ಪೀಡಿಸತಕ್ಕ ಮೂಲಭೂತವಾದ ಪ್ರಶ್ನೆ. ಇದೇನು ಕೇವಲ ಕರ್ನಾಟಕ ರಾಜ್ಯಕ್ಕೇ ಸೀಮಿತವಲ್ಲ. ಈ ಶಿಕ್ಷಣ ರಂಗದಲ್ಲಿ ಅನೇಕ ಜನ ಪರಿಜ್ಞಾನ ಇರತಕ್ಕ ಎಜುಕೇಷನಿಸ್ಟ್ಸ್ ಇದ್ದಾರೆ, ಅವರು ಹಲವಾರು ಲೇಖನಗಳನ್ನು ಬರೆದು, ಅಂಕಿ-ಅಂಶಗಳನ್ನು ಒದಗಿಸಿದ್ದಾರೆ ಎಂದು ಕೇಳಿದ್ದೇನೆ. ಪ್ರಾಥಮಿಕ ಶಾಲೆಗಳಲ್ಲಿ ಮೊದಲ ತರಗತಿಗೆ ೧೦೦ ಜನ ವಿದ್ಯಾರ್ಥಿಗಳು ಸೇರಿದರೆ, ೫ನೇ ತರಗತಿಗೆ ಬರುವ ವೇಳೆಗೆ ಸುಮಾರು ೬೦ ಪರ್ಸೆಂಟ್ ಹಿಂದೆಯೇ ಉದುರಿ ಹೋಗಿರುತ್ತಾರೆ. ಕೆಲವರು ಮಧ್ಯದಲ್ಲಿ ಬಿಟ್ಟುಬಿಡುವುದು, ಇನ್ನೂ ಕೆಲವರು ಒಂದೊಂದು ತರಗತಿಯಲ್ಲಿ ೩-೩ ವರ್ಷ ಫೇಲ್ ಆಗುವುದರ ಮುಖೇನ ಈ ಸ್ಟಾಗ್ನೇಷನ್ ಆಗಬಹುದು. ಇವತ್ತಿನ ದಿವಸ ಈ ಎರಡು ಹಂತದಿಂದ ಏನು ೬೦ ಪರ್ಸೆಂಟ್ ಸ್ಟಾಗ್ನೇಷನ್ ಮತ್ತು ವೇಸ್ಟೇಜ್ ಇದೆ. ಅದರಿಂದ ಯಾವುದೇ ಒಂದು ಫಲ ದೊರೆಯದೇ ಇರತಕ್ಕ ಒಂದು ಹೊರೆ ಸರಕಾರದ ಮೇಲೆ ಇದೆ. ಸುಮಾರು ನಲವತ್ತು ಕೋಟಿ ರೂಪಾಯಿಗಳವರೆಗೆ ನಾವು ಈ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ

ಕ್ಕಾಗಿ ಖರ್ಚು ಮಾಡುತ್ತಿದ್ದೇವೆ ಎಂದು ತಿಳಿದುಕೊಂಡಿದ್ದೇನೆ. ಇಷ್ಟು ಹಣದಲ್ಲಿ ಸುಮಾರು ಶೇಕಡ ೬೦ ವಿದ್ಯಾರ್ಥಿಗಳು ಈ ಎರಡು ಕಾರಣಗಳಿಗೋಸ್ಕರ ವಿದ್ಯೆ ಬಿಟ್ಟು ಹೋಗುತ್ತಾರಾ, ಆದರಿಂದ ಉಂಟಾಗ ತಕ್ಕ ನಷ್ಟ ಅಪಾರವಾಗಿದೆ. ಖರ್ಚು ಮಾಡತಕ್ಕ ಹಣದಿಂದ ಯಾವುದೇ ಫಲ ದೊರೆಯುತ್ತಾ ಇಲ್ಲ. ಆದುದರಿಂದ, ಇದರ ಬಗ್ಗೆ ಸರಕಾರ ಬಹಳ ತೀವ್ರತೆಯನ್ನು ತೋರಿಸಿ ಈ ಒಂದು ರೋಗಕ್ಕೆ ಮದ್ದನ್ನು ಹುಡುಕುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ರಾಷ್ಟ್ರ ಮಟ್ಟದಲ್ಲಿ ಕೂಡ ಅನೇಕ ಪರಿಣತರು ಇದರ ಬಗ್ಗೆ ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಒಂದು ಸ್ಟಾಗ್ನೇಷನ್ ಮತ್ತು ವೇಸ್ಟೇಜನ್ನು ಯಾವ ರೀತಿ ನಿವಾರಣೆ ಮಾಡಬೇಕೆಂಬ ಬಗೆ ನಿವಾರಣೋಪಾಯವನ್ನು ಸೂಚಿಸಿದ್ದಾರೆ. ಈ ಸೂಚನೆಗಳನ್ನು ಸರಕಾರದವರು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವೇಸ್ಟೇಜ್ ಮತ್ತು ಸ್ಟಾಗ್ನೇಷನ್ ಎನ್ನುವುದು ಬಹುಶಃ ಅನೇಕ ಮುಂದುವರಿದ ರಾಷ್ಟ್ರಗಳಲ್ಲೂ ಪ್ರಥಮದಲ್ಲಿ ಅನುಭವಿಸಿದ್ದಾರೆ, ನಮ್ಮ ದೇಶಕ್ಕೆ ಇದು ಸೀಮಿತವಲ್ಲ. ಹಲವಾರು ಕಡೆ ಈ ರೀತಿ ಅನುಭವಿಸಿರುವ ಬಗ್ಗೆ ಹಲವಾರು ನಿದರ್ಶನ ಗಳನ್ನು ಕೊಡಬಹುದು.

ಇನ್ನು ತಮಗೆ ಮತ್ತೊಂದು ಸೂಚನೆ ಕೊಡಬಯಸುತ್ತೇನೆ ಅದೇನೆಂದರೆ, ಶಾಲೆಗೆ ಮೊದಲು ಮಕ್ಕಳನ್ನು ಕಳುಹಿಸಿ ಆಮೇಲೆ, ಮನೆಯ ಕೆಲಸಕ್ಕೆ ವಾಪಸು ಕರೆದುಕೊಂಡು ಬಿಡುತ್ತಾರೆ. ಇದನ್ನು ತಡೆಗಟ್ಟುವುದರಿಂದ, ಈ ವೇಸ್ಟೇಜ್ ಮತ್ತು ಸ್ಟಾಗ್ನೇಷನ್ ಕಡಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಂದು ಹೇಳುತ್ತೇನೆ ಮತ್ತೊಂದು ವಿಷಯವೇನೆಂದರೆ, ಈಗ ೨-೩ ವರ್ಷ ಒಂದೇ ಸಮನೆ ಒಂದೇ ತರಗತಿಯಲ್ಲಿ ಫೇಲ್ ಆಗುವ ಮಕ್ಕಳಿಗೆ ಸ್ಪೆಷಲ್ ಕೋಚಿಂಗ್ ಕೊಡಬೇಕು. ಅದರಲ್ಲೂ ಸಮಾಜದಲ್ಲಿ ಉಪೇಕ್ಷಿಸಲ್ಪಟ್ಟ ವರ್ಗ ಏನು ಇದೆ, ಅವರಿಗೆ ಕೊಡತಕ್ಕದ್ದು ಒಳ್ಳೆಯದು. ಇದರಿಂದ, ಈ ರಂಗದಲ್ಲಿ ಒಂದು ಒಳ್ಳೆಯ ಸಾಧನೆಯಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕಾಲೇಜು ವಿದ್ಯಾಭ್ಯಾಸ ಮಟ್ಟದಲ್ಲಿ ಹೇಳುವುದಾದರೆ, ಇದರ ಬಗ್ಗೆ ದೇವೇಗೌಡರು ಏನೋ ಅಸಮಾಧಾನದಿಂದ ಹೇಳುತ್ತಿದ್ದಾರೆ ಎಂಬ ಭಾವನೆ ಬರಬಾರದು, ನಿಮ್ಮ ವರ್ಗದ ಮಕ್ಕಳಿಗೆ ಇಂಜಿನಿಯ ರಿಂಗ್ ಕೋರ್ಸ್‌ನಲ್ಲಿ ಅಥವಾ ಮೆಡಿಕಲ್ ಕಾಲೇಜಿನಲ್ಲಿ ೭-೮ ವರ್ಷ ಪಾಸು ಮಾಡದೇ ಇರುವುದು ಒಳ್ಳೆಯದಲ್ಲ. ಅವರಿಗೆ ೭-೮ ವರ್ಷಗಳ ಕಾಲ ಖರ್ಚು ಮಾಡುತ್ತೀರಲ್ಲ ಅದೇ ಹಣವನ್ನು ಅವರಿಗೆ ಕೋಚಿಂಗ್ ಕೊಡಿ, ಬೇಕಾದರೆ ಈಗ ಖರ್ಚು ಮಾಡುತ್ತಾ ಇರುವುದಕ್ಕಿಂತ ದ್ವಿಗುಣವಾಗಿ ಖರ್ಚು ಮಾಡಿ ನಾನು ಬೇಡ ಎನ್ನುವುದಿಲ್ಲ. ಅಂತೂ ಅವರು ಒಂದು ರೀತಿಯ ಮಾನಸಿಕ ದೌರ್ಬಲ್ಯಕ್ಕೆ ಗುರಿಯಾಗ ಬಾರದು. ಈ ವರ್ಷ ಫೇಲ್ ಆದರೆ, ಬರುವ ವರ್ಷ, ನಾಳೆ ವರ್ಷ ಫೇಲ್ ಆದರೆ, ಇನ್ನೊಂದು ವರ್ಷ ಮಾಡಿಕೊಳ್ಳಬಹುದು ಎನ್ನುವ ಮಾನಸಿಕ ದೌರ್ಬಲ್ಯ ಅವರಲ್ಲಿ ಬರಬಾರದು. ಅವರು ಪಾಸು ಆಗು ವುದಕ್ಕೆ ಸರಿಯಾದ ವ್ಯವಸ್ಥೆಯೊಂದನ್ನು ಮಾಡಬೇಕು, ಬೇಕಾದರೆ, ಈಗ ಖರ್ಚು ಮಾಡುತ್ತಿರುವ ಹಣ ಕ್ಕಿಂತ ಹತ್ತು ಪಟ್ಟು ಹೆಚ್ಚು ಖರ್ಚು ಮಾಡಿ. ಮೆಡಿಕಲ್ ಡಿಗ್ರಿ ಇರಲಿ, ಇಂಜಿನಿಯರಿಂಗ್ ಡಿಗ್ರಿ ಇರಲಿ, ಯಾವುದೇ ಡಿಗ್ರಿ ಇರಲಿ ಈಗ ಇರುವುದಕ್ಕೆ ಅವಕಾಶ ಕೊಡದೆ, ಇದನ್ನು ಪುನರ್ ಪರಿಶೀಲನೆ ಮಾಡು ವುದು ಒಳ್ಳೆಯದೆಂದು ಹೇಳಿ, ಈ ಸಂದರ್ಭದಲ್ಲಿ ಇದು ಸರಕಾರಕ್ಕೆ ಸಾಧುವಾದುದಾದರೆ, ಇದನ್ನು ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇನ್ನು ನಾನು ಟೆಕ್ನಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯ ದಲ್ಲಿ ಇವೊತ್ತು ಅದು ಕೂಡ ಬಹಳ ಬೃಹದಾಕಾರವಾಗಿ ಬೆಳೆದಿದೆ. ಈ ರೀತಿ ಬೆಳೆದಿರುವುದು ಏನಾಗಿದೆ ಎಂದರೆ ಕೆಲಸ ಸಿಕ್ಕದೆ ಹುಡುಗರು ಇವೊತ್ತು ಬೀದಿ ಬೀದಿ ಅಲೆಯುವ ಸ್ಥಿತಿ ಬಂದಿದೆ. ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಈ ರೀತಿ ಅನೇಕ ಕಾಲೇಜುಗಳನ್ನು ಮಾಡಿದ್ದಾರೆ. ಆದರೆ ಈ ಟೆಕ್ನಿಕಲ್ ಇಂಜಿನಿಯರಿಂಗ್ ಬಗ್ಗೆ ಎಷ್ಟು ಹೇಳಿದರೂ ತೀರದು. ಈಗ ೧೦–೧೨ ವರ್ಷ ಆದರೂ ಇವೊತ್ತು ನಾವು ಆ ಮಕ್ಕಳಿಗೆ ಯಾವ ರೀತಿ ಕೆಲಸ ಕೊಡಿಸಲಿಕ್ಕೆ ಆಗುವುದಿಲ್ಲ. ಡಿಪ್ಲೊಮೊ ಇನ್ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿ ಕಲ್ ಇಂಜಿನಿಯರಿಂಗ್ ಆದವರ ಹದಿನೈದು ಜನರಿಗೆ ಕೆಲಸ ಇಲ್ಲ. ಒಂದು ಕಡೆ ನಿರುದ್ಯೋಗ ಸಂಖ್ಯೆ ದ್ವಿಗುಣವಾಗುತ್ತಾ ಇದೆ, ತ್ರಿಗುಣ ಆಗುತ್ತಾ ಇದೆ. ಹತ್ತು ಪಟ್ಟು ಹೆಚ್ಚು ಬೆಳೆಯುತ್ತಿದೆ. ಇನ್ನೊಂದು ಕಡೆ ವಿದ್ಯಾಭ್ಯಾಸದ ಮೇಲೆ ಖರ್ಚು ಮಾಡುವ ಹಣದ ಪ್ರಯೋಜನ ಸಮಾಜಕ್ಕೆ ದೊರೆಯುತ್ತಾ ಇಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು. ಈ ದೃಷ್ಟಿಕೋನದಲ್ಲಿ ಸರ್ಕಾರ ಸ್ವಲ್ಪ ಪುನರ್ ಪರಿಶೀಲನೆ ಮಾಡುವ ಕಾಲ ಬಂದಿದೆ. ಇದು ಅವಶ್ಯಕ. ಇವೊತ್ತು ನಮಗೆ ಎಷ್ಟು ಅವಶ್ಯಕರದೆಯೋ ಅಷ್ಟು ತರಬೇತಿ ಮಾಡುವುದು ಒಳ್ಳೆಯದು. ಒಂದು ವಿಷಯ ತರಬೇತಿ ಮಾಡತಕ್ಕ ಕಾಲದಲ್ಲಿ, ತಾಂತ್ರಿಕ ತರಬೇತಿ ಕೊಡತಕ್ಕ ಕಾಲದಲ್ಲಿ the requirement of the country should be assessed. ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮಾ, ಮೆಕಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮ ಆದವರು ಎಷ್ಟು ಜನ

ಬೇಕು ಎಂಬ ಒಂದು ಅಂದಾಜು ಇರಬೇಕು. ಈಸ್ಟ್ ಜರ್ಮನಿಯೊಳಗೆ ಇದನ್ನು ಯಶಸ್ವಿಯಾಗಿ ಮಾಡಿದ್ದಾರೆ ಎಂದು ಕೇಳಿದ್ದೇನೆ. ಅಲ್ಲಿ ಕಾರಣ ಕಮ್ಯುನಿಸ್ಟ್ ಕಂಟ್ರಿ ಅಲ್ಲಿ ಮಾಡಿದಂತೆ ಎಲ್ಲರಿಗೂ ಮಾಡುವುದಕ್ಕೆ ಸಾಧ್ಯವಿಲ್ಲ. ರಿಕ್ವಯರ್‌ಮೆಂಟ್ ಅಸೆಸ್ ಮಾಡುವಾಗ ಅಲ್ಲಿ ಕರಾರುವಾಕ್ಕಾಗಿ ಮಾಡಿದ್ದಾರೆ. ಹಾಗೆ ಇಲ್ಲಿ ಮಾಡುವುದಕ್ಕಾಗುವುದಿಲ್ಲ. ನಾವು ಮುಂದುವರೆದಿರಬಹುದು. ಏನೇ ಇರಲಿ ನಮ್ಮ ಯೋಜನೆಗಳನ್ನು ಮಾಡುವಾಗ ಖಾಸಗಿ ರಂಗದಲ್ಲೂ ಕೂಡ ಪರ್ಮನೆಂಟ್ ಯೋಜನೆಗಳನ್ನು ಮಾಡುವುದಕ್ಕೆ ನಿರ್ಣಯ ಮಾಡಿಕೊಂಡಿರುತ್ತೇವೆ. ಪ್ರೈವೇಟ್ ಸೆಕ್ಟರ್ ಇಂಟರೆಸ್ಟ್ ಬೆಳೆಯಬೇಕೆಂದು ನಿರ್ಣಯ ಮಾಡಿಕೊಂಡಿದ್ದೇವೆ, ಅದಕ್ಕೆ ಇರತಕ್ಕ ಬಂಡವಾಳ ಕರಾರುವಾಕ್ಕಾಗಿ ಇಲ್ಲದೇ ಇದ್ದರು ಒಂದು ರಫ್ ಆಗಿ ಮಾಡಿರುತ್ತೇವೆ. ನಮ್ಮ ಪ್ಲಾನ್ ರಿಕ್ವಯರ್‌ಮೆಂಟ್ ನೋಡುವಾಗ ನಮ್ಮ ಇನ್‌ಟೇಕ್ ಎಷ್ಟು ಇರಬೇಕು ಎಂದು ನಿರ್ಣಯ ಮಾಡಬೇಕಾಗುತ್ತದೆ. ಈಗ ಸಿಕ್ಕಾಪಟ್ಟೆ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಾ ಇದೆ.

ಈ ಟೆಕ್ನಿಕಲ್ ಎಜುಕೇಷನ್ ಬಗ್ಗೆ ಮಾತ್ರ ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಈಗ ಡೈವರ್‌ಸಿಫಿಕೇಷನ್ ಆಫ್ ಎಜುಕೇಷನ್ ಕೂಡ, ಮಾಡುವ ಅಗತ್ಯ ಕಂಡುಬಂದಲ್ಲಿ ಮಾಡಬೇಕು. ಈಗ ಹಳೇ ಕಾಲದ ಇಂಜಿನಿಯರಿಂಗ್, ಸಿವಿಲ್ ಡಿಪ್ಲೊಮಾ ಅವಶ್ಯಕ ಇಲ್ಲ. If need be, we must have a diversified education so far as technical education is concerned to suit our own requirements ಅದು ಅತಿ ಅವಶ್ಯಕ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಅನಂತರ ಅಡ್ಮಿಷನ್ ತಮ್ಮ ರಿಕ್ವಯರ್‌ಮೆಂಟ್‌ಗೆ ಅನುಸಾರವಾಗಿ ಅದನ್ನು ರಿಸ್ಟ್ರಿಕ್ಟ್ ಮಾಡುವಾಗ ಎಲ್ಲಾ ವರ್ಗಕ್ಕೂ ಕೂಡ, ಪ್ರಪೋರ್ಷನೇಟ್ ಕೋಟ ಮಾಡಿ, ಷೆಡ್ಯೂಲ್ಡ್ ಕ್ಲಾಸ್‌ಗೆ ೬೦ ಸೀಟು ಇದ್ದರೆ ೨೨ ಮಾಡುವುದು, ಫಾರ್‌ವಾರ್ಡ್ ಕ್ಲಾಸ್‌ಗೆ ಪ್ರಪೋರ್ಷನೇಟ್ ಕೋಟ ಮಾಡಿ. ರಿಸ್ಟ್ರಿಕ್ಟ್ ಮಾಡುವಾಗ ಯಾವುದೇ ಒಂದು ಮೆರಿಟ್ ಮೇಲೆ ಮಾಡಬೇಕಾಗಿಲ್ಲ, ಇಲ್ಲವಿದ್ದರೆ ಸಾಮಾಜಿಕ ನ್ಯಾಯ ದೊರಕಿಸಿಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರ ಇದನ್ನು ಯೋಚನೆ ಮಾಡಬೇಕೆಂದು ಸಲಹೆ ಕೊಡುತ್ತೇನೆ.

ಇನ್ನು ಯೂನಿವರ್ಸಿಟಿ ಬಗ್ಗೆ ಬಹುಶಃ ನಮ್ಮ ಮನೆಯ ಮುಂದೆ ಇದಕ್ಕೆ ಸಂಬಂಧಪಟ್ಟ ಕಾಮನ್ ಯೂನಿವರ್ಸಿಟಿ ಬಿಲ್ ಬರುವ ಕಾಲದಲ್ಲಿ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಯೂನಿವರ್ಸಿಟಿ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಈಗ ಎಲ್ಲರಿಗೂ ಡಿಗ್ರಿ ತೆಗೆದುಕೊಳ್ಳಬೇಕು ಎಂಬ ಒಂದು ವ್ಯಾಮೋಹ ಇದೆ. ೪೦ ಪರ್ಸೆಂಟ್ ೪೫ ಪರ್ಸೆಂಟ್ ಬಂದರು ಸರಿಯೇ. ಅದನ್ನು ರಿಸ್ಟ್ರಿಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ, ಈಗ ಸಮಾಜದಲ್ಲಿರತಕ್ಕ ದುರ್ಬಲ ವರ್ಗ, ಹಿಂದುಳಿದ ವರ್ಗ ಪ್ರಾಮಾಣಿಕವಾಗಿ ವಿದ್ಯಾಭ್ಯಾಸದಲ್ಲಿ ಅವರು ಬೆಳೆಯುವುದಕ್ಕಾಗಿಲ್ಲ, ಆದುದರಿಂದ ಅದನ್ನು ರಿಸ್ಟ್ರಿಕ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಒಪ್ಪಿಕೊಳ್ಳುತ್ತೇನೆ ಈ ಬಗ್ಗೆ ಒಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ರಿಸ್ಟ್ರಿಕ್ಟ್ ಮಾಡುವುದಾದರೆ ನೀವು ಒಂದು ತಿಂಗಳು ಉಳಿಯುವುದಕ್ಕಾಗುವುದಿಲ್ಲ. ಇದು ರಾಜಕೀಯವಾಗಿ ಯೋಚನೆ ಮಾಡಬೇಕಾಗುತ್ತದೆ. ಅದು ಒಳ್ಳೆಯ ಕಠಿಣವಾದ ಪ್ರಶ್ನೆ. ಮಾನ್ಯ ಸಿ. ಡಿ. ದೇಶಮುಖ್ ಅವರು ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ ಚೇರ್‌ಮನ್ ಆಗಿದ್ದಾಗ ಉದ್ದವಾದ ಭಾಷಣ ಮಾಡಿದ್ದಾರೆ ಎಲ್ಲಾ ರಾಜ್ಯ ಸಚಿವರು ಒಪ್ಪಿಕೊಂಡು ಬಂದರು ಅದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಯಾರಿಗೂ ಸಾಧ್ಯವಾಗಲಿಲ್ಲ. ಒಂದು ಯೋಚನೆ ಮಾಡಿ ನಮ್ಮಲ್ಲಿ ಡಿಗ್ರಿ ತೆಗೆದುಕೊಂಡಿರುವವರು ಫಸ್ಟ್ ಡಿವಿಜನ್ ಗುಮಾಸ್ತರು. ಈಗ ನಾವು ಏನು ಮಾಡುತ್ತಿದ್ದೇವೆ Minimum qualification prescribed for a First Division Clerk is that he should possess a degree of any recognised University. ಈಗ ಅದು ಬೇಕೆ? ತಾವು ಅದನ್ನು ಯೋಚನೆ ಮಾಡಬೇಕು, ಜನರಲ್ ಎಜುಕೇಷನ್ ನಾವು ಹೈಸ್ಕೂಲುಗಳ ಹಂತದಲ್ಲಿ ಕೊಡುತ್ತೇವೆ. ಅದು ಆದ ಮೇಲೆ ಅವನು ಫಸ್ಟ್ ಡಿವಿಜನ್ ಗುಮಾಸ್ತ ಆಗಬೇಕಾದರೆ ಡಿಗ್ರಿ ತೆಗೆದುಕೊಳ್ಳಬೇಕು, ನೋಟಿಂಗ್ ಹಾಕುವುದಕ್ಕೆ ಭಾಷಾ ಪರಿಣತೆ ಇರಬೇಕು, ಹೀಗೆ ಕೆಳಗಡೆಯಿಂದ ಬಂದಂಥ ರೆಕಾರ್ಡನ್ನು ಪ್ರೊಸಸ್ ಮಾಡಿ ಮ್ಯಾನೇಜ್ ಮಾಡತಕ್ಕ ಅನುಭವ ಬೇಕಾಗುತ್ತದೆ. ನೀವು ಅದಕ್ಕೆ ವ್ಯವಸ್ಥೆ ಮಾಡಿದರೆ Instead of gonig to a College to take a degree to become a First Division Clerk, he will try to take this Course. ನಾಲ್ಕು ವರ್ಷ ಕಾಲೇಜಿಗೆ ಹೋಗಿ ಒದ್ದಾಡಿ ಮೂರನೆ ದರ್ಜೆ ಡಿಗ್ರಿ ತೆಗೆದುಕೊಂಡರು ಕೆಲಸ ಸಿಕ್ಕುವುದಿಲ್ಲ ಹೀಗೆ ಮೂರನೆ ದರ್ಜೆಯಲ್ಲಿ ಪಾಸ್ ಮಾಡಿದ ಗ್ರ್ಯಾಜುಯೇಟ್‌ಗಳಿಗೆ ಡಿಪಾರ್ಟ್‌ಮೆಂಟಲ್ ಕಮಿಟಿ ಆಗಲಿ ಅಥವಾ ಇತರೆ ಯಾವುದರಲ್ಲೂ ಇಂಟರ್‌ವ್ಯೂ ಸಿಕ್ಕುವುದಿಲ್ಲ. ಗ್ರಾಮಾಂತರಪ್ರದೇಶಗಳಿಂದ ಬಂದ ಹುಡುಗರಿಗೆ ೧೦ ಪರ್ಸೆಂಟ್ ಆ್ಯಡ್ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರಿಗೆ ತಿಳಿಸಿದ್ದೇನೆ, ಯೋಚನೆ ಮಾಡುತ್ತೇವೆ ಎಂದು ಹೇಳಿ

ದ್ದಾರೆ. ನಿಮ್ಮ ಸೇವಾ ನಿಯಮಗಳಲ್ಲಿ ಸ್ವಲ್ಪ ಮಾರ್ಪಡು ಮಾಡಿ, Graduate of a University ಎನ್ನುವುದರ ಬದಲು if you say minimum qualification fixed S.S.L.C. with this training is the required qualification for a First Division Clerk, naturally he will prefer to take this training. ಹೀಗೆ ಮಾಡಿದರೆ ನಾಳೆಯೇ he will run for this subject instead of going college, ಈ ಒಂದು ರೀತಿಯಲ್ಲಿ ಮಾರ್ಪಾಡುಗಳನ್ನು ಮಾಡುವ ಮುಖಾಂತರ ಕಾಲೇಜಿನಲ್ಲಿ ಪ್ರವೇಶಕ್ಕೆ ಮಕ್ಕಳ ಒತ್ತಡ ಕಡಿಮೆ ಮಾಡಲು ಸಾಧ್ಯವಿದೆ. ನಾವು ರಿಸ್ಟ್ರಿಕ್ಷನ್ ಮಾಡುವುದು ಅಲ್ಲ It is upto him to choose the path that he likes But we must prepare the ground. ಈ ಒಂದು ಅವಕಾಶಗಳನ್ನು ಕಲ್ಪಿಸಿಕೊಡಿ ಕಾಲೇಜುಗಳಿಗೆ ಮಕ್ಕಳು ಹೋಗಬೇಕು, ಈಗ ಅಡ್ಮಿಷನ್ ಒತ್ತಡ ಇದೆ, ಇದನ್ನು ಕಡಿಮೆ ಮಾಡುವುದಕ್ಕೆ ಈ ರೀತಿ ಸಾಧ್ಯವಿದೆ ಎಂದು ತಮ್ಮ ಮುಂದೆ ಈ ಸಲಹೆಯನ್ನು ಇಡುತ್ತಿದ್ದೇನೆ ಇಂತಹ ಮಾರ್ಗಗಳು ಹಲವಾರು ಇವೆ ಅದರ ಬಗ್ಗೆ ಅಲೋಚನೆ ಮಾಡಿ ಎಂದು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಇವತ್ತು ಯೂನಿವರ್ಸಿಟಿಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಯೂನಿವರ್ಸಿಟಿಗಳಲ್ಲಿ ಇವತ್ತು ಹೊರಗಿನವರು ಹಸ್ತಕ್ಷೇಪ ಮಾಡುವುದು ಕಡಿಮೆಯಾದರೆ ಅವು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದು ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ ಎಲ್ಲಾ ಪಕ್ಷದವರೂ ಪ್ರವೇಶ ಮಾಡಿದ್ದಾರೆ, ಖಾಸಗಿ ಮುಖಂಡರ ಪ್ರವೇಶ ಕೂಡ ಆಗುತ್ತದೆ. ಇವುಗಳ ಪರಿಣಾಮದಿಂದ ಯೂನಿವರ್ಸಿಟಿಗಳನಲ್ಲಿ ಕೆಲಸ ಉತ್ತಮ ರೀತಿಯಲ್ಲಿ ನಡೆಯಲಿಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಮ್ಮ ರಾಷ್ಟ್ರದ ಒಬ್ಬರು ಪರಿಣತರು ಶ್ರೀಮಾನ್ ಪಾಟೀಲರವರು ಗವರ್ನರಾಗಿ, ವೈಸ್-ಛಾನ್ಸಲರಾಗಿ ಇದ್ದರು, ಅವರು ಹೊರಗಿನವರ ಹಸ್ತಕ್ಷೇಪದಿಂದ ಯೂನಿವರ್ಸಿಟಿಗಳಲ್ಲಿ ಗೊಂದಲ ಕ್ಷೋಭೆಗೆ ಕಾರಣ ಎಂದು ಹೇಳಿದ್ದಾರೆ. ಸಾಧ್ಯವಾದ ಮಟ್ಟಿಗೆ ಯೂನಿವರ್ಸಿಟಿಗಳಲ್ಲಿ ಹಸ್ತಕ್ಷೇಪ ಕಡಿಮೆ ಮಾಡಲಿಕ್ಕೆ ಮತ್ತು ತಮ್ಮ ಕೆಲಸವನ್ನು ನಿರ್ವಹಣೆ ಮಾಡಲಿಕ್ಕೆ ಕಾಮನ್ ಯೂನಿವರ್ಸಿಟಿ ಬಿಲ್ ಬಂದಾಗ ವಿವರವಾಗಿ ಪಸ್ತಾಪ ಮಾಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ಪಬ್ಲಿಕ್ ಲೈಬ್ರರಿ ಬಿಲ್ಲನ್ನು ಕೂಡ ಪಾಸ್ ಮಾಡಿಕೊಂಡಿದ್ದಾರೆ. ಶ್ರೀಮಾನ್ ಕಂಠಿಯವರು ಇದ್ದಾಗ ೧೯೬೫ನೇ ಇಸವಿಯಲ್ಲಿ ಪಾಸ್ ಆಯಿತು, ೧೦ ವರ್ಷಗಳಾಯಿತು. ಆದರೆ ಪಬ್ಲಿಕ್ ಲೈಬ್ರರಿ ಸಮರ್ಪಕವಾಗಿ ಕೆಲಸಮಾಡುತ್ತಿಲ್ಲ. ಇದರಲ್ಲಿ ಸೇವಾ ನಿಯಮ ಕೂಡ ಇಲ್ಲ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಬಂದ ಮೇಲೆ ಕ್ರಮ ತೆಗೆದುಕೊಂಡಿದ್ದೇನೆ ಎಂದು ಹೇಳಿದರು, ಅದಕ್ಕಾಗಿ ಅವರಿಗೆ ವಂದಿಸುತ್ತೇನೆ. ಅದರಲ್ಲಿ ಡೈಲಿ ವೇಜಸ್‌ಗೆ ಕೆಲಸಮಾಡತಕ್ಕ ಹುಡುಗರು ನೂರಾರು ಜನ ಇದ್ದಾರೆ. ಅವರು ಸತ್ಯಾಗ್ರಹ, ಗಲಾಟೆ ಮಾಡಿ ಸರ್ಕಾರಕ್ಕೂ ಕೂಡ ಒಂದು ಮನವಿಯನ್ನು ಕೊಟ್ಟಿದ್ದಾರೆ. ನಾವು ಹಿಂದೆ ಪಬ್ಲಿಕ್ ಲೈಬ್ರರಿಯಲ್ಲಿರತಕ್ಕ ದೋಷಗಳ ಬಗ್ಗೆ ಕೂಡ ಚರ್ಚೆಮಾಡಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಿರಿ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಒಂದು ವಿಷಯ ಮಾತ್ರ ಹೇಳುತ್ತೇನೆ. ಪಬ್ಲಿಕ್ ಲೈಬ್ರರಿಯಲ್ಲಿ ಕೆಲಸ ಮಾಡತಕ್ಕ ಹಂಗಾಮಿ ನೌಕರರು ಏನಿದ್ದಾರೆ ಅವರು ೬ ವರ್ಷ, ೭ ವರ್ಷ, ೮ ವರ್ಷ, ೯--೧೦ ವರ್ಷ ಕೆಲಸ ಮಾಡಿದ್ದಾರೆ, ಅವರನ್ನು ಮನೆಗೆ ಕಳಿಸುವುದು ಬೇಡ. ಅವರ ಕೆಲಸವನ್ನು ಖಾಯಂ ಮಾಡಬೇಕು ಎನ್ನುವ ಬೇಡಿಕೆ ಇಟ್ಟಿದ್ದಾರೆ. ಆ ಮನವಿಯನ್ನು ಪುರಸ್ಕರಿಸಬೇಕು ಎಂದು ತಮಗೆ ತಿಳಿಸಲಿಕೆ ಇಚ್ಛೆಪಡುತ್ತೇನೆ. ಈಗ ಅನೇಕ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿಗಳನ್ನು ಸ್ಥಾಪನೆ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಂಡ್ಯದಲ್ಲೂ ಸೇರಿ [illegible] ಆಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಇನ್ನೂ ಗುಲ್ಬರ್ಗ, ಬೀದರ್ ಕಡೆಗಳಲ್ಲಿ ಆಗಿಲ್ಲ. ಆದುದರಿಂದ ಅಂಥಾ ಕಡೆ ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರರಿಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಲೈಬ್ರರಿ ಸೆಸ್ ೬೦--೭೦ ಲಕ್ಷ ರೂಪಾಯಿ ಇದೆ ಸಂಗ್ರಹಮಾಡಿರತಕ್ಕ ಈ ಮೊತ್ತವನ್ನು ಉಪಯೋಗ ಮಾಡಿಕೊಂಡಿಲ್ಲ. ಯಾವ ಉದ್ದೇಶದಿಂದ ಲೈಬ್ರರಿ ಆಕ್ಟನ್ನು ಸಭೆಯ ಮುಂದೆ ತಂದು ಆ ಮೇಲೆ ಅಮಲಿಗೆ ತಂದೆದ್ದು, ಆ ಆಕ್ಟಿನ ತಹಹದಿಯಲ್ಲಿ ಏನು ಕಾರ್ಯಗಳು ಆಗಬೇಕೋ ಅದನ್ನು ಮಾಡುವುದಕ್ಕೆ ಸರ್ಕಾರ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಅಲ್ಲಿ ಬುಕ್ಸ್ ಪರ್ಚೇಸ್ ಮಾಡುವುದರಲ್ಲಿ ಒಂದು ದೊಡ್ಡ ರಾಕೆಟ್ ಇದೆ ಎಂದು ಕೇಳಿದ್ದೇನೆ, ಅದರ [illegible] ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಆಶಯವನ್ನು ವ್ಯಕ್ತಪಡಿಸಲಿಕ್ಕೆ ಇಷ್ಟಪಡುತ್ತೇ[illegible] ಇವತ್ತು ಸ್ಕೂಲ್‌ಗಳಲ್ಲಿ ಲೈಬ್ರರಿಗಳು ಇವೆ, ಅನೇಕ ಸ್ಕೂಲ್‌ಗಳಲ್ಲಿ ಲೈಬ್ರರಿಯನ್ಸೇ ಇಲ್ಲ. [illegible] ೨೫೦೦ ಹೈಸ್ಕೂಲ್‌ಗಳಲ್ಲಿ ೨೦೦ ೩೦೦ ಜನ ಲೈಬ್ರರಿಯನ್ಸ್ ಇದ್ದಾರೋ

ಇಲ್ಲವೋ. ಬಹುಶಃ ಅವರು ಇನ್‌ಚಾರ್ಜ್ ಅರೇಂಜ್‌ಮೆಂಟ್ಸ್ ಮಾಡಿಕೊಂಡಿರುತ್ತಾರೆ, Holding additional charge of the Libraries. ಯಾರೋ ಒಬ್ಬ ಟೀಚರನ್ನು ಲೈಬ್ರರಿಯಲ್ಲಿ ಇನ್ ಚಾರ್ಜ್ ಹಾಕಿರುತ್ತಾರೆ. ಬಹುಶ: ಇದರಿಂದ ಏನಾಗುತ್ತವೆ ಎಂದರೆ, ಯಾವ ಒಂದು ಉದ್ದೇಶದಿಂದ ನಾವು ಲೈಬ್ರರಿಗಳನ್ನು ತೆಗೆದಿದ್ದೇವೋ ಆ ಉದ್ದೇಶ ಸಫಲವಾಗುವುದಿಲ್ಲ. ಮೇಸ್ಟರನ್ನು ಇನ್‌ಚಾರ್ಜ್ ಹಾಕಿದರೆ ಏನಾಗುತ್ತದೆ ಎಂದರೆ ಅವರು ಬೀಗ ಹಾಕಿಕೊಂಡು ಪುಸ್ತಕಗಳನ್ನು ಜೋಪಾನವಾಗಿ ಇಡಲಿಕ್ಕೆ ಪ್ರಯತ್ನ ಮಾಡುತ್ತಾರೆ. He must be a specialist in that subject. ಸ್ಕೂಲ್‌ಗಳು ಬೆಳಿಗ್ಗೆ ೧೦ ೧/೨ ಗಂಟೆಗೆ ಪ್ರಾರಂಭವಾಗಿ ೫ ೧/೨ ಗಂಟೆಗೆ ಮುಗಿದು ಹೋಗುತ್ತದೆ. ಮೇಷ್ಟರು ೧೦ ೧/೨ ಗಂಟೆಗೆ ಬರುತ್ತಾರೆ, ಆಮೇಲೆ ಅವರಿಗೆ ಪಿರೀಡ್ಸ್ ಇರುತ್ತದೆ, ಆ ಕಡೆ ಗಮನ ಇರುತ್ತದೆ. ಟೀಚರ್ಸ್‌ಗೆ ಲೈಬ್ರರಿಗೆ ಒಂದು ಪುಸ್ತಕ ಕೊಡಲಿಕ್ಕೆ ಸಂದರ್ಭ ಸರಿಹೋಗುವುದಿಲ್ಲ. ಮೇಷ್ಟರನ್ನು ಇನ್ ಚಾರ್ಜ್ ಹಾಕಿ ಅವರಿಗೆ ಇನ್‌ಚಾರ್ಜ್ ಅಲೋಯನ್ಸ್ ಕೊಡಬಹುದು, ಆದರೆ ಲೈಬ್ರರಿಗೆ ಎಕ್ಸ್‌ಕ್ಲುಸೀವಾಗಿ ಲೈಬ್ರರಿಯನ್ ಇಲ್ಲದೇ ಹೋದರೆ ಮಕ್ಕಳಿಗೆ ಬಹಳ ಕಷ್ಟವಾಗುತ್ತದೆ ಮಕ್ಕಳಿಗೆ ಇಂತಿಂಥ ಪುಸ್ತಕ ಓದಿ ಎಂದು ಗೈಡ್ ಮಾಡುವವರು ಯಾರು, ಇಂಥಾ ಪುಸ್ತಕ ತೆಗೆದುಕೊಂಡು ಓದಿದರೆ ಹೀಗೆ ಆಗುತ್ತದೆ ಎಂದು ಸೂಚನೆ, ಮಾರ್ಗದರ್ಶನ ಕೊಡಬೇಕು. ಆದುದರಿಂದ ಲೈಬ್ರರಿಗಳನ್ನು ೧೦ ೧/೨ ಗಂಟೆಗೆ ತೆಗೆಯಲಿಕ್ಕೆ ಬದಲಾಗಿ ಬೆಳಿಗ್ಗೆ ಇನ್ನೂ ಎರಡೂವರೆ ಗಂಟೆ ಮುಂಚೆ ತೆಗೆಸಿ ೮ ೧/೨ ಗಂಟೆಗೆ ಲೈಬ್ರರಿಯನ್ನು ಒಪನ್‌ಮಾಡಿ, ಮಧ್ಯೆ ಬೇಕಾದರೆ ಮುಚ್ಚಿಕೊಂಡು ಹೋಗಲಿ. ಸ್ಕೂಲ್ ಪ್ರಾರಂಭವಾಗುವುದಕ್ಕೆ ೨ ೧/೨ ಗಂಟೆ ಮುಂಚೆ ತೆಗೆದು, ಸಂಜೆ ಸ್ಕೂಲ್ ಮುಗಿದ ಮೇಲೆ ಹುಡುಗರು ಅವರಿಗೆ ಬೇಕಾದಂಥ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಲು ಅನುಕೂಲ ಮಾಡಬೇಕು. After school hours, one or two hours extra should be earmarked for the library work. ಪ್ರತಿ ಸ್ಕೂಲ್‌ನಲ್ಲಿಯೂ ಲೈಬ್ರರಿಯನ್ನು ಒಪನ್ ಮಾಡಬೇಕು. ಈ ಒಂದು ಲೈಬ್ರರಿ ಸೌಲಭ್ಯವನ್ನು ಕಲ್ಪಿಸುವುದು ಅವಶ್ಯಕ ಇದೆ, ಇದರ ಬಗ್ಗೆ ತೀವ್ರವಾದಂಥ ಕ್ರಮ ತೆಗೆದುಕೊಂಡರೆ ಅನೇಕ ಬಡ ಮಕ್ಕಳಿಗೆ, ಪುಸ್ತಕಗಳನ್ನು ಕೊಂಡು ಕೊಳ್ಳುವುದಕ್ಕೆ ಶಕ್ತಿ ಇಲ್ಲವೇ ಇರತಕ್ಕ ಮಕ್ಕಳಿಗೆ ಹೆಚ್ಚಿನ ಸೌಲಭ್ಯ ಪಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ತಿಳಿದು ನಾನು ಈ ಸೂಚನೆಯನ್ನು ಸರ್ಕಾರಕ್ಕೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಆಮೇಲೆ ಲೈಬ್ರರಿ ಫೀಸ್ ೩ ರೂಪಾಯಿ ಇದ್ದದ್ದನ್ನು ೨ ರೂಪಾಯಿಗೆ ಸರ್ಕಾರದವರು ಇಳಿಸಿದ್ದಾರೆ ಎಂದು ನಾನು ಕೇಳಿದ್ದೇನೆ. ಬಹುಶ: ಬಡ ಮಕ್ಕಳಿಗೆ ಅನುಕೂಲವಾಗಲಿ, ಅವರಿಗೆ ಫ್ರೀಎಜುಕೇಷನ್ ಕೊಡಬೇಕು ಎಂದು ೩ ರೂಪಾಯಿ ಇದ್ದದ್ದನ್ನು ೨ ರೂಪಾಯಿ ಮಾಡಬೇಕು ಎಂದು ನಿರ್ಣಯ ಮಾಡಿರಬಹುದು, ಸರ್ಕಾರ ೫೦,೦೦೦ ರೂಪಾಯಿ ಸಹಾಯಧನ ರೂಪದಲ್ಲಿ ಕೊಡಬೇಕಲ್ಲ, ಒಬ್ಬ ಹುಡುಗ ಒಂದು ವರ್ಷಕ್ಕೆ ಈ ಫೀಸ್ ಕೊಡುವುದು ಇದು ಮಹತ್ವವಾದುದು, ಇದರಿಂದ ಅವನಿಗೆ ಭಾರವಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಒಂದು ವರ್ಷಕ್ಕೆ ೩ ರೂಪಾಯಿ ಕೊಟ್ಟರೆ ಏನಾಗುತ್ತದೆ, ಲೈಬ್ರರಿಗೆ ಅದೂ ಬೇಡ ಎಂದು ತಮ್ಮ ಇಚ್ಛೆ ೫೦೦—೧೦೦೦ ರೂಪಾಯಿ ಅಡ್‌ಹಾಕ್ ಗ್ರಾಂಟ್ ಕೊಡಬೇಕಲ್ಲ, ಆದುದರಿಂದ ಇದನ್ನು ಯೋಚನೆಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಟೆಕ್ಸ್ಟ್ ಬುಕ್‌ಗಳನ್ನು ನಾವು ರಾಷ್ಟ್ರೀಕರಣ ಮಾಡಿದ್ದೇವೆ. ಇದನ್ನು ಒಳ್ಳೆಯ ಉದ್ದೇಶದಿಂದಲೇ ಮಾಡಿದ್ದಾರೆ. ಬಹಳ ಕಡಿಮೆ ದರದಲ್ಲಿ ಯೋಗ್ಯ ಪುಸ್ತಕಗಳು ನಮ್ಮ ಮಕ್ಕಳಿಗೆ ಸಿಕ್ಕಬೇಕು ಎನ್ನುವ ಉದ್ದೇಶದಿಂದ ಮಾಡಿದೆ. ಮೊದಲು ಟೆಕ್ಸ್ಟ್ ಬುಕ್ ವ್ಯವಸ್ಥೆಯಲ್ಲಿ ಒಂದು ದೊಡ್ಡ ರಾಕೆಟ್ ಇತ್ತು. ಇದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ, ಆದುದರಿಂದ ನ್ಯಾಷನಲೈಸ್ ಮಾಡಿದ್ದೇವೆ. ಆದರೆ ಇವತ್ತೂ ಕೂಡ ಟೆಕ್ಸ್ಟ್ ಬುಕ್ಸ್ ಸರ್ಕಾರದಲ್ಲಿ ಸಿಕ್ಕುವುದಿಲ್ಲ. ಎಂ.ಎಸ್.ಆರ್.ಟಿ.ಸಿ. ಬಸ್ಸಿನ ಗತಿ ಆಗಬಾರದು. ಇವತ್ತು ಸ್ಕೂಲ ಗಳಲ್ಲಿ ಮಕ್ಕಳಿಗೆ ಟೆಕ್ಸ್ಟ್ ಬುಕ್ ಸಿಗುವಂತೆ ಮಾಡಬೇಕು, ಇದಕ್ಕೆ ಕೆಲವು ತೊಂದರೆಗಳಿವೆ. ಉದಾಹರಣಾರ್ಥವಾಗಿ ಹೇಳುವುದಾದರೆ, ಪ್ರೈಮರಿ ಒಂದನೇ ಕ್ಲಾಸಿಗೆ ಒಂದು ಬಾಲಬೋಧ ಪುಸ್ತಕ ಇದೆ ಪ್ರೈಮರಿ ಸ್ಕೂಲ್‌ಗೆ ಸುಮಾರು ೧೦ ಲಕ್ಷ ಮಕ್ಕಳು ಅಡ್ಮಿಷನ್ ಆಗುತ್ತಾರೆ ಎಂದು ಕಾಣುತ್ತದೆ. ಈ ಮಕ್ಕಳು ಒಂದು ವರ್ಷಕ್ಕೆ ಎರಡೆರಡು, ಮೂರು ಮೂರು ಪುಸ್ತಕಗಳನ್ನು ಹರಿದುಬಿಡುತ್ತವೆ. ಇದನ್ನು ಸರ್ಕಾರ ಪ್ರಿಂಟ್ ಮಾಡಿಸಬೇಕಾದರೆ, ಸರ್ಕಾರದ ಹತ್ತಿರ ಎರಡು ಪ್ರಿಂಟಿಂಗ್ ಪ್ರೆಸ್ ಇರಬೇಕು ಎಂದು ಕಾಣುತ್ತದೆ, ಬೆಂಗಳೂರು ಮತ್ತು ಮೈಸೂರು I do not know what happened to the German Printing Press proposed to be started at Mysore. ಏಕೆಂದರೆ, ನೀವು ಟೆಕ್ಸ್ಟ್ ಬುಕ್‌ಗಳನ್ನು ಪ್ರಿಂಟ್ ಮಾಡಲಿಕ್ಕೆ ಅನೇಕ ಜನ ಖಾಸಗಿಯವರಿಗೆ ಕೊಡಬೇಕಾಗುತ್ತದೆ. ಅವರು ಏನು ಮಾಡುತ್ತಾರೆ ಎಂದರೆ

Again there is scope for playing fraud. ಅವರು ಏನು ಮಾಡುತ್ತಾರೆ, ಒಳ್ಳೆಯ ಪೇಪರ್‌ನ್ನು ಅಪ್ರೂವಲ್‌ಗೋಸ್ಕರ ತಂದುಕೊಡುತ್ತಾರೆ. ಆ ಮೇಲೆ ರೆಗ್ಯುಲರ್ ಆಗಿ ಸಪ್ಲೈ ಮಾಡುವಾಗ ಪ್ರಿಂಟ್ ಚೆನ್ನಾಗಿರುತ್ತದೆ ಆದರೆ ಪೇಪರ್ ಮಂದಮಂದವಾಗಿರುತ್ತದೆ. ಆದುದರಿಂದ ಇವರ ಬಗ್ಗೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದನ್ನು ತಿಳಿಸುತ್ತೇನೆ. ಆಮೇಲೆ ಬರಹಗಾರರು, ಚೀಪ್ ಆಥರ್ಸ್‌ನ್ನು ಹಿಡಿದು ಸುಲಭವಾದ ಬೆಲೆಯಲ್ಲಿ ಟೆಕ್ಸ್ಟ್ ಪುಸ್ತಕಗಳನ್ನು ಒದಗಿಸಬೇಕು ಎನ್ನತಕ್ಕಂಥ ದೃಷ್ಟಿಕೋನದಲ್ಲಿ, ಚೀಪ್ ಬರಹಗಾರರ ಕೈಯಲ್ಲಿ ಕೊಟ್ಟು ಬರೆಸುವುದಕ್ಕೆ ಹೋಗಬಾರದು. ಅದು ಮಕ್ಕಳ ಮೇಲೆ ಪರಿಣಾಮ ಆಗತಕ್ಕಂಥ ರೀತಿಯಲ್ಲಿ ಪಠ್ಯ ಪುಸ್ತಕಗಳು ಇರಬೇಕು. ಆದುದರಿಂದ ನೀವು ಹೆಚ್ಚು ದುಡ್ಡು ಕೊಟ್ಟರೂ ಚಿಂತೆಯಿಲ್ಲ ಒಳ್ಳೆಯ ಬರಹಗಾರರಿಂದ ಬರೆಸಬೇಕು. ಒಂದೂವರೆ ಸಾವಿರ ರೂಪಾಯಿ ಕೊಡುವಂಥ ಕಡೆಗಳಲ್ಲಿ ೩ ಸಾವಿರ ರೂಪಾಯಿ ಕೊಟ್ಟರೂ ಚಿಂತೆಯಿಲ್ಲ ಏತಕ್ಕೆಂದರೆ ನಾವು ಅದನ್ನು ಬಹಳ ದಿವಸದವರೆಗೆ ಉಪಯೋಗಿಸಬಹುದು. ಮಾರಲ್ ಎಜುಕೇಷನ್‌ಗೆ ಬಹಳ ಮಾನ್ಯತೆ ಕೊಡಬೇಕು ಎನ್ನುವ ಸ್ವಭಾವವುಳ್ಳಂಥ ವ್ಯಕ್ತಿ ತಾವು. ಇದರ ಬಗ್ಗೆ ಬಹಳ ಶ್ರದ್ಧೆಯಿಂದ ಆಲೋಚನೆ ಮಾಡತಕ್ಕಂಥ ವ್ಯಕ್ತಿ ತಾವು ಸಮಾಜದಲ್ಲಿ ಮಾಡತಕ್ಕಂಥ ಒಳ್ಳೆಯ ಕೆಲಸಗಳಿಂದ ತಮ್ಮ ಮೇಲೆ ಆರೋಪಣೆ ಮಾಡುವುದಕ್ಕೆ ಆಗುವುದಿಲ್ಲ. I can dare say the Hon Minister for Education has maintained some Character and Integrity. ನಮ್ಮ ಸರ್ಕಾರದ ಬಗ್ಗೆ ನಾನು ಈ ಕಡೆಗೆ ಕೂತು ಹೇಳುತ್ತೇನೆ, ತಾವು ಒಬ್ಬ ಪ್ರಮಾಣಿಕರಾಗತಕ್ಕಂಥವರು ಆ ಜಾಗದಲ್ಲಿ ಕೂತಿದ್ದೀರಿ. ನಾವು ಒಂದೊಂದು ಸಾರಿ ಭಾಷಣ ಮಾಡುವಾಗ ಜಾತಿಯ ಹೆಸರಿನಲ್ಲಿ, ಮೇಲು ವರ್ಗದ ಹೆಸರಿನಲ್ಲಿ ಭಾಷಣ ಮಾಡುವುದಕ್ಕೆ ನಾಚಿಕೆ ಪಟ್ಟುಕೊಳ್ಳಬೇಕಾಗಿದೆ.

4-30 P. M.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿ ಈಗ ತಾನೆ ಸುದ್ದಿ ಬಂತು, ಮಾನ್ಯ ಮಲ್ಲಿಕಾರ್ಜುನ ಸ್ವಾಮಿಯವರು ಮುಖ್ಯಮಂತ್ರಿಗಳು ಆಗುತ್ತಾರೆಂದು ತಿಳಿದು ಬಂತು.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೂ, ಈ ಸಭೆಯಲ್ಲಿ ಇಡೀ ರಾಷ್ಟ್ರದ ಜನತೆಯ ಪರವಾಗಿ ಅವರಿಗೆ ಅಭಿನಂದನೆ ಮಾಡುತ್ತೇನೆ. Others must learn something from him. I have made it clear on different platforms that this is the Minister who has maintained some Character and integrity. ಈ ವಿಷಯವನ್ನು ನಾನು ಹತ್ತಾರು ಕಡೆ ಹೇಳಿದ್ದೇನೆ, ಪೋಲೀಸಿನವರ ರಿಪೋರ್ಟ್‌ನಲ್ಲೂ ಸಹ ಬಂದಿರುತ್ತದೆ ತಾವು ಅದನ್ನು ನೋಡಬಹುದು. ನನಗೆ ಏನೆಂದರೆ ಉತ್ತಮವಾಗಿ ಕೆಲಸ ಮಾಡತಕ್ಕಂಥ ವ್ಯಕ್ತಿ ಯಾವುದೇ ಜಾತಿ ಇರಲಿ, ಯಾವುದೇ ಪಂಗಡವಿರಲಿ, We want men of character We want men of integrity. We want men of sincerity. ತಾವು ಮಾರಲ್ ಎಜುಕೇಷನ್ನಿಗೆ ಹೆಚ್ಚು ಶ್ರದ್ಧೆಯನ್ನು ಕೊಡಬೇಕು ಆದುದರಿಂದ ಇವತ್ತು ನಾನೊಂದು ಮಾತನ್ನು ಹೇಳುತ್ತಿದ್ದೇನೆ. ನೀವು ಟೆಕ್ಸ್ಟ್ ಪುಸ್ತಕಗಳನ್ನು ಬರೆಯಲು ಟೈಪ್ ರೈಟರ್ಸ್‌ಗೆ ಕೊಡುವುದಕ್ಕೆ ಹೋಗಬೇಡಿ. ಯೋಗ್ಯರಾಗಿರತಕ್ಕಂಥ ಜನಗಳಿಗೆ ಕೊಟ್ಟು ಬರೆಸಿ, ಚೀಪ್ ಆಗಿರತಕ್ಕಂಥವರಿಂದ ಬರೆಸತಕ್ಕಂಥದ್ದು ಉಚಿತವಲ್ಲವೆಂದು ಇವತ್ತು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಆ ಮೇಲೆ ಕೆಲವು ಆರ್ಟಿಸ್ಟ್‌ಗೆ ಚಿತ್ರಗಳನ್ನು ಬರೆಯಲು ಕೊಡುತ್ತೀರಿ, ಕೆಲವು ಚೆನ್ನಾಗಿರುತ್ತದೆ, ಆದುದರಿಂದ ಒಳ್ಳೆಯವರಿಗೆ ಹೆಚ್ಚು ಹಣ ವೆಚ್ಚ ಮಾಡಿದರೂ ಚಿಂತೆ ಇಲ್ಲ ಒಳ್ಳೆಯ ಆರ್ಟಿಸ್ಟ್‌ಗೇ ಕೊಡಿ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಈ ಬಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಇದೆಯಲ್ಲಾ, ಇವುಗಳ ಮೇಲ್ವಿಚಾರಣೆಗೆ ಒಬ್ಬ ಅಡೀಷನಲ್ ಡೈರೆಕ್ಟರನ್ನು ನೇಮಕ ಮಾಡುವಂಥದ್ದು ಉಚಿತವೆಂದು ನನ್ನ ಭಾವನೆ ಇದೆ ಏತಕ್ಕೆಂದರೆ ೧೨೧ ಪ್ರೈಮರಿ ಸ್ಕೂಲ್ಸ್ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಇವೆ, ಸುಮಾರು ೩೫ ಬಿ.ಎಡ್. ಟ್ರೈನಿಂಗ್ ಸೆಂಟರ್ಸ್ ೧೪ ಪ್ರೀ—ಪ್ರೈಮರಿ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಇವೆ, ೫ ಹಿಂದಿ ಟೀಚರ್ಸ್ ತರಬೇತಿ ಸಂಸ್ಥೆಗಳಿವೆ. ೮ ಡ್ರಾಯಿಂಗ್ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಿವೆ. ಫಿಜಿಕಲ್ ಎಜುಕೇಷನ್ ೧೦ ಇನ್‌ಸ್ಟಿಟ್ಯೂಷನ್ ಇವೆ. ಇಂಗ್ಲಿಷ್ ಲಾಂಗ್ವೇಜ್ ಇನ್‌ಸ್ಟಿಟ್ಯೂಷನ್‌ಗಳಿವೆ. ಒಟ್ಟು ೨೦೦ ತರಬೇತಿ ಕೇಂದ್ರಗಳಿರತಕ್ಕಂಥ ಸನ್ನಿವೇಶದಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್‌ರವರು ಇರುವುದರಿಂದ, ಇವುಗಳನ್ನು ಮೇಲ್ವಿಚಾರಣೆ ನಡೆಸಲು ಒಬ್ಬ ಅಡಿಷನಲ್ ಡೈರೆಕ್ಟರವರನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎಂದು ತಮಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ನೀವು ಹಲವಾರು ಕಮಿಟಿಗಳನ್ನು ಮಾಡಿದಿರಿ, ಮಾನ್ಯ ಮಲ್ಲಾರಾಧ್ಯರವರ ಕಮಿಟಿಯನ್ನು ಮಾಡಿದಿರಿ ಅದು ಎಲ್ಲಿಗೆ ಬಂತು ಎಂಬುದನ್ನು ತಿಳಿಸಬೇಕು. ಆ ಕಮಿಟಿಯನ್ನು ಮಾಡಿ ಒಂದೂವರೆ, ಎರಡು ವರ್ಷವಾಯಿತು.

ಕಾಂಪ್ರಹೆನ್ಸಿವ್ ಎಜುಕೇಷನ್ ಬಿಲ್, ಅವರು ಕೊಟ್ಟಂಥ ವರದಿ ಇವತ್ತು ಬಿಲ್ ರೂಪದಲ್ಲಿಯೇ ಇದೆ. ಅವರು ಈ ಮನೆಗೆ ಡ್ರಾಫ್ಟ್ ಬಿಲ್ ಎಂದು ಕೊಟ್ಟಿದ್ದಾರೆಂದು ಸಹ ಕೇಳಿದ್ದೇನೆ. ಅವರು ಕೊಟ್ಟಿರತಕ್ಕಂಥ ಡ್ರಾಫ್ಟ್ ಬಿಲ್, ಲಾ ಡಿಪಾರ್ಟ್‌ಮೆಂಟ್‌ನಲ್ಲಿ, ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲ ಪರಿಶೀಲನೆ ಮಾಡುತ್ತಿದ್ದಾರೆಂದು ಹೇಳಿದರೆ, ಅದಕ್ಕೆ ಒಂದು, ಒಂದೂವರೆ ವರ್ಷ ಪರಿಶೀಲವೆ ಮಾಡಲು ಬೇಕಾಗಿಲ್ಲ. ಕಮಿಟಿಗಳನ್ನು ಮಾಡಿ, ಅದರ ಮೇಲೆ ಹಾಕಿರತಕ್ಕಂಥ ಹಣಕ್ಕೆ ಪ್ರತಿಫಲ ಬರಬೇಕಾದರೆ ಆ ಒಂದು ರಂಗದಲ್ಲಿರತಕ್ಕಂಥವರು, ತಜ್ಞರು ಕೊಟ್ಟಿರತಕ್ಕಂಥ ಆ ಒಂದು ಶಿಫಾರಸ್ಸು ಏನು ಇದೆಯೋ ಅವುಗಳನ್ನು ಕಾರ್ಯರೂಪಕ್ಕೆ ತರತಕ್ಕಂಥದರ ಮೇಲೆ ಸರ್ಕಾರ ಯಾವುದೇ ರೀತಿಯಲ್ಲಿ ನಿಧಾನ ಮಾಡತಕ್ಕಂಥ ನಿರ್ಣಯಕ್ಕೆ ಬರಬಾರದು ಎನ್ನತಕ್ಕಂಥದ್ದನ್ನು ತಿಳಿಸುತ್ತೇನೆ. ಇವತ್ತು ತಾವು ಆ ಕಾಂಪ್ರಹೆನ್ಸಿವ್ ಎಜುಕೇಷನ್ ಬಿಲ ತ್ವರಿತವಾಗಿ ಬರತಕ್ಕಂಥದ್ದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥದನ್ನು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ಅದರ ಅವಶ್ಯಕತೆ ಇವತ್ತು ಇದೆ. ಈ ಕೆಲಸವನ್ನು ಮಾಡಬೇಕು ಎನ್ನತಕ್ಕಂಥದ್ದರಲ್ಲಿ ತಾವು ಮುಂದಾಗಬೇಕೆಂದು ತಿಳಿಸುತ್ತೇನೆ.

(Mr. Deputy Speaker in the Chair)

ಇವತ್ತು ನೀವು ಈ ಒಂದು ವಿದ್ಯಾ ಇಲಾಖೆಯ ಬಗ್ಗೆ ಇಟ್ಟಿರತಕ್ಕಂಥ ೬೨ ಕೋಟಿ ರೂ. ಗಳ ಡಿಮಾಂಡ್ ಏನಿದೆ ಬಹುಶಃ ಇದರಲ್ಲಿ ನಾವು ಪ್ರತಿಯೊಂದಕ್ಕೂ ವಿರೋಧ ಪಕ್ಷದವರು ವಿರೋಧ ಮಾಡುತ್ತಾರೆ ಎಂದು ಹೇಳುವುದಕ್ಕೆ ಬದಲು ಇಷ್ಟು ಮಾತ್ರ ಹೇಳುತ್ತೇನೆ. ಈಗ ತಮ್ಮ ಇಲಾಖೆಗೆ ಕೊಟ್ಟಿರುವ ಹಣ ಸಾಲದು, ಇವತ್ತು ರಾಷ್ಟ್ರದ ಭವಿಷ್ಯ ಒಂದು ಉತ್ತಮ ರೀತಿಯಲ್ಲಿ ಸಾಗಬೇಕಾದರೆ ಈ ಒಂದು ವಿದ್ಯಾಭ್ಯಾಸಕ್ಕೆ ಖರ್ಚು ಮಾಡತಕ್ಕಂಥ ಹಣ ಬಹುಶಃ ನಾನು ಹೇಳುತ್ತೇನೆ, ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ, ಸಾಮಾನ್ಯವಾಗಿ ನಾವು ಇಂತಹ ಖರ್ಚು "Unproductive expenditur" ಅಂತ ಹೇಳಿ ಭಾಷಣ ಮಾಡುತ್ತೇವೆ ಆದರೆ ನೀವು ಈ ಒಂದು ಇಲಾಖೆಗೆ ವೆಚ್ಚ ಮಾಡತಕ್ಕಂಥ ವೆಚ್ಚ ಏನಿದೆ ಇದು I do not consider this as unproductive expenditure. ನಾವು ಇವತ್ತು ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಮೇಲೆ ಏನು ಹೆಚ್ಚು ಒತ್ತಡ ಹಾಕುತ್ತೇವೆ ಅವರಿಂದ ದೊರೆಯುತಕ್ಕಂಥ ಫಲಿತಾಂಶಕ್ಕಿಂತ ಹೆಚ್ಚು ಫಲಿತಾಂಶ ದೊರೆಯುತ್ತದೆ, ಇವತ್ತು ಈ ಒಂದು ಇಲಾಖೆಯಲ್ಲಿ ಖರ್ಚು ಮಾಡತಕ್ಕಂಥ ಹಣದಿಂದ ರಾಷ್ಟ್ರ ನಿರ್ಮಾಣ ಮಾಡುವುದಕ್ಕೆ ನಮಗೆ ಸಹಕಾರಿಯಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಶ್ರೀಮಾನ್ ಚನ್ನಬಸಪ್ಪನವರು ಮೊನ್ನೆ ಭಾಷಣ ಹೇಳುತ್ತಿದ್ದರು, ಪ್ರಾಜೆಕ್ಟ್ ಸೆಸ್, ರೋಡ್ ಸೆಸ್ ಎಂದು ೩ ಕಾಸ್‌ನ್ನು ಸೇರಿಸಿ ಬಿಡುತ್ತಾರೆಂದು, ಇನ್ನು ೩ ಕಾಸು ಹೆಚ್ಚಾದರೂ ಚಿಂತೆ ಇಲ್ಲ I am going to give these suggestion which are quite essential ವಿದ್ಯಾ ಇಲಾಖೆಗೆ ೩ ಕಾಸ್ ಸೆಸ್ ಅಲ್ಲದಿದ್ದರೆ ೧೦ ಕಾಸ್ ಆದರೂ ಕೊಡೋಣ. I want a good environment especially in rural area. It is a curse, ೨೫ ವರ್ಷಗಳಿಂದ ನಮ್ಮ ಮಕ್ಕಳು ಪೇಟೆಯ ಮಕ್ಕಳ ಜೊತೆಯಲ್ಲಿ ಪೈಪೋಟಿಯಲ್ಲಿ ನಿಲ್ಲಲಿಕ್ಕೆ ಸಾಧ್ಯವಿಲ್ಲ. ಅವನು ಒಕ್ಕಲಿಗ ಜಾತಿಗೆ ಸೇರಿರಲಿ, ಲಿಂಗಾಯಿತ ಇರಲಿ ಅಥವಾ ಹರಿಜನ ಇರಲಿ, ಅವನು ಯಾವುದೇ ಆರ್ಡಿನರಿ ಗುಮಾಸ್ತನ ಕೆಲಸಕ್ಕೂ ಪೈಪೋಟಿಗೆ ಬಂದು ನಿಲ್ಲಲೇಬೇಕಾಗುತ್ತದೆ. ಬೆಂಗಳೂರಿನಲ್ಲಿ ವಾಸ ಮಾಡತಕ್ಕಂಥ ಹುಡುಗರೊಂದಿಗೆ ಅವರೊಂದಿಗೆ ಸೆಣಸಾಟ ಮಾಡುವುದಕ್ಕೆ ಅವನಿಗೆ ಸಾಧ್ಯವಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.— ಹೆಚ್ಚು ಗ್ರಾಮಾಂತರ ಪ್ರದೇಶದಲ್ಲಿ ಒಂದು ಗುಣಮಟ್ಟವನ್ನು ಹೆಚ್ಚು ಮಾಡುವುದಕ್ಕೆ, ಶಾಲಾ ಕಟ್ಟಡದಿಂದ ಹಿಡಿದು, ಶಿಕ್ಷಕರನ್ನು ಒದಗಿಸಿ ತಕ್ಕ ಸನ್ನಿವೇಶದಿಂದ ಹಿಡಿದು ತರಬೇತಿ ಹೊಂದಿದ ಶಿಕ್ಷಕರನ್ನು ಒದಗಿಸತಕ್ಕ ಸನ್ನಿವೇಶದಿಂದ ಹಿಡಿದು ಈ ಎಲ್ಲಾ ವ್ಯವಸ್ಥೆಯನ್ನು ಮಾಡುವುದರ ಮೂಲಕ ಗುಣಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಸೂಚನೆ ಮಾಡುತ್ತೇನೆ. ಹೇಡತಿ ಹೆಸರಿನಲ್ಲಿ ಮಾಡಿಕೊಂಡಿದ್ದಾರೆ, ಪ್ರೈವೆಟ್ ಸ್ಕೂಲ್ಸ್ ಮಾಡಿಕೊಂಡಿದ್ದಾರೆ ಎಂದು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. I want to make one thing clear, there are good Officers. Senior Officers are very good Officers. ಯೋಗ್ಯವಾಗಿ ಕೆಲಸಮಾಡತಕ್ಕ ಆಶಯವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ತಾವು ವಿದ್ಯಾಭ್ಯಾಸದ ಇಲಾಖೆಯಲ್ಲಿ ಇರತಕ್ಕ ದೋಷಗಳನ್ನು ನಿವಾರಣೆ ಮಾಡಿ, ಗುಣಮಟ್ಟ ಹೆಚ್ಚು ಮಾಡುವುದಕ್ಕೆ ಶ್ರಮಿಸಬೇಕು. ಆ ಕೆಲಸ ಮಾಡಿ ಎಂದು ತಮ್ಮ ಮುಂದೆ ಮನವಿಯನ್ನು ಇಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಮಂಡಿಸಿದ ಎಜುಕೇಷನ್ ಡಿಮ್ಯಾಂಡ್‌ಗೆ ನಾನು ಪೂರ್ಣವಾಗಿ ಬೆಂಬಲಿಸುತ್ತಾ, ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಮಂತ್ರಿಗಳಿಗೆ ಶಿಕ್ಷಣ ಖಾತೆ ದೊರಕಿದ ನಂತರ ಬಹಳ ಸಂತೋಷವಾಯಿತು. ಏಕೆಂದರೆ ಆ ಖಾತೆಯಲ್ಲಿ ಅವರು ದುಡಿದವರೂ ಮತ್ತು ಅನುಭವಿಗಳೂ ಆಗಿದ್ದಾರೆ, ಇಂಥವರಿಗೆ ಖಾತೆ ಕೊಟ್ಟರೆ, ಒಳ್ಳೆಯ ಕೆಲಸ ಮಾಡತಕ್ಕ ವಿಚಾರ ನಮಗೆ ಇತ್ತು, ಅವರೂ ಕೂಡ, ಒಂದು ವರ್ಷದ ಈ ಖಾತೆಯಲ್ಲಿ ಸರಿಯಾದ ಸಾಧನೆ ಮಾಡಿದ್ದಾರೆ. ಎಜುಕೇಷನ್ ಖಾತೆಗೆ ೯೩ ಕೋಟಿ ರೂಪಾಯಿಗಳನ್ನು ನೀಡಿ, ಸಾಕಷ್ಟು ಕೆಲಸ ಮಾಡತಕ್ಕ ಯೋಜನೆಗಳನ್ನು ಕೂಡ ಹಾಕಿ ಕೊಂಡಿದ್ದಾರೆ. ಇವತ್ತಿನ ದಿವಸ ನಮ್ಮ ಶಿಕ್ಷಣ ಖಾತೆ ಏನು ಇದೆ, ಶಿಕ್ಷಣ ಪದ್ಧತಿ ಇಲ್ಲಿ ಪರಿವರ್ತನೆ ಆಗಬೇಕು. ಬ್ರಿಟೀಷ್ ರಾಜ್ಯದಿಂದ ನಡೆದು ಬಂದಂದ ಶಿಕ್ಷಣ ಪದ್ಧತಿ ಎಲ್ಲಿಯುವರೆಗೆ ಬದಲಾವಣೆ ಯಾಗುವುದಿಲ್ಲವೋ ಅಲ್ಲಿಯುವರೆಗೆ ನಮ್ಮ ದೇಶದಲ್ಲಿ ಇರತಕ್ಕ ಯುವಕರಿಗೆ ಸರಿಯಾದ ಭವಿಷ್ಯ ಸಿಕ್ಕುವುದಿಲ್ಲ ಎನ್ನುವ ಸಂಶಯ ಇದೆ. ಇವತ್ತಿನ ದಿವಸ ಶಿಕ್ಷಣ ಶಾಲೆಯಿಂದ ಬಂದಂತ ವಿದ್ಯಾರ್ಥಿಗಳಿಗೆ ಕ್ಲರ್ಕ್ ನೌಕರಿ ಹೊರತು ಈ ಜಗತ್ತಿನಲ್ಲಿ ಬೇರೆ ಕೆಲಸಗಳಿಗೆ ಸಮರ್ಥರಾಗುವುದಿಲ್ಲ. ಮಾನ್ಯ ಮಂತ್ರಿಗಳು ಹೊಸ ದೃಷ್ಟಿ ಯಿಂದ ಹೊಸ ರೀತಿಯಲ್ಲಿ ವಿಚಾರ ಮಾಡಿ. ದೇಶದಲ್ಲಿ ಮಾದರಿಯಾದ ಶಿಕ್ಷಣ ಪದ್ಧತಿಯಾಗಿ ಪರಿವರ್ತನೆ ಮಾಡಿ ಯಾವುದಾದರೂ ಒಂದು ರೀತಿಯಿಂದ ಯುವಕರಲ್ಲಿ, ಶಿಕ್ಷಕರಲ್ಲಿ ಮತ್ತು ವಿದ್ಯಾವಂತ ಜನರಲ್ಲಿ ಯೂ ಒಂದು ಅಸಂತತೆ ಇದೆ, ಅದಕ್ಕೆ ಒಂದು ಯೋಜನೆ ಹಾಕಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಬಹಳ ಕುಂದು ಕೊರತೆಗಳು ಇವೆ, ಇವತ್ತಿನ ದಿವಸ ಹೈಸ್ಕೂಲಿನಲ್ಲಿ ಓದಿಸುತ್ತೇವೆ, ಅಲ್ಲಿ ಕ್ರಾಫ್ಟ್ ಸ್ಕೂಲ್ ಇರುತ್ತದೆ, ಟ್ರೈನಿಂಗ್ ಸ್ಕೂಲ್ ಇರುತ್ತದೆ. ಕ್ಲಾಸ್ ಟೀಚರ್‍ಸ್ ಇರುತ್ತಾರೆ, ಟ್ರೈನಿಂಗ್ ಮಾಡಿದವರು ಇರುತ್ತಾರೆ, ಕ್ರಾಫ್ಟ್ ಸ್ಕೂಲಿಗೆ ಹೋದನಂತರ ಯಾವುದೇ ರೀತಿಯಾದ ಮೆಟೀರಿಯಲ್ಸ್ ಇರುವುದಿಲ್ಲ. ಕ್ಲಾಸ್ ಟೀಚರ್ಸ್ ಕೇಳಿಕೊಳ್ಳುತ್ತಾರೆ. ಎಷ್ಟೋ ದಿವಸ ಗುಲ್ಬರ್ಗದಲ್ಲಿ ಇರತಕ್ಕ ಮಲ್ಟಿಪರ್‌ಪಸ್ ಸ್ಕೂಲ್‌ಗೆ ನಾನು ಹೋದಾಗ ಅವರು ಹೇಳಿದ್ದಾರೆ. ಕ್ರಾಫ್ಟ್ ಸ್ಕೂಲ್ ಏನು ಇದೆ ಅಲ್ಲಿ ವ್ಯವಹಾರಿಕ ಜಗತ್ತಿನಲ್ಲಿ ಹುಡುಗರಿಗೆ ಉಪಯೋಗವಾಗತಕ್ಕ ಏನಾದರೂ ಕೆಲಸ ಕಲಿಸಿಕೊಡಬೇಕು. ಸಂಬಳ ಇಲ್ಲದೇ ಶಿಕ್ಷಕರು ಕೆಲಸ ಮಾಡುವುದಿಲ್ಲ. ಇದರ ಕಡೆ ಲಕ್ಷ್ಯ ಕೊಡಬೇಕು. ಎಲ್ಲಾ ಕಡೆ ಯೂನಿಫಾರ್ಮಿಟಿ ತರಬೇಕು, ಒಂದುಕಡೆ ಒಂದು ರೂಲ್, ಇನ್ನೊಂದು ಕಡೆ ಇನ್ನೊಂದು ರೂಲ್ ಆಗಬಾರದು. ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಒಂದು ಇದ್ದದ್ದು, ೧೯೫೬ರಲ್ಲಿ ಒಂದಾಯಿತು. ಕರ್ನಾಟಕ ರಾಜ್ಯ ಆಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೆಲಸಮಾಡುವ ಶಿಕ್ಷಕರಿಗೆ ಒಂದು ಕಡೆ ೫೫ ವರ್ಷಕ್ಕೆ, ಇನ್ನೊಂದು ಕಡೆ ೫೮ ವರ್ಷಕ್ಕೆ ರಿಟೈರ್ ಮಾಡುತ್ತಾರೆ. ಈ ವಿಚಾರದಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಏನು ಪ್ರೊಟೆಕ್ಷನ್ ಕೊಟ್ಟಿದ್ದಾರೆ, ಅಲ್ಲಿ ೫೮ ವರ್ಷಕ್ಕೆ ಪ್ರೊಟೆಕ್ಷನ್ ಕೊಟ್ಟಿದ್ದಾರೆ, ಅವರಿಗೂ ಕೂಡ ೫೫ಕ್ಕೆ ರಿಟೈರ್ ಆಗುವಂತೆ ಮಾಡಿ, ಒಂದೇ ರೂಲ್ ಎಲ್ಲಾ ಕಡೆ ಮಾಡ ಬೇಕು. ಶಿಕ್ಷಕರಲ್ಲಿ ಭೇದ ಮಾಡಿದರೆ ಅಸಂತೋಷವಾಗುತ್ತದೆ. ತಮ್ಮಲ್ಲಿ ಮನವಿಮಾಡಿಕೊಳ್ಳುವುದು ಏನೆಂದರೆ ಈ ರೀತಿ ಡಿಸ್ಕ್ರಿಮಿನೇಷನ್ ಆಗಬಾರದು, ಒಂದೇ ಕಾನೂನು ಎಲ್ಲಾ ಕಡೆ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ. ಫ್ಲಕ್ಚುಯೇಷನ್ ಪಾಲಿಸಿ ಆಗಬಾರದು. ಆಗ ರೆಕಾರ್ಡ್ಸ್‌ಮೆಂಟೆಯಿನ್ ಮಾಡುತ್ತಾರೆ. ಮಂತ್ಲಿ ಟೆಸ್ಟ್ ಆಗುತ್ತದೆ, ಆ ಆಧಾರದ ಮೇಲೆ ಒಂದು ವರ್ಷ ವಿದ್ಯಾರ್ಥಿಯನ್ನು ಪರೀಕ್ಷೆಯಲ್ಲಿ ಆಗಲಾದರೂ ಕೂಡ ಮಂತ್ಲಿ ಟೆಸ್ಟ್ ನೋಡಿ ಪಾಸ್ ಮಾಡುತ್ತಿದ್ದರು ಈಗ ಬಿಟ್ಟು ಬಿಟ್ಟಿದ್ದಾರೆ, ಪಾಲಿಸಿ ಅಡಾಪ್ ಮಾಡಿದ ಮೇಲೆ ೧೫-೨೦ ವರ್ಷ ಹಾಗೆ ನಡೆಯಬೇಕು. ಫ್ಲಕ್ಚುಯೇಷನ್ ಆಗಬಾರದು. ವಿದ್ಯಾರ್ಥಿಗಳ ಪರೀಕ್ಷೆ ಅರ್ಹತೆ ಮೇಲೆ ಇಡ. ಟಿ.ಡಿ.ಬಿ. ಸ್ಕೂಲ್ ತೆಗೆದು ಕೊಂಡಿದ್ದೀರಿ ಶಾಲೆಗಳಲ್ಲಿ ಶಿಕ್ಷಕರು ಇರಬಾರದ ಕಾರಣ, ಹುಡುಗರು ಹೊರಗೆ ಹೋಗುತ್ತಾರೆ. ಜೂನಿಯರ್ ಕಾಲೇಜು ತೆಗೆದಿದ್ದಾರೆ ಅಲ್ಲಿ ಸಫಿಷಿಯೆಂಟ್ ಕೆಲಸ ಇಲ್ಲ, ಹೈಸ್ಕೂಲಿನಲ್ಲಿ ಸಫಿಷಿಯೆಂಟ್ ಕೆಲಸ ಮಾಡಲಾರದೇ ಇರುವಾಗ ಟಿ.ಡಿ.ಬಿ. ಸ್ಕೂಲ್ಸ್ ಗೌರ್ನಮೆಂಟ್ ಕೈಗೆ ಬಂದಿದೆ, ಟೀಚರ್ಸ್ ಇಲ್ಲ. ನನ್ನ ಕ್ಷೇತ್ರದಲ್ಲಿ ಇರುವ ಮುಂದೇವಾಡ ಗ್ರಾಮದ ಸ್ಕೂಲಿನಲ್ಲಿ ಟೀಚರ್ಸ್ ಇಲ್ಲ. ಅವರು ಯಾವ ರೀತಿ ಪರೀಕ್ಷೆಗೆ ತಯಾರಾಗಬೇಕು ಎಂದು ಕೇಳುತ್ತೇನೆ. ಎಲ್ಲಾ ಟಿ.ಡಿ.ಬಿ. ಸ್ಕೂಲ್‌ಗಳನ್ನು ತೆಗೆದುಕೊಂಡಿದ್ದೀರಿ, ಸ್ಟಾಫ್ ಇಲ್ಲ, ಅವರಿಗೆ ಸ್ಟಾಫ್ ಒದಗಿಸಬೇಕು. ಇದೇ ರೀತಿ ಪ್ರೈಮರಿ ಸ್ಕೂಲ್ ಮತ್ತು ಹೈಸ್ಕೂಲ್‌ನಲ್ಲಿ ಟೀಚರ್ಸ್ ಸರಿಯಾಗಿ ಇಲ್ಲ, ಆದಕಾರಣ ಎಲ್ಲಾ ಸ್ಕೂಲುಗಳಿಗೂ ಟೀಚರ್ಸ್ ಬೇಕು, ಒಂದೊಂದು ಕ್ಲಾಸ್‌ನಲ್ಲಿ ೫೦-೬೦ ಜನರಿಗೆ ಅಡ್ಮಿಷನ್ ಕೊಡುತ್ತಾರೆ, ಕಾನ್‌ಸನ್‌ಟ್ರೇಷನ್ ಆಗುವುದಿಲ್ಲ. ಶಿಕ್ಷಕರಿಗೆ ೧೫-೨೦, ೨೫-೩೦ ಹುಡುಗರಿಗೆ ಶಿಕ್ಷಕರನ್ನು ಹಾಕಿ ಆ ರೀತಿ ಅಡ್ಮಿಷನ್ ಕಳಿಸಿದರೆ ಶಿಕ್ಷಕರು ಎಜುಕೇಷನ್ ಕೊಡಬಹುದು. ಮಾನ್ಯ ದೇವೇಗೌಡರು ಹೇಳಿದ ಹಾಗೆ ಹಳ್ಳಿಗಳಲ್ಲಿ ಇರತಕ್ಕ ಸ್ಕೂಲುಗೆ ಅಲ್ಲಿಗೆ ಟೀಚರ್ಸ್ ಹೋಗುವುದಿಲ್ಲ. ಎಷ್ಟೋ ಟೀಚರ್ಸ್ ನಮ್ಮಲ್ಲಿಗೆ ಬರುತ್ತಿದ್ದಾರೆ. ಎಲೆಕ್ಷನ್. ಎಂ.ಎಲ್.ಎ. ಹತ್ತಿರ ಇರುವುದು, ರಾಜಕಾರಿಣಿಗಳ ಹತ್ತಿರ ಇರುವುದು, ಉಪಾಧ್ಯಾಯರು ಶಾಲೆಗಳಿಗೆ ಹೋಗದೇ ಇರುವುದು ಉಂಟು,

ಇದು ದೊಡ್ಡ ಜವಾಬ್ದಾರಿ ಮಕ್ಕಳಿಗೆ ಶಿಕ್ಷಣ ಕೊಡತಕ್ಕ ಖಾತೆ ಇದರಲ್ಲಿ ಕೆಲಸ ಮಾಡತಕ್ಕ ಶಿಕ್ಷಕರು ಈ ರೀತಿ ಮಾಡಿದರೆ ಅಂಥವರ ಮೇಲೆ ಆಕ್ಷನ್ ತೆಗೆದುಕೊಂಡರೆ ಅವರಿಗೆ ಹೆದರಿಕೆ ಇರುತ್ತದೆ. ಆಗ ದೂರ ಮಾಡಬಹುದು ಅಲ್ಲಿಯವರೆಗೆ ಆಗುವುದಿಲ್ಲವೆಂದು ಹೇಳುತ್ತೇನೆ. ಇವತ್ತಿನದಿವಸ ರಿಟ್ರೆಂಚ್ ಕ್ಯಾಂಡಿಡೇಟ್ಸ್ ಇದ್ದಾರೆ. ಎಲ್ಲಾ ಡಿಪಾರ್ಟ್‌ಮೆಂಟಿನಲ್ಲೂ ಒಂದು ವರ್ಷ ಸರ್ವೀಸ್ ಆದವರಿಗೆ ರೆಗ್ಯುಲರೈಸ್ ಮಾಡಿದ್ದಾರೆ. ಶಿಕ್ಷಣ ಖಾತೆಯಲ್ಲಿರುವ ಎಪ್ಲೋ ಟೀಚರ್ಸ್‌ಗಳಿಗೆ ರಿಟ್ರೆಂಚ್ ಕೊಟ್ಟಿದ್ದಾರೆ. ಲೋಕಲ್ ಕ್ಯಾಂಡಿಡೇಟ್ಸ್ ಆಗಿದ್ದವರನ್ನು ರಿಟ್ರೆಂಚ್ ಮಾಡಿದ್ದಾರೆ, ನವೆಂಬರ್, ಡಿಸೆಂಬರ್‌ನಲ್ಲಿ ಅಪಾಯಿಂಟ್ ಕೊಡುತ್ತಾರೆ. ಸರ್ವೀಸ್ ಒಂದು ವರ್ಷ ಬೇಕಾದರೆ ಹೇಗೆ ಆಗುತ್ತನೆ, ಈ ಒಂದು ಕಂಡೀಷನ್ ಮಾಡಬೇಕು, ಯಾರು ಯಾರು ಟೀಚರ್ಸ್ ೫-೬ ವರ್ಷ ಕೆಲಸ ಮಾಡುತ್ತಾರೆ, ಅವರು ನಮ್ಮ ದೇಶದಲ್ಲಿರುವರೇ ಅವರಿಗೂ ಜೀವನ ಇದೆ ಆದುದರಿಂದ ಅವರಿಗೆ ಕಂಡೋನೇಷನ್ ಕೊಟ್ಟು ರೆಗ್ಯುಲರೈಸ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಬೆಂಗಳೂರು ಯೂನಿವರ್ಸಿಟಿ ಬಗ್ಗೆ ಪೋಸ್ಟ್‌ಗ್ರ್ಯಾಜ್ಯುಯೇಟ್ ಸೆಂಟರ್ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದೀರಿ ಬಹಳ ಸಂತೋಷವಾಗುತ್ತದೆ. ನಾವು ಹೈದರಬಾದ್ ಕರ್ನಾಟಕಕ್ಕೆ ಪದೇ ಪದೇ ಹೇಳುತ್ತಿದ್ದೇವೆ. ಹೈದರಬಾದ್ ಕರ್ನಾಟಕ ಹಿಂದುಳಿದ ಪ್ರದೇಶ, ಧಾರವಾಡ ಕೂಡ ೩೦೦ ಮೈಲಿ ಆಗುತ್ತದೆ ಬಿದರೆ, ರಾಯಚೂರು ಮತ್ತು ಗುಲ್ಬರ್ಗದಲ್ಲಿ ಇಂತಕ್ಕ ಹುಡುಗರಿಗೆ, ವಿಶ್ವವಿದ್ಯಾನಿಲಯ ಇದ್ದರೆ ಬಹಳ ಅನುಕೂಲವಾಗುತ್ತದೆ. ಇದು ಬರೀ ನಮ್ಮ ಜನರ ಕನಸು ಆಗ ಬಹುದು. ಹೈದರಾಬಾದ್ ಕರ್ನಾಟಕದಲ್ಲಿ ವಿಶ್ವವಿದ್ಯಾನಿಲಯ ಆಗಬೇಕು, ಅದು ಆಗ ಬೇಕಾದರೆ ಅಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡಬೇಕಾಗುತ್ತದೆ. ಅಲ್ಲಿ ಪೋಸ್ಟ್‌ಗ್ರ್ಯಾಜ್ಯುಯೇಟ್ ಸೆಂಟರ್ ಏನು ಇದೆ ಅದನ್ನು ಸರಿಯಾಗಿ ಡವಲಪ್ ಮಾಡಬೇಕಾಗುತ್ತದೆ. ಯಾರ ಮೇಲೂ ಆಕ್ಷೇಪಣೆ ಮಾಡುತ್ತಾ ಇಲ್ಲ, ವಾಸ್ತವ ಕತೆ ಹೇಳಬೇಕಾದರೆ, ಧಾರವಾಡ ಭಾಗದ ಜನರು ನಮ್ಮ ಗುಲ್ಬರ್ಗದಲ್ಲಿ ವಿಶ್ವವಿದ್ಯಾನಿಲಯ ಮಾಡಬೇಕೇ, ಮಾಡಬಾರದೇ ಎಂಬ ಶಂಕೆ ಬರುತ್ತದೆ. ಇವತ್ತಿನ ದಿವಸ ಗುಲ್ಬರ್ಗಾದಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ಸೆಂಟರ್ ಪ್ರಾರಂಭವಾಗಿದೆ, ಅದು ಈ ಸ್ಥಳದಲ್ಲಿ ಇದೆ.

ಕರ್ನಾಟಕ ರಾಜ್ಯದಲ್ಲಿ ಸೂಕ್ಷ್ಮವಾಗಿ ನೋಡಿದರೆ ಅಲ್ಲಲ್ಲಿ ಒಳ್ಳೆಯ ಉತ್ತಮವಾದ ವಿಶ್ವವಿದ್ಯಾನಿಲಯವಾಗುತ್ತದೆ. ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್‌ನಲ್ಲಿ ಮಲತಾಯಿ ಧೋರಣೆಯನ್ನು ತೋರಿಸುತ್ತಾರೆ ಎಂಬ ಭಾವನೆ ನಮ್ಮಲ್ಲಿ ಇದೆ. ಇದು ಹೇಗೇ ಆಗಲಿ ಅಕಾಡೆಮಿಕ್ ಲೈನ್‌ನಲ್ಲಿ ಇರುವ ಪ್ರೊಫೇಸರೇ ಆಗಲಿ, ಅವರು ಫಾರಿನ್‌ನಿಂದ ಬರಲಿ ನಮಗೆ ಅಭ್ಯಂತರ ಇಲ್ಲ. ಬೇರೆ ಕಡೆ ಬಂದು ಓದಿಸಲಿಕ್ಕೆ ನಮ್ಮ ಭಾಗದವರೇ ಬರಬೇಕು ಎಂದು ಹೇಳುತ್ತಾ ಇಲ್ಲ. ನಮ್ಮ ಭಾಗದಲ್ಲಿ ಇರತಕ್ಕ ಜನರಿಗೆ ಅಡ್ಮಿನಿಸ್ಟ್ರೇಷನ್ ಲೈನ್‌ನಲ್ಲಿ ಹೋಗಬೇಕು, ಆ ರೀತಿ ತಾವು ಮಾಡಬೇಕು. ಅಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್‌ಪೋಸ್ಟ್ ಇದೆ, ಕ್ಲರಿಕಲ್ ಪೋಸ್ಟ್ ಇದೆ. ಪ್ಯೂಯನ್ ಪೋಸ್ಟ್ ಇದೆ ಮೊನ್ನೆ ತಾನೇ ಅವರಿಗೆ ಅಪಾಯಿಂಟ್‌ಮೆಂಟ್ ಆಯಿತು ಪ್ಯೂಯನ್ ಧಾರವಾಡದಿಂದ ಬಂದಿದ್ದಾನೆಯೆ ನಮ್ಮ ಜನರಲ್ಲಿ ಆ ರೀತಿಯ ಫೀಲಿಂಗ್ ಇದೆ. ಈ ರೀತಿ ಫೀಲಿಂಗನ್ನು ಏತಕ್ಕೆ ಮಾಡುತ್ತಾರೋ? ಈ ರೀತಿಯಾಗಿ ನಮ್ಮಲ್ಲಿ ವಿಶ್ವವಿದ್ಯಾನಿಲಯ ಮಾಡಿದರೂ ಕೂಡ, ಬಿಲ್ಡಿಂಗ್ ಮಾಡಿದರೂ ಕೂಡ ಅಲ್ಲಿ ಇರತಕ್ಕ ಜನ ಅಲ್ಲಿಂದ ಬಂದರೆ ಏನು ಪ್ರಯೋಜನ ಎಂದು ಫೀಲಿಂಗ್ ಕಾನ್‌ಫೆ ಮಾಡುತ್ತಾರೆ ಇದರ ಬಗ್ಗೆ ನಾನು ಆಕ್ಷೇಪಣೆ ಮಾಡುತ್ತಿಲ್ಲ, ಇದು ವಸ್ತುತಃ ನಡೆದಿದೆ. ಈ ಪ್ಯೂಯನ್ ಧಾರವಾಡದಿಂದ ಬರುತ್ತಾನೆ. ಅಲ್ಲಿ ೧೫೦ ಜನರು ಪೊಲಿಟಿಕಲ್ ಸೈನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಾರೆ ೨೫೦ ಪುಸ್ತಕಗಳನ್ನು ಲೋನ್ ಪ್ರಕಾರ ಕೊಟ್ಟಿದ್ದಾರೆ. ಪೋಸ್ಟ್ ಗ್ರ್ಯಾಜುಯೇಟ್ ಪುಸ್ತಕಗಳನ್ನು ಧಾರವಾಡದ ಯೂನಿವರ್ಸಿಟಿಯಲ್ಲಿ ಲೋನ್ ಬೇಸಿಸ್ ಮೇಲ ಕೊಡುತ್ತಾರೆ. ನಮ್ಮ ಭಾಗದಲ್ಲೆ ಇರತಕ್ಕ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಏನು ಇದೆ, ನಮ್ಮ ಭಾಗದಲ್ಲೆ ಏನು ವಿಶ್ವವಿದ್ಯಾಲಯ ಆಗಬೇಕಾಗಿದೆ ಅಲ್ಲೆ ಅಡ್ಮಿನಿಸ್ಟ್ರೇಟಿವ್ ಲೈನ್‌ನಲ್ಲಿ ನಮ್ಮ ಜನರು ಕೆಲಸ ಮಾಡುವುದಕ್ಕೆ ಆಸ್ಪದ ಸಿಕ್ಕಬೇಕು. ಈ ರೀತಿ ತಾವು ಡೈರೆಕ್ಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಮತ್ತೆ ನಮ್ಮ ಭಾಗದಲ್ಲೇ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಒಳ್ಳೆಯ ರೀತಿಯಲ್ಲಿ ಡೆವಲಪ್ ಆಗಬೇಕು ಒಂದು ವೇಳೆ ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್ ಬಂದರೆ, ಯೂನಿವರ್ಸಿಟಿ ಆಕ್ಟ್ ಸೂಕ್ತ ಎಂದು ಅವರಲ್ಲಿ ಅಭಿಪ್ರಾಯ ಮಾಡವೇಕಾದರೆ ನಮ್ಮಲ್ಲಿ ಸರಿಯಾಗಿ ಅಭಿವೃದ್ಧಿ ಆಗಬೇಕು ನಮ್ಮಲ್ಲಿ ಯಾರು ಯೂನಿವರ್ಸಿಟಿ ಪ್ರೊಫೆಸರ್ ಇದ್ದಾರೆ, ಯಾರಿಗೆ ಹೆಚ್ಚು ಅಭಿರುಚಿ ಇದೆ ಅಂತಹವರಿಗೆ ಡೈರೆಕ್ಟರ್ ಪೋಸ್ಟ್ ಕ್ರಿಯೇಟ್ ಮಾಡಿದ್ದೀರೀ, ಅದೇ ರೀತಿ ನಮ್ಮ ಭಾಗದಲ್ಲಿ ಇರತಕ್ಕ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್‌ಗೆ ಡೈರೆಕ್ಟರ್ ಪೋಸ್ಟನ್ನು ಮಾಡಿದರೆ ಅವರು ಸರಿಯಾಗಿ ಕೆಲಸ ಮಾಡಬಹುದು. ಈ ರೀತಿ ತಾವು ನಮ್ಮ ಭಾಗಕ್ಕೆ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾನಿಲಯ ಬೇಕೇ ಬೇಕು, ನಮ್ಮ ಭಾಗದಲ್ಲೆ ವಿಶ್ವವಿದ್ಯಾಲಯ ಆಗ ಬೇಕಾದರೆ ನಮ್ಮ ಭಾಗದಲ್ಲಿರುವ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಡೆವಲಪ್ ಆಗಬೇಕು. ಈ ದೃಷ್ಟಿ,

ಯಿಂದ ಕರ್ನಾಟಕ ಯೂನಿವರ್ಸಿಟಿಯವರಿಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ಅಭಿನಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಉಪಸಭಾಧ್ಯಕ್ಷರೇ ಮಾನ್ಯ ವಿದ್ಯಾಸಚಿವರು ಮಂಡಿಸಿರತಕ್ಕ ಈ ಬೇಡಿಕೆಯನ್ನು ನಾನು ಬಹಳ ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದೇನೆ. ಮತ್ತು ಅದಕ್ಕೆ ಪೂರ್ಣ ಬೆಂಬಲವನ್ನು ಕೂಡ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಇವತ್ತು ಬಹಳ ಚೆನ್ನಾಗಿ ರಚನಾತ್ಮಕವಾದ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದು ಬಹಳ ಚೆನ್ನಾಗಿ ಇತ್ತು. ಅವರು ಪ್ರತಿಯೊಂದು ವಿಷಯವನ್ನು ಕೂಡ ಸಂಪೂರ್ಣವಾಗಿ ವಿಮರ್ಶೆ ಮಾಡಿ ತುಲನಾತ್ಮಕ ದೃಷ್ಟಿಯಿಂದ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಥಮವಾಗಿ ಬಾಲವಾಡಿಗಳನ್ನು ಹಳ್ಳಿಗಳಲ್ಲೇ ಪ್ರಾರಂಭ ಮಾಡತಕ್ಕಂಥದ್ದು ಅತಿ ಪ್ರಾಮುಖ್ಯವಾದುದು ಎಂದು ನಾನೂ ಕೂಡ ಈ ಸಂದರ್ಭದಲ್ಲೇ ಅದನ್ನು ಬೆಂಬಲಿಸುತ್ತೇನೆ; ಪ್ರೈಮರಿ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಪ್ರಾರಂಭ ಮಾಡುವುದಕ್ಕೆ ಮುಂಚೆ ಅವರಿಗೆ ಆ ಒಂದು ಪರಿಜ್ಞಾನವನ್ನು ಹೆಚ್ಚಿಸತಕ್ಕಂತ ದಿಶೆಯಲ್ಲಿ ಬಾಲವಾಡಿಯೇ ಆಗಲಿ ಶಿಶುವಿಹಾರಗಳೇ ಆಗಲಿ ಅತ್ಯಂತ ಅವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಳ್ಳಿಗಳಲ್ಲಿ ಏನೋ ಒಂದು ಕಾಟಾಚಾರಕ್ಕೆ ಮಾಡತಕ್ಕಂಥ ವ್ಯವಸ್ಥೆ ಕೂಡ ಇದೆ. ಆ ಸಂಘ ಸಂಸ್ಥೆಗಳು ಈ ಒಂದು ಕ್ಷೇತ್ರದಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಮಕ್ಕಳ, ಹೆಂಗಸರ ಮತ್ತು ಶಿಶು ಕಲ್ಯಾಣ ಕೇಂದ್ರಗಳು, ಕೆಲವು ಸಂಸ್ಥೆಗಳು ಕೆಲವು ತಾಲ್ಲೂಕುಗಳಲ್ಲಿ ಈ ಕಾರ್ಯವನ್ನು ಕೈಗೊಂಡಿದೆ. ಅವರೂ ಕೂಡ ಕೆಲವು ಕಡೆ ನಡೆಸುತ್ತಿದ್ದಾರೆ. ಮತ್ತು ಸರ್ಕಾರದವರು ಕೂಡ ಕೆಲವು ಕಡೆ ಶಿಶುವಿಹಾರಗಳನ್ನು ನಡೆಸುತ್ತಿದ್ದಾರೆ. ಅವುಗಳಲ್ಲಿ ಸಾಕಷ್ಟು ಪಂಚಾಯಿತಿಗಳೂ ಕೂಡ ಅಲ್ಲಿ ಇಲ್ಲಿ ಒಂದರಂತೆ ಅವರೂ ಕೂಡ ಶಿಶುವಿಹಾರಗಳನ್ನು ಪ್ರಾರಂಭ ಮಾಡಿದ್ದಾರೆ. ಇದು ಈಗ ಕಾರ್ಯ ವ್ಯಾಪಕವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಅಂದರೆ ಸಾಧಾರಣವಾಗಿ ಸುಮಾರು ಎರಡು ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಹಳ್ಳಿ ಹಳ್ಳಿಗಳಲ್ಲೂ ಕೂಡ ಪ್ರಥಮವಾಗಿ ಬಾಲವಾಡಿಗಳನ್ನಾಗಲೀ, ಶಿಶುವಿಹಾರಗಳನ್ನಾಗಲೀ ಪ್ರಾರಂಭ ಮಾಡಿ ಅವರಿಗೆ ಪಾಠಶಾಲೆಗೆ ಹೋಗಬೇಕು ಎನ್ನುವ ಮನೋಭಾವ ಮೂಡಿಸತಕ್ಕಂತ ಪರಿಸ್ಥಿತಿಯನ್ನು ಒದಗಿಸತಕ್ಕಂಥದ್ದು, ಅಂತಹ ಸನ್ನಿವೇಶವನ್ನು ಒದಗಿಸಿ ಕೊಡತಕ್ಕಂಥದ್ದು ಸರ್ಕಾರದ ಮತ್ತು ಸಂಘ ಸಂಸ್ಥೆಗಳ ಆದ್ಯಕರ್ತವ್ಯವೆಂದು ನಾನಾದರೂ ಮಾಡ ಇಲ್ಲಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಪ್ರೈಮರಿ ಪಾಠಶಾಲೆಗಳಿಗೆ ಸರ್ಕಾರದವರು ಏನು ವರ್ಷ ವರ್ಷೇ ಖರ್ಚು ಮಾಡುತ್ತಿದ್ದಾರೆ, ಕಳೆದ ವರ್ಷ ಖರ್ಚು ಮಾಡಿದ್ದು 10 ಕೋಟಿ ರೂಪಾಯಿಗಳನ್ನು, ಈ ವರ್ಷ [illegible]2 ಕೋಟಿ ರೂಪಾಯಿ ಚಿಲ್ಲರೆಯನ್ನು ಖರ್ಚು ಮಾಡಿದ್ದಾರೆ. ಅಂದರೆ [illegible] ಕೋಟಿ ರೂಪಾಯಿಗಳನ್ನು ಒಂದೇ ಒಂದು ವರ್ಷಕ್ಕೆ ಈ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಇದಕ್ಕೆ ಕಾರಣವಾದರೂ ಇಷ್ಟೆ ಹಳ್ಳಿಗಳ ಕಡೆ ಪ್ರತಿಯೊಂದು ಹಳ್ಳಿಯಲ್ಲೂ ಬಹುಶಃ ಒಂದು ವರ್ಷ ಎರಡು ವರ್ಷ ಅಷ್ಟರಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಕೂಡ 30 ಮಕ್ಕಳು ಅಥವಾ 40 ಮಕ್ಕಳು ಬರತಕ್ಕಂಥ ಒಂದು ಪ್ರಾಥಮಿಕ ಪಾಠಶಾಲೆಯನ್ನು ಹೊಂದುತ್ತದೆ ಎನ್ನುವ ವಿಶ್ವಾಸ ನಮಗೆ ಮೂಡಿದೆ ಎಂದರೆ ತಪ್ಪಾಗಲಾರದು ಇವತ್ತು ನನ್ನ ಕ್ಷೇತ್ರವನ್ನು ತೆಗೆದುಕೊಂಡರೆ ಇನ್ನು ಕೇವಲ [illegible] ಹಳ್ಳಿಗಳಿಗೆ ಮಾತ್ರ ಪ್ರಾಥಮಿಕ ಪಾಠಶಾಲೆಗಳು ಬೇಕು. ಅಲ್ಲಿ ನಾವು ಮೊದಲೇ [illegible]00 ಪಾಠಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಇನ್ನು ಕೇವಲ [illegible] ಹಳ್ಳಿಗಳಿಗೆ ಮಾತ್ರ ಪಾಠಶಾಲೆಗಳು ಬೇಕಾಗಿವೆ. ಈ ಒಂದು ದಿಶೆಯಲ್ಲಿ ಅದರ ಗುಣಮಟ್ಟವನ್ನು ಕಾಪಾಡತಕ್ಕಂಥ ಪ್ರಯತ್ನ ಸಿಕ್ಕಬೇಕೇ ವಿನಹ ಪಾಠ ಶಾಲೆಗಳನ್ನು ಅವಶ್ಯಕವಾಗಿ ಇನ್ನು ಮುಂದೆ ಒಂದೆರಡು ವರ್ಷಗಳಲ್ಲಿ ಈ ಒಂದು ಕಾರ್ಯಕ್ರಮ ಮುಗಿಯುತ್ತದೆ. ತಸ್ಮಾತ್ ಮೂಲಕ ಎರಡನೇ ಹಂತದ ಗುಣಮಟ್ಟವನ್ನು ಕಾಪಾಡತಕ್ಕಂಥ, ಅದನ್ನು ಉಳಿಸತಕ್ಕಂಥ ಕಾರ್ಯಕ್ರಮ ನಮ್ಮದಾಗಬೇಕು ಎಂದು ನಾನಾದರೂ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಸುತ್ತೇನೆ. ಇದರಲ್ಲಿ ಒಂದು ನ್ಯೂನತೆಯನ್ನು ನಾನು ಕಂಡಿದ್ದೇನೆ ಈಗ ಕೆಲವೊಂದು ಪಾಠಶಾಲೆಯಲ್ಲಿ ಒಬ್ಬನೇ ಉಪಾಧ್ಯಾಯನಿರುತ್ತಾನೆ. ನಮ್ಮ ಗೌರವಾನ್ವಿತ ಸದಸ್ಯರನೇಕರು ಇದರ ಬಗ್ಗೆ ತಿಳಿಸಿದ್ದಾರೆ. ಇರುವ ಒಬ್ಬ ಉಪಾಧ್ಯಾಯ ರಜ ಹಾಕಿ ಹೋದನಂತರ ಪಾಠಶಾಲೆ ಮುಚ್ಚಿಕೊಂಡು ಹೋಗಿರುತ್ತದೆ. ಈ ಒಂದು ಸ್ಥಿತಿಯಲ್ಲಿ ಆ ಪಾಠಶಾಲೆ ಸಮರ್ಪಕವಾಗಿ ಕೆಲಸ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದೇ ಕಾರಣದಿಂದ ಕೂಡ ನಾವು ಒಬ್ಬ ಉಪಾಧ್ಯಾಯ ಇರತಕ್ಕಂಥ ಒಂದು ಪಾಠಶಾಲೆಯನ್ನು ಇನ್ನು ಮುಂದೆ ಇಟ್ಟುಕೊಳ್ಳಬಾರದು. ಅದರಿಂದ ಅದರ ಗುಣಮಟ್ಟವನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ಮತ್ತು ಅನೇಕ ನ್ಯೂನತೆಗಳನ್ನು ನಿವಾರಿಸುವುದಕ್ಕೂ ಆಗುವುದಿಲ್ಲ. ಆದುದರಿಂದ ಒಂದು ಪಾಠ ಶಾಲೆಯಲ್ಲಿ ಇಬ್ಬರು ಉಪಾಧ್ಯಾಯರು ಇದ್ದೇ ಇರಬೇಕು ನನ್ನ ಖಚಿತವಾದ ಅಭಿಪ್ರಾಯ.

ಆದಕ್ಕಾಗಿ ಸರ್ಕಾರ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇನ್ನು ಕೆಲವಾರು ಕಡೆ ಹಣ ಬೇಕಾಗುತ್ತದೆ. ಅವರೂ ಕೂಡ ಪ್ರಾರಂಭದಲ್ಲಿ ನಾವು ಹಿಂದೆ ಬೀಳಬಾರದು. ತನ್ಮೂಲಕ ಇದು ಪ್ರಥಮ ಹಂತ. ಪ್ರಾಥಮಿಕ ಪಾಠಶಾಲೆಯ ಈ ಒಂದು ಹಂತವನ್ನು ನಾವು ಸಮರ್ಪಕವಾಗಿ ವ್ಯವಸ್ಥಿತವಾದ ರೀತಿಯಲ್ಲಿ ನಡೆಸಿದ್ದೇ ಆದರೆ ಮುಂದಿನ ಹಂತದಲಿ ವ್ಯವಸ್ಥಿತವಾಗಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೆಂದು ಹೇಳಿ; ಇದು ನನ್ನ ಖಚಿತವಾದ ಅಭಿಪ್ರಾಯ. ಈ ಒಂದು ದಿಸೆಯಲ್ಲಿ ಸರ್ಕಾರ ಯೋಚನೆ ಮಾಡಿ ಕನಿಷ್ಟಪಕ್ಷ ಒಂದು ಶಾಲೆಯಲ್ಲಿ ಇಬ್ಬರಾದರೂ ಉಪಾಧ್ಯಾಯರಿರಬೇಕೆನ್ನುವ ಕಷ್ಟವನ್ನು ಅನುಷ್ಠಾನಕ್ಕೆ ತರಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

4-30 P.M.

ಶಾಲಾ ಕಟ್ಟಡಗಳ ಬಗ್ಗೆ ಕೆಲವು ವಿಷಯಗಳನ್ನು ಹಿಂದೆ ಇದ್ದ ವಿದ್ಯಾಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಪ್ರಾಥಮಿಕ ಶಾಲೆಗಳ ಕಟ್ಟಡಗಳಿಗೆ ಸರ್ಕಾರದಿಂದ ೬೦ ಭಾಗ, ಪಂಚಾಯಿತಿಯಿಂದ ಮತ್ತು ತಾಲ್ಲೂಕು ಬೋರ್ಡಿನಿಂದ ೨೦ ಭಾಗ ಮತ್ತು ಜನರಿಂದ ೨೦ ಭಾಗ ಕೊಡುವ ವ್ಯವಸ್ಥೆ ಇತ್ತು. ಆದರೆ ಈಚೆಗೆ ಈ ವ್ಯವಸ್ಥೆಯನ್ನು ತಪ್ಪಿಸಿ ಒಂದು ಕೊಠಡಿಗೆ ೨೫೦೦ ರೂಪಾಯಿ ಕೊಡುವುದು ಮತ್ತು ಬಾಕಿ ಹಣವನ್ನು ತಾಲೂಕು ಬೋರ್ಡು ಅಥವಾ ಪಂಚಾಯಿತಿಗಳು ಹಾಕಿಕೊಂಡು ಕಟ್ಟಡಗಳನ್ನು ಕಟ್ಟಿಸುವುದು ಎನ್ನುವ ಆದೇಶವನ್ನು ಕಳುಹಿಸಿದ್ದಾರೆ. ಇದು ಸಾಧ್ಯವಲ್ಲ, ಕಾರ್ಯರೂಪಕ್ಕೆ ಬರುವಂತದಲ್ಲ ಎನ್ನುವುದು ನನ್ನ ಖಚಿತವಾದ ನಿಲುವು ಈ ವ್ಯವಸ್ಥೆಯಲ್ಲಿ ನಾವು ಪ್ರಯತ್ನ ಪಡುತ್ತಿದ್ದರೂ ನಮ್ಮ ನಮ್ಮ ಪ್ರಯತ್ನಕ್ಕೆ ಸರಿಯಾದ ಪ್ರತಿಫಲ ಸಿಕ್ಕಿಲ್ಲ ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ತಾಲ್ಲೂಕು ಬೋರ್ಡಿನ ಪ್ರಥಮ ಆದ್ಯ ಕರ್ತವ್ಯವೆಂದು ಪಾಠಶಾಲಾ ಕಟ್ಟಡಗಳನ್ನು ಕಟ್ಟಿಸುವ ಕೆಲಸವನ್ನು ಮಾಡಿದೆ. ಇನ್ನು ಏಳೆಂಟು ಸ್ಥಳಗಳಲ್ಲಿ ಪಾಠಶಾಲೆಗೆ ಕಟ್ಟಡಗಳನ್ನು ಕಟ್ಟಿಸಿದರೆ ನಮ್ಮ ತಾಲ್ಲೂಕಿನಲ್ಲಿ ಕಟ್ಟಡಗಳಿಲ್ಲದೆ ಇರುವ ಪಾಠಶಾಲೆಗಳೇ ಇಲ್ಲ ಎಂದು ನಾವು ಹೇಳಿಕೊಳ್ಳಬಹುದು. ಇನ್ನು ಎರಡು ಮೂರು ವರ್ಷಗಳಲ್ಲಿ, ಹಿಂದೆ ಇದ್ದ ವ್ಯವಸ್ಥೆಯೇ ಜಾರಿಯಲ್ಲಿದ್ದ ಪಕ್ಷದಲ್ಲಿ ಪೂರ್ತಿಯಾಗಿ ಎಲ್ಲ ಕಡೆಗಳಲ್ಲಿಯೂ ಕಟ್ಟಡಗಳ ನಿರ್ಮಾಣವಾಗಿ, ಯಾವ ಪಾಠಶಾಲೆಗೂ ಕಟ್ಟಡವಿಲ್ಲ ಎಂದು ಹೇಳುವ ಪರಿಸ್ಥಿತಿ ಇರುವುದಿಲ್ಲವೆಂದು ನಾವು ಧೈರ್ಯವಾಗಿ ಹೇಳುತ್ತಿದ್ದೆವು ಈ ಹೊತ್ತು ಆ ಪರಿಸ್ಥಿತಿ ಇಲ್ಲ. ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡತಕ್ಕ ಸ್ಥಿತಿಯಲ್ಲಿಲ್ಲ ಅವರು ಹಣವನ್ನು ಕೊಡತಕ್ಕ ಪರಿಸ್ಥಿತಿಯಲ್ಲಿಯೂ ಇಲ್ಲ. ಆದುದರಿಂದ ಈಗಿನ ಹೊಸ ವ್ಯವಸ್ಥೆಯಲ್ಲಿ ಕಟ್ಟಡಗಳನ್ನು ಕಟ್ಟುವ ಕಾರ್ಯಕ್ರಮ ನಿಂತು ಹೋಗಿದೆ ಕಟ್ಟಡಗಳು ಆಗುವುದಿಲ್ಲ ಆದ್ದರಿಂದ ಸರ್ಕಾರದವರು ಪುನರ್ವಿಮರ್ಶೆ ಮಾಡಿ ಹಿಂದೆ ಇದ್ದ ರೀತಿಯಲ್ಲಿ ಕಟ್ಟಡಗಳಿಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕು. ಒಂದು ಸಮಯ ಸರ್ಕಾರದಲ್ಲಿ ಹಣದ ಅಭಾವವಿದ್ದರೆ ಅದಕ್ಕೆ ನನ್ನ ಸಲಹೆ ಏನೆಂದರೆ ಎರಡು ವರ್ಷ ಕಾಲ ಕಟ್ಟಡಗಳನ್ನು ಕಟ್ಟುವುದೇ ಬೇಡ. ಈವಾಗ ಕೊಟ್ಟಿರುವ ಆದೇಶದ ಪ್ರಕಾರ ಕಟ್ಟಡಗಳನ್ನು ಕಟ್ಟಿಸುವುದಾದರೆ ಸರಿಯಾದ ರೀತಿಯಲ್ಲಿ ಯಾರೂ ಕಟ್ಟಿಸುವುದಿಲ್ಲ ಇಲಾಖೆಯ ಆದೇಶದಂತೆ ಕಟ್ಟಡವಿರುವುದಿಲ್ಲ, ಅದರ ಮಟ್ಟ ಸರಿಯಾಗಿರುವುದಿಲ್ಲ ಕಟ್ಟುವ ಕಟ್ಟಡಗಳು ಹತ್ತು ವರ್ಷವಾದರೂ ಬಾಳಿಕೆ ಬರುತ್ತವೆಯೋ ಇಲ್ಲವೋ ಗೊತ್ತಿಲ್ಲ ಎಲ್ಲ ವಿಚಾರಗಳನ್ನೂ ಗಮನಿಸಿ ನೋಡಿದರೆ, ಶಾಲಾ ಕಟ್ಟಡಗಳನ್ನು ಕಟ್ಟುವ ಕಾರ್ಯಕ್ರಮ ಯಶಸ್ವಿಯಾಗಬೇಕು, ಕಟ್ಟಡಗಳು ಹತ್ತಾರು ವರ್ಷ ಇರಬೇಕು ಎನ್ನುವುದಾದರೆ ಹಿಂದೆ ಇದ್ದ ವ್ಯವಸ್ಥೆಯನ್ನೇ ಜಾರಿಗೆ ತರಬೇಕು. ಹಾಗೆ ಮಾಡದೆ ಹೋದರೆ ಮಣ್ಣಿನಿಂದ ಗೋಡೆಗಳನ್ನು ಕಟ್ಟಿ, ಯಾವುದೋ ಮರವನ್ನೋ ಅಥವಾ ಬೊಂಬನ್ನೊ ಹಾಕಿ ಹುಲ್ಲು ಹೊದಿಸುತ್ತಾರೆ. ಈ ಕಟ್ಟಡಗಳು ನಾಲ್ಕು ವರ್ಷ ಕೂಡ ಇಲ್ಲದೆ ಬಿದ್ದು ಹೋಗಿ ರಾಜ್ಯದ ಬೊಕ್ಕಸಕ್ಕೆ ಖಣ ಖರ್ಚಾಗುತ್ತದೆಯೇ ವಿನಾ ಅದರಿಂದ ಅನುಕೂಲವಾಗುವುದಿಲ್ಲ, ದೇಶದ ಹಣ ಪೋಲಾಗುತ್ತದೆಯಾದ್ದರಿಂದ ಈ ಬಗ್ಗೆ ಸರ್ಕಾರ ಪುನರ್ವಿಮರ್ಶೆ ಮಾಡಿ ಹಿಂದೆ ಇದ್ದ ವ್ಯವಸೆಯನ್ನೇ ಜಾರಿಗೆ ತರಬೇಕು ಎಂದು ಸಲಹೆ ಮಾಡುತ್ತೇನೆ.

ಪ್ರಾಥಮಿಕ ವಿದ್ಯಾಭ್ಯಾಸದ ಮಟ್ಟದಲ್ಲಿ ಸರ್ಕಾರ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ನಮ್ಮ ರಾಜ್ಯದಲ್ಲಿ ಸುಮಾರು ೩೨,೮೪೦ ಪ್ರಾಥಮಿಕ ಶಾಲೆಗಳೂ ೨,೫೦೦ ಹೈಸ್ಕೂಲುಗಳೂ ಇವೆ ಹೈಸ್ಕೂಲುಗಳು ಸಾಕಷ್ಟು ಸಂಖ್ಯೆಯಲ್ಲಿ ಆಗಿವೆ. ಅಲ್ಲಿಯೂ ಕೂಡ ಗುಣಮಟ್ಟವನ್ನು ಕಾಪಾಡತಕ್ಕದ್ದು ನಮ್ಮ ಕರ್ತವ್ಯವಾಗಬೇಕು. ಪ್ರತಿವರ್ಷವೂ ಹೊಸ ಹೈಸ್ಕೂಲುಗಳನ್ನು ಪ್ರಾರಂಭ ಮಾಡುತ್ತ ಹೋದರೆ ಗುಣಮಟ್ಟವನ್ನು ಕಾಪಾಡುವುದಕ್ಕಾಗುವುದಿಲ್ಲ. ೧೯೭೨ ರಿಂದ ನಾವು ಬಜೆಟ್ಟನ್ನು ನೋಡಿದರೆ ಪ್ರತಿ ವರ್ಷವೂ ಹತ್ತು ಕೋಟಿ ರೂಪಾಯಿಗಳಂತೆ ಜಾಸ್ತಿಯಾಗಿ ಖರ್ಚು ಮಾಡುತ್ತಿದ್ದೇವೆ. ಈರೀತಿಯಾಗಿ ಖರ್ಚು ಮಾಡಿಕೊಂಡು ಹೋಗಿ ಗುಣಮಟ್ಟವನ್ನು ಕಾಪಾಡಿಕೊಳ್ಳದೆ ಇದ್ದರೆ ಆ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದ ಹಾಗೆ ಆಗುವುದಿಲ್ಲವೆಂದು ನಾನಾದರೂ ಹೇಳುತ್ತೇನೆ.

ಹೈಸ್ಕೂಲು ಹಂತದಲ್ಲಿ ನಾವು ಅನೇಕ ಮಾರ್ಪಾಟುಗಳನ್ನು ಮಾಡಬೇಕಾಗಿದೆ ಎಸ್ ಎಸ್.ಎಲ್.ಸಿ. ಪಾಸ್ ಮಾಡಿದ ನಂತರ ಅಲ್ಲಿಗೇ ಬಿಟ್ಟರೆ ದೇಶದ ಸಮಸ್ಯೆ ಜಾಸ್ತಿಯಾಗುತ್ತದೆಯೇ ವಿನಾ ಸಮಸ್ಯೆಗಳನ್ನು ಉದ್ಭವ ಮಾಡಿದ ಹಾಗೆ ಆಗುತ್ತದೆಯೋ ವಿನಾ ಸಮಸ್ಯೆಗಳನ್ನು ಬಗೆಹರಿಸಿದಂತಾಗುವುದಿಲ್ಲ. ಈ ದಿಸೆಯಲ್ಲಿ ಪ್ರಯತ್ನ ಪಡಬೇಕು. ಹೈಸ್ಕೂಲುಗಳಲ್ಲಿ ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ಕೈಗಾರಿಕೆಗೆ ಸಂಬಂಧಪಟ್ಟಂತೆ ಮತ್ತು ಇನ್ನೂ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ವಿಷಯಗಳನ್ನು ಬೋಧಿಸಿ, ವಿದ್ಯಾರ್ಥಿಗಳು ಹೈಸ್ಕೂಲು ವ್ಯಾಸಂಗವನ್ನು ಮುಗಿಸಿದ ನಂತರ ಯಾವುದಾದರೂ ಒಂದು ಕಸುಬನ್ನು ಅವಲಂಬಿಸಿ ತಮ್ಮ ಕಾಲ ಮೇಲೆ ತಾವು ನಿಂತು ಜೀವನೋಪಾಯವನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇರುವಂತೆ ಮಾಡಬೇಕು

ಪ್ರತಿವರ್ಷವೂ ಲಕ್ಷಗಟ್ಟಲೆ ಹುಡುಗರು ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡು ಹೊರಗೆ ಬರುತ್ತಿರುವುದು ನಮಗೆ ಹೊರೆಯಾಗಿದೆ ಬೆಳಗಾದರೆ ನಮಗೆ ಕೆಲಸ ಕೊಡಿಸಿ ಎಂದು ಕೇಳುತ್ತಾರೆ. ಯಾವ ಸರ್ಕಾರ ತಾನೇ ಪ್ರತಿಯೊಬ್ಬರಿಗೂ ಕೆಲಸಗಳನ್ನು ಕೊಡುವುದಕ್ಕಾಗುತ್ತದೆ ? ಆದುದರಿಂದ ಈ ದಿಸೆಯಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ಹೈಸ್ಕೂಲು ಹಂತದ ವಿದ್ಯಾರ್ಥಿಗೆ ಯಾವ ವಿಷಯದಲ್ಲಿ ಅಭಿರುಚಿ ಇರುತ್ತದೆಯೋ ಅವರಲ್ಲಿ ವ್ಯಾಸಂಗ ಮಾಡಿ ಯಾವುದಾದರೂ ಒಂದು ಕಸುಬನ್ನು ಅವಲಂಬನೆ ಮಾಡಿ, ಪರಾವಲಂಬಿಯಾಗದೆ ಜೀವನವನ್ನು ನಡೆಸುವುದಕ್ಕೆ ಅನುಕೂಲವಾಗುವಂಥ ವಿದ್ಯಾಭ್ಯಾಸವನ್ನು ಕೊಡುವ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ ಆ ಮೂಲಾಗ್ರವಾಗಿ ವಿಚಾರ ಮಾಡಿ ಯಾವುದಾದರೂ ಒಂದು ನಿರ್ಧಾರಕ್ಕೆ ಒಂದು ರಾಜ್ಯಕ್ಕೆ ಹೊರೆಯಾಗದಂತೆ ಏರ್ಪಾಡು ಮಾಡಿ ತನ್ಮೂಲಕ ಹುಡುಗರು ಕೂಡ ತಮಗೆ ಕೆಲಸವಿಲ್ಲ ಎಂದು ಕೂಗುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಪಿ.ಯು.ಸಿ. ಬಗ್ಗೆ ಹೇಳುವುದಾದರೆ ಕಳೆದ ವರ್ಷ ಬಹಳ ಕಾಲೇಜುಗಳನ್ನು ಪ್ರಾರಂಭ ಮಾಡಿದೆವು ೫೮೮ ಕಾಲೇಜುಗಳು ನಮ್ಮಲ್ಲಿ ಈಗಾಗಲೇ ಇವೆ. ಇಷ್ಟು ಕಾಲೇಜುಗಳನ್ನು ಎಂದೂ ಕೂಡ ಯಾವ ಸರ್ಕಾರವೂ ಕೂಡ ಮಾಡುವುದಕ್ಕೆ ಆಗಿರಲಿಲ್ಲ. ಹಳ್ಳಿಯ ಮಕ್ಕಳು ಕೂಡ ಕಾಲೇಜು ಮಟ್ಟಕ್ಕೆ ನಾವು ಹೋಗಿ ಓದಿದ್ದೇವೆ ಎಂದು ಹೇಳುವಂಥ ಅವಕಾಶ ದೊರೆಯಲಿ ಎನ್ನುವ ಆಸೆಯನ್ನು ಇಟ್ಟುಕೊಂಡು ಮಾಡಿದ್ದೇವೆ. ಈ ದಿಸೆಯಲ್ಲಿ ಬಹಳ ಪ್ರಗತಿಯಾಗಿದೆ ಪ್ರಗತಿ ಕುಂಠಿತವಾಗುವುದಕ್ಕೆ ಬಿಡಬಾರದು. ಇದಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅನೇಕ ಕಡೆ ಜೂನಿಯರ್ ಕಾಲೇಜುಗಳಿಗೆ ಕಟ್ಟಡಗಳಿಲ್ಲ. ಕೆಲವು ಕಡೆ ದಾನಿಗಳು ಹಣವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ ಆ ರೀತಿ ಕೊಡುವ ವಂತಿಗೆಯನ್ನು ಸರ್ಕಾರ ತೆಗೆದುಕೊಳ್ಳಬೇಕು. ನಮ್ಮಲ್ಲಿ ಎರಡು ಕಾಲೇಜುಗಳಿವೆ. ನಾನು ಜನಗಳಿಂದ ಹಣವನ್ನು ವಸೂಲ್ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ವಂತಿಗೆ ಕೊಡುವುದಕ್ಕೆ ಅನೇಕರು ಮುಂದೆ ಬಂದಿದ್ದಾರೆ. ಸರ್ಕಾರ ಸ್ವಲ್ಪ ಮಟ್ಟಿಗಾದರೂ ಹಣವನ್ನು ಕೊಟ್ಟು ಹಂತಹಂತವಾಗಿ ಕಟ್ಟಡಗಳು ಆಗಬೇಕು ಎನ್ನುವ ದಿಸೆಯಲ್ಲಿ ಪ್ರಯತ್ನ ಮಾಡಬೇಕು.

೫೦ ಪರ್ಸೆಂಟ್ ಸರ್ಕಾರ ಒದಗಿಸಿದರೆ ಉಳಿದ ೫೦ ಪರ್ಸೆಂಟ್ ಹಣವನ್ನು ನಾವು ಜನರಿಂದ ವಸೂಲಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಂದು ಅನೇಕ ಪಿ.ಯು.ಸಿ. ಕಾಲೇಜುಗಳಿಗೆ ಕಟ್ಟಡಗಳು ಇಲ್ಲ. ಅವುಗಳಿಗೆ ಬೇಕಾದ ಸಲಕರಣೆಗಳು ಇಲ್ಲ ಲೈಬ್ರರಿ ವ್ಯವಸ್ಥೆ ಇಲ್ಲ; ಈ ದಿಸೆಯಲ್ಲಿ ಅವುಗಳನ್ನು ನಡೆಸುವುದು ಉಚಿತವಲ್ಲ, ಮಕ್ಕಳ ದೃಷ್ಟಿಯಿಂದ, ವಿದ್ಯಾಭ್ಯಾಸದ ದೃಷ್ಟಿಯಿಂದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ಅವುಗಳಿಗೆ ಬೇಕಾದ ಎಲ್ಲ ಅನುಕೂಲಗಳನ್ನು ಒದಗಿಸಿಕೊಡಬೇಕಾಗುತ್ತದೆ. ಈ ಬಗ್ಗೆ ಜನರಿಂದ ಮತ್ತು ಸಂಘಸಂಸ್ಥೆಗಳಿಂದ ಸ್ವಲ್ಪಮಟ್ಟಿಗೆ ನೆರವನ್ನು ನಾವು ಪಡೆಯಬಹುದಾಗಿದೆ, ಆದರೆ ಸರ್ಕಾರ ಕೂಡ ಸ್ವಲ್ಪಮಟ್ಟಿಗೆ ನೆರವು ಕೊಟ್ಟು ಇವು ವ್ಯವಸ್ಥಿತ ರೀತಿಯಲ್ಲಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ವಯಸ್ಕರ ವಿದ್ಯಾಭ್ಯಾಸದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈಚೆಗೆ ಈ ಸಂಸ್ಥೆಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಅವರು ಈಗ ಒಂದು ಸ್ಕೀಮನ್ನು ತೆಗೆದುಕೊಂಡಿದ್ದಾರೆ. ಏನೆಂದರೆ ಪ್ರತಿಯೊಬ್ಬ ವಿದ್ಯಾವಂತನೂ ಸಹ ಒಬ್ಬ ಅವಿದ್ಯಾವಂತನನ್ನು ವಿದ್ಯಾವಂತನನ್ನಾಗಿ ಮಾಡಬೇಕು ಎಂದು. ಈ ಮೂಲಕ ಪ್ರತಿಯೊಂದು ಮನೆಯವರೂ ಸಹ ವಿದ್ಯಾವಂತರಾಗಬೇಕೆಂಬುದು ಅವರ ಉದ್ದೇಶವಾಗಿದೆ. ಈ ಸ್ಕೀಮ್ ಪ್ರಕಾರ ಅವರು ಕೆಲಸ ಮಾಡಬೇಕಾದರೆ ಸರ್ಕಾರದವರು ಸಹ ಅವರಿಗೆ ಸಹಾಯ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಅವರಿಗೆ ಬರೀ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟು ಎಲ್ಲ ಹಳ್ಳಿಗಳಲ್ಲಿಯೂ ಶಾಲೆಗಳನ್ನು ತೆರೆದು ಕೆಲಸ ಮಾಡಿ ಎಂದು ಹೇಳಿದರೆ ಅದು ಸಾಧ್ಯವಾಗಲಾರದು. ಅವರಿಗೆ ಕನಿಷ್ಠಪಕ್ಷ ಒಂದು ಕೋಟಿ ರೂಪಾಯಿಗಳನ್ನಾದರೂ ಕೊಟ್ಟು

ಹಳ್ಳಿಗಾಡಿನ ಜನರ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ವ್ಯವಸಾಯ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಹಳ್ಳಿಯ ಜನರು ಮುಂದೆ ಬರಬೇಕಾದರೆ ಅವರಿಗೆ ವಿದ್ಯಾಭ್ಯಾಸ ಅತಿ ಅಗತ್ಯವಿದೆ. ಈ ಒಂದು ದಿಶೆಯಲ್ಲಿ ವಯಸ್ಕರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಆಗ ನಮ್ಮ ದೇಶದ ಪ್ರಗತಿ ಸರ್ವತೋಮುಖವಾಗಿ ಸಾಧನೆಯಾಗುವುದಕ್ಕೆ ಸಹಕಾರಿಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಈ ಸಂಸ್ಥೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದರ ಕೆಲಸವನ್ನು ನಾವು ಮೊಟಕುಗೊಳಿಸಬಾರದೆಂದು ಹೇಳುತ್ತೇನೆ. ಅದಕ್ಕೆ ಇನ್ನೂ ಹೆಚ್ಚಿನ ಉತ್ಸಾಹವನ್ನು ತುಂಬಿ ಅದು ಇನ್ನೂ ಹೆಚ್ಚಿನ ಕೆಲಸವನ್ನು ಯಶಸ್ವಿಯಾಗಿ ಮಾಡುವುದಕ್ಕೆ ಅವಕಾಶವಾಗುವಂತೆ ಸರ್ಕಾರ ಅದಕ್ಕೆ ತನ್ನ ಸರ್ವ ನೆರವನ್ನೂ ನೀಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಪಬ್ಲಿಕ್ ಲೈಬ್ರರೀಸ್ ಬಗ್ಗೆ ಹೇಳಬೇಕೆಂದರೆ, ಇಲ್ಲಿ ಕಳೆದ ೮–೧೦ ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ ಸೇವಾನಿಯಮವನ್ನು ಇನ್ನೂ ರಚನೆ ಮಾಡಿಲ್ಲ: ಅದನ್ನು ಜರೂರಾಗಿ ಮತ್ತು ಶೀಘ್ರವಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಸರ್ಕಾರದವರು ಎಜುಕೇಷನ್ ಸೆಸ್ ಎಂದು ವಸೂಲಿ ಮಾಡುತ್ತಿದ್ದಾರೆ. ಈ ಹಳ್ಳಿಗಾಡುಗಳಲ್ಲಿ ವಸೂಲಿಯಾದ ಸೆಸ್ ಹಣವನ್ನು ಕೇವಲ ಬೆಂಗಳೂರು ನಗರದಲ್ಲಿ ಖರ್ಚು ಮಾಡುವುದು ಸರಿಯಲ್ಲ, ಆಯಾ ತಾಲ್ಲೂಕ್ ಕೇಂದ್ರಗಳಲ್ಲಿ ಏನು ಹಣ ವಸೂಲಿ ಆಗುತ್ತದೋ ಆ ಹಣವನ್ನು ಆಯಾ ತಾಲ್ಲೂಕ್ ಕೇಂದ್ರಗಳಲ್ಲಿ ಒಂದೊಂದು ಗ್ರಂಥಾಲಯವನ್ನು ತೆರೆಯುವುದಕ್ಕೆ ಈ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಈ ದಿಶೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಬೇಕೆಂದು ಹೇಳುತ್ತೇನೆ. ನಮ್ಮ ವಿದ್ಯಾ ಸಚಿವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳು ಸಹ ಪ್ರಾಮಾಣಿಕತೆಯಿಂದ ಮತ್ತು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಈಗ ನಾವು ಪ್ರತಿವರ್ಷವೂ ಹೊಸದಾಗಿ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳನ್ನು ತೆರೆಯುತ್ತಿದ್ದೇವೆ. ಮತ್ತು ಪ್ರೀಯೂನಿವರ್ಸಿಟಿ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತಿದ್ದೇವೆ. ಜೊತೆಗೆ ಪ್ರತಿವರ್ಷವೂ ಹತ್ತು ಕೋಟಿ ರೂಪಾಯಿಗಳನ್ನು ಈ ಇಲಾಖೆಗೆ ಹೆಚ್ಚಾಗಿ ಖರ್ಚು ಮಾಡುತ್ತಿದ್ದೇವೆ. ಅಂಕಿ ಅಂಶಗಳಿಂದ ಇದೆಲ್ಲವೂ ತಿಳಿದುಬರುತ್ತದೆ. ಅಧಿಕಾರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ವಿದ್ಯಾಭ್ಯಾಸದ ಗುಣಮಟ್ಟವನ್ನು ಕಾಪಾಡುವ ದಿಶೆಯಲ್ಲಿ ಒಂದು ಕಾರ್ಯಕ್ರಮ ಹಾಕಿ ಕೊಂಡು ಅದರಂತೆ ಕೆಲಸ ಮಾಡಬೇಕೆಂದು ಹೇಳಿ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ತಂದಿರತಕ್ಕಂಥ ಡಿಮ್ಯಾಂಡ್‌ಗೆ ನನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್)—ಮಾನ್ಯ ಅಧ್ಯಕ್ಷರೇ, ಈದಿನ ರಾಜ್ಯದ ವಿದ್ಯಾಮಂತ್ರಿಗಳು ಸುಮಾರು ೯೩ ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಆ ಬೇಡಿಕೆಯನ್ನು ಅತ್ಯಂತ ವಿಷಾದದಿಂದ ವಿರೋಧಿಸಬೇಕಾಗಿದೆ. ಅದಕ್ಕೆ ಕಾರಣವೂ ಉಂಟು. ಏನೆಂದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಈ ವಿದ್ಯಾಭ್ಯಾಸದ ಪದ್ಧತಿಯ ಮೇಲೆ ಆಗಿರತಕ್ಕಂಥ ಪ್ರಯೋಗಗಳು ಬೇರೆ ಯಾವ ದೇಶದಲ್ಲಿಯೂ ಆಗಿಲ್ಲ ಎಂಬುದು ಗೊತ್ತಾಗುತ್ತದೆ. ಒಬ್ಬೊಬ್ಬ ಮಂತ್ರಿಗಳು ಅಧಿಕಾರಕ್ಕೆ ಬಂದಾಗಲೆಲ್ಲಾ ಒಂದೊಂದು ರೀತಿಯಾದಂಥ ಪಠ್ಯಕ್ರಮವನ್ನು ಜಾರಿಗೆ ತಂದು ಪ್ರಯೋಗ ಮಾಡಿ ನೋಡುತ್ತಿದ್ದಾರೆ. ೨ ವರ್ಷದ ಪಠ್ಯ ಕ್ರಮವನ್ನು ೩ ವರ್ಷಕ್ಕೆ ಬದಲಾವಣೆ ಮಾಡುವುದು ೩ ವರ್ಷದ ಪಠ್ಯಕ್ರಮವನ್ನು ೨ ವರ್ಷಕ್ಕೆ ಬದಲಾವಣೆ ಮಾಡುವುದು, ಇಂತಹ ನಿದರ್ಶನಗಳು ಬಹಳ ಇವೆ. ಈ ಇಲಾಖೆಯ ಚರಿತ್ರೆಯನ್ನು ತೆಗೆದು ನೋಡಿದರೆ ಇದು ಗೊತ್ತಾಗುತ್ತದೆ. ಈ ಪ್ರಯೋಗ ಇನ್ನೂ ಸತತವಾಗಿ ನಡೆಯುತ್ತಲೇ ಇದೆ. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದ ಮೇಲೂ ಸಹ ನಮ್ಮ ದೇಶಕ್ಕೆ ಅನುಗುಣವಾದಂಥ ಮತ್ತು ನಮ್ಮ ದೇಶದ ಸಮಸ್ಯೆಗಳನ್ನು ಬಗೆಹರಿಸುವಂತಹ ವಿದ್ಯಾಭ್ಯಾಸದ ಕ್ರಮವನ್ನು ಜಾರಿಗೆ ತರುವುದಕ್ಕೆ ಇವರ ಕೈಯಲ್ಲಿ ಇನ್ನೂ ಸಾಧ್ಯವಾಗಿಲ್ಲ. ಇದೇ ಕಾರಣದಿಂದ ನಾನು ಇದನ್ನು ವಿರೋಧ ಮಾಡಬೇಕಾಗಿದೆ. ನನ್ನ ಮಿತ್ರರೂ ಸಹ ಈ ಅಂಶವನ್ನು ಗಮನಿಸಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಅನೇಕ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಬಂದಿದೆ. ಆ ರೀತಿ ಸ್ವಾತಂತ್ರ್ಯ ಸಿಕ್ಕಿದ ದೇಶಗಳು ತಮ್ಮ ದೇಶಕ್ಕೆ ಎಂತಹ ವಿದ್ಯಾಭ್ಯಾಸ ಬೇಕು ಎನ್ನುವ ಬಗ್ಗೆ ಒಂದೆರಡು ಪ್ರಯೋಗಗಳನ್ನು ಮಾಡಿದಮೇಲೆ, ಇಂತಹ ವಿದ್ಯಾಭ್ಯಾಸ ಇರುವುದು ಒಳ್ಳೆಯದೆಂದು ತೀರ್ಮಾನ ಮಾಡಿ ಅದನ್ನು ಜಾರಿಗೆ ತಂದಿದ್ದಾರೆ. ಆದರೆ ನಮ್ಮ ದೇಶದಲ್ಲಿ ಇನ್ನೂ ಪ್ರಯೋಗಗಳು ನಡೆಯುತ್ತಲೇ ಇದೆ. ಉದಾಹರಣೆಗೆ ಹೇಳುವುದಾದರೆ, ಚೈನಾ ದೇಶದಲ್ಲಿ ನನಗೆ ಗೊತ್ತಿರುವ ಮಟ್ಟಿಗೆ ವಿಶ್ವವಿದ್ಯಾನಿಲಯಗಳನ್ನು ಮುಚ್ಚಿ, ಶಾಲೆಗಳನ್ನು ಮುಚ್ಚಿ ರಜಾ ಕೊಡ ಕೊಟ್ಟಿರುವುದು ನನ್ನ ಬುದ್ಧಿಯ ಮಿತಿಯೊಳಗೆ ಒಳಪಟ್ಟಂತೆ ತಿಳಿದುಬಂದಿರುತ್ತದೆ. ಅಲ್ಲಿ ನಡೆಯತಕ್ಕ ವಿದ್ಯಾಭ್ಯಾಸ ಕ್ರಮ ಏನು ? ಎಲ್ಲಾ ಜನ ಕೂಡ ಒಂದೇ ವೃತ್ತಿಯನ್ನು ಅವಲಂಬಿಸಿ ಬೆಂಡ್ ಆಫ್ ಮೈಂಡ್ ಇರತಕ್ಕದ್ದು ಸಾಧ್ಯವಿಲ್ಲ.

ಅವರವರ ವೃತ್ತಿಗೆ, ಅವನಲ್ಲಿರತಕ್ಕ ಚೈತನ್ಯಕ್ಕನುಗುಣವಾಗಿ ವಿದ್ಯಾಭ್ಯಾಸವನ್ನು ಅಲ್ಲಿ ಕೊಡುತ್ತಿದ್ದಾರೆ. ಅಷ್ಟೇ ಅಲ್ಲ, ವೃತ್ತಿ ಶಿಕ್ಷಣ ಕಸಬು ಮಾಡಲು ಅವನಲ್ಲಿರತಕ್ಕಂಥ ಗುಣ ಏನು ಇದೆ ಅದಕ್ಕೆ ತಕ್ಕಂಥ ವಿದ್ಯಾಭ್ಯಾಸವನ್ನು ಕೊಡುತ್ತಿದ್ದಾರೆ. ಪ್ರಾಕ್ಟಿಕಲ್ ವಿದ್ಯಾಭ್ಯಾಸ ಎಂದರೆ, ನಾಲ್ಕು ಗೋಡೆಗಳ ಮಧ್ಯೆ ಉಪಾಧ್ಯಾಯರೊಬ್ಬರು ಹೇಳಿಕೊಡತಕ್ಕ ಪಠ್ಯಕ್ರಮವಲ್ಲ. ಚೈನಾ ದೇಶದಲ್ಲಿ ವಿದ್ಯಾಭ್ಯಾಸ ಕ್ರಮದಿಂದ ಉತ್ಪನ್ನ ಕೂಡ ಆಗುತ್ತಾ ಇದೆ, ಅಷ್ಟೇ ಅಲ್ಲದೆ, ಅಲ್ಲಿ ವಿದ್ಯಾಭ್ಯಾಸವನ್ನು ಗುಣಮಟ್ಟ ಬೆಳೆಯುತ್ತಾ ಇದೆ. ಅಕ್ಯಾಡೆಮಿಕ್ ಆಗಿ ಅಲ್ಲಿ ವಿದ್ಯಾಭ್ಯಾಸವನ್ನು ನಡೆಸುತ್ತಿದ್ದಾರೆ ನಮ್ಮಲ್ಲಿ ಇಲ್ಲಿಯವರೆಗೆ ನಡೆದಿರ ತಕ್ಕದು ನಾನು ಮೊದಲೇ ತಿಳಿಸಿದ ಹಾಗೆ ಒಂದು ತರಹ ಪಠ್ಯಕ್ರಮ ಮತ್ತೊಂದು ತರಹ ಪಠ್ಯಕ್ರಮ ಎರಡು ವರ್ಷ ಮೂರು ವರ್ಷ, ಮೂರು ವರ್ಷ ಎರಡು ವರ್ಷ ಹೀಗೆ ಸರ್ಕಸ್ ರೀತಿಯಲ್ಲಿ ಕಾಲ ಕಳೆ ಯುತ್ತಾ ಇದ್ದೇವೆ. ಇದರಿಂದ ಏನಾಗಿದೆ ಎಂದರೆ, ನಾವು ರಸ್ತೆಗಳಲ್ಲಿ ಹೋಗುವಾಗ ಶಾಲಾ ಕಾಲೇಜು ಗಳಿಗೆ ಹೋಗುವವರನ್ನು ನೋಡುತ್ತಾ ಇರುತ್ತೇವೆ ; ಅವರಲ್ಲಿ ಹುಡುಗ–ಹುಡುಗಿಯರು ಯಾರು, ಯುವಕ ಯುವತಿಯರು ಯಾರು ಎಂಬುದನ್ನೇ ಪತ್ತೆ ಮಾಡುವುದಕ್ಕೆ ಸಾಧ್ಯವಿಲ್ಲ ಇದನ್ನೇನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಾ ಇಲ್ಲ. ತಾವೆಲ್ಲರೂ ಇದನ್ನು ನೋಡುತ್ತಲೆ ಇರುತ್ತೀರಿ, ಆದುದರಿಂದ, ನಾನು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ ಈ ರೀತಿಯ ಒಂದು ವಿದ್ಯಾಭ್ಯಾಸ ಕೊಡುವುದ ಕ್ಕೋಸ್ಕರ ಇಷ್ಟೊಂದು ಹಣವನ್ನು ಏತಕ್ಕೆ ಖರ್ಚು ಮಾಡುತ್ತಿದ್ದೀರಿ ಎಂದು ನಾವು ಹಿಂದಿನ ಹತ್ತಾರು ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. ನಾವು ಹಿಂದಿನ ಹತ್ತಾರು ವರ್ಷಗಳಿಂದ ಬಂದಿದ್ದೇವೆ. ವಿದ್ಯಾರ್ಥಿಗಳಲ್ಲಿ ಅಶಿಸ್ತು ಮತ್ತು ಬೇರೆಯವರ ಬಗ್ಗೆ ಅಗೌರವ ಹೆಚ್ಚಾಗುತ್ತಾ ಬಂದಿದೆ. ಇದಕ್ಕೆ ಮೂಲಭೂತ ಕಾರಣ ಏನೆಂದರೆ, ಅವರಿಗೆ ವಿದ್ಯಾಭ್ಯಾಸ ಕೊಡುವಾಗ ಸರಿಯಾದ ಕ್ರಮವನ್ನು ಅನುಸರಿಸದೇ ಇರುವುದು ಎಂದು ನನ್ನ ಭಾವನೆಗೆ ತಿಳಿದುಬಂದಿರುತ್ತದೆ ಇದೇ ರೀತಿ ಇದನ್ನು ಮುಂದು ವರಿಯುವುದಕ್ಕೆ ಬಿಟ್ಟರೆ, ನಾವು ಎಲ್ಲಿಗೆ ಹೋಗುತ್ತಿದ್ದೇವೆ. ನಮ್ಮ ದೇಶದ ಗತಿ ಏನಾಗುತ್ತದೆ ಎನ್ನುವುದು ಕಷ್ಟವಾಗುತ್ತದೆ. ಆದುದರಿಂದ ಇದನ್ನು ಆಲೋಚನೆ ಮಾಡುವುದು ಅತಿಮುಖ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ಕೊಡುವ ವಿಚಾರದಲ್ಲಿ ಎಷ್ಟು ಹಣ ಖರ್ಚು ಮಾಡಿದರೂ ಅದಕ್ಕೆ ನಾನು ಅಡ್ಡಿ ಮಾಡುವುದಿಲ್ಲ, ಬಹಳ ಸಂತೋಷಪಡುತ್ತೇನೆ. ನಾವು ಕೊಡುವ ವಿದ್ಯಾಭ್ಯಾಸ ನಮ್ಮ ದೇಶದ ಹಿತವನ್ನು ಕಾಪಾಡುವುದಾಗಿರಬೇಕು ನಮ್ಮ ದೇಶಕ್ಕೆ ಏಳಿಗೆಯನ್ನು ತರುವಂಥಾದ್ದಾಗಿರಬೇಕು. ದೇಶದಲ್ಲಿ ಇವತ್ತಿನ ದಿವಸ ಇರುವ ಅಸಮಾನತೆಯನ್ನು ಹೋಗಲಾಡಿಸುವಂಥಾದ್ದಾಗಿರಬೇಕೆಂದು ನಾನು ಹೇಳುತ್ತೇನೆ. ಆದರೆ. ಇವತ್ತಿನ ದಿವಸ ಈ ರೀತಿಯ ವಿದ್ಯಾಭ್ಯಾಸ ಕ್ರಮ ನಡೆಯುತ್ತಾ ಇಲ್ಲ ಉದಾಹರಣೆ ಗಾಗಿ ಹೇಳುವುದಾದರೆ, ಪಟ್ಟಣದಲ್ಲಿರತಕ್ಕ ಶಾಲಾ ಸೌಲಭ್ಯಗಳಿಗೂ ಮತ್ತು ಗ್ರಾಮಾಂತರ ಪ್ರದೇಶದಲ್ಲಿರ ತಕ್ಕ ಶಾಲಾ ಸೌಲಭ್ಯಗಳಿಗೂ ಹೋಲಿಸುವುದಾದರೆ, ಇದರಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಅನೇಕ ಮಾನ್ಯ ಮಿತ್ರರು ಈಗಾಗಲೇ ಮಾತನಾಡಿ, ಗ್ರಾಮಾಂತರ ಪ್ರದೇಶದ ಶಾಲಾ ಕಟ್ಟಡಗಳ ಸ್ಥಿತಿಗಳನ್ನು ಹೇಳಿದ್ದಾರೆ. ಒಂದೊಂದು ಕಡೆ, ಶಾಲೆಗಳಲ್ಲಿ ಒಂದು ಅಡಿ, ಎರಡು ಅಡಿ ಆಳವಿರುವ ಗುಂಡಿಗಳಿರುತ್ತವೆ, ನಮಗೆ ಸ್ವಾತಂತ್ರ್ಯ ಬಂದು 22 ವರ್ಷಗಳಾದರೂ ಕೂಡ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲಾ ಕಟ್ಟಡಗಳಲ್ಲಿ ಒಂದು ಅಡಿ ಎರಡು ಅಡಿ ಗುಂಡಿಗಳು ಇನ್ನತ್ತಿಗೂ ಇವೆ. ಅನೇಕ ಕಡೆಗಳಲ್ಲಿರುವ ಶಾಲಾ ಕಟ್ಟಡಗಳು, ಮಳೆ ಬಂದರೆ ಕುಸಿದು ಬೀಳುತ್ತವೆ. ಜೋರಾಗಿ ಗಾಳಿ ಬೀಸಿದರೆ, ಹೊಡೆದು ಕೊಂಡುಹೋಗ ತ್ತವೆ, ಈ ರೀತಿಯ ಕಟ್ಟಡಗಳಲ್ಲಿ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ ಮಾನ್ಯ ಬೈರಪ್ಪಾಜಿಯವರು ಮಾತನಾಡುತ್ತಾ ಹೇಳಿದರು ಈ ರೀತಿಯ ಶಾಲೆಗಳು ಕೆಲವು ಕಡೆ ಇದ್ದವು, ಈಗ ಎಲ್ಲವೂ ಸರಿ ಮಾಡಿದ್ದಾರೆ, ಎಲ್ಲೋ ಕೆಲವು ಉಳಿದುಕೊಂಡಿವೆ, ಅವುಗಳನ್ನು ಮುಗಿಸಿಬಿಟ್ಟರೆ ಎಲ್ಲವೂ ಚೆನ್ನಾಗಿರುತ್ತವೆ,ಎಂದು ನಾನು ಹೇಳುತ್ತೇನೆಬಹುಶಃ ಅವರ ತಾಲೂಕಿನಲ್ಲಿ ಆರೀತಿ ಮಾಡಿರಬಹುದು ಅಷ್ಟೆ ಆದರೆ ಸಮಗ್ರವಾದ, ನಮ್ಮ ರಾಜ್ಯದ ಚಿತ್ರವನ್ನು ನೋಡುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲಾ ಮಕ್ಕಳಿಗೆ ಬಟ್ಟೆ ಬರೆ ಇಲ್ಲವಾಗಿದೆ, ತಲೆಗೆ ಎಣ್ಣೆ ಹಚ್ಚಿ ಒಂದು ತಿಂಗಳೋ ಎರಡು ತಿಂಗಳೋ ಆದಂಥ ಕಂಡುಬರುತ್ತದೆ, ಇರುವ ಒಂದೆರಡು ಬಟ್ಟೆಗಳನ್ನು ಒಗೆದೇ ಇರುವುದಿಲ್ಲ ಅನೇಕರು ಬಟ್ಟೆ ಇಲ್ಲದೆ ಬರೀ ಮೈಯಲ್ಲಿ ಬರತಕ್ಕ ಘೋರ ಚಿತ್ರವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತಿನ ದಿವಸ ಕಾಣುತ್ತಾ ಇದ್ದೇವೆ. ಮಕ್ಕಳಿಗೆ ಅ–ಆ ಇ–ಈ ಅಂತ ಕಲಿಸಿಕೊಟ್ಟರೆ ಅದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಮಕ್ಕಳು ಶಾಲೆಗೆ ಹೋಗುತ್ತಿರುವುದನ್ನು ನೋಡಿದರೆ ಕಣ್ಣಿಗೆ ಸಂತೋಷವಾಗುತ್ತದೆ. ಆದರೆ, ಗ್ರಾಮಾಂತರಗಳಲ್ಲಿ ಶಾಲೆಗಳಿಗೆ ಹೋಗುತ್ತಿರುವ ಮಕ್ಕಳನ್ನು ನೋಡಿದರೆ ಕಣ್ಣಿನಲ್ಲಿ ನೀರುಬರುವುದಿಲ್ಲ, ರಕ್ತ ಬರುತ್ತದೆ. 22 ವರ್ಷಗಳಿಂದಲೂ ಇದೇ ರೀತಿ ಮುಂದುವರಿದುಕೊಂಡು ಬಂದಿದೆ. ದಯವಿಟ್ಟು ಇದನ್ನು ತಾವು ಬದಲಾವಣೆ ಮಾಡಬೇಕು, ನಗರಗಳಲ್ಲಿ ಇವತ್ತಿನ ದಿವಸ ಬೀದಿ ಬೀದಿಗೂ ದೊಡ್ಡ ಕಾಲೇಜುಗಳು ಉಂಟು ಪ್ರೌಢಶಾಲೆಗಳು ಉಂಟು, ಸರ್ಕಾರಿ ಶಾಲೆಗಳೂ ಉಂಟು, ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಒಂದೂವರೆ ಎರಡು ಮೈಲಿ ಇದ್ದರೆ,

ಅಲ್ಲಿ ಪಾಠಶಾಲೆಗಳು ಇರಬಾರದೆಂದು ಇದೆ. ಇದು ಯಾವ ಕಾರಣದಿಂದ ಮಾಡಲಾಯಿತು ಎಂಬುದು ನನಗೆ ಗೊತ್ತಾಗಲಿಲ್ಲ. ಮಾನ್ಯ ಮಂತ್ರಿಗಳು ಹೇಳಬೇಕು, ೫-೬ ವರ್ಷದ ಮಕ್ಕಳು ದಿನವೂ ಒಂದೂವರೆ ಮೈಲಿ ನಡೆಯುವುದಕ್ಕೆ ಆಗುತ್ತದೆಯೋ ಸ್ವಾಮಿ ? ಆದ್ದರಿಂದ, ಪ್ರತಿಯೊಂದು ಹಳ್ಳಿಗೂ ಶಾಲೆಗಳನ್ನು ಕೊಡಬೇಕಾದುದಲ್ಲದೆ, ಪ್ರತಿಯೊಂದು ಹಳ್ಳಿಗೂ ಯೋಗ್ಯವಾದಂಥ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ, ಇವತ್ತಿನ ದಿವಸ ಹಳ್ಳಿಗಳಲ್ಲಿರತಕ್ಕ ಶಾಲಾ ಕಟ್ಟಡಗಳ ಭೀಕರ ದೃಶ್ಯವನ್ನು ನೋಡಿದರೆ, ಕೊಳೆತು ನಾರತಕ್ಕ ಗುಡಿಸಲುಗಳ ರೀತಿಯಲ್ಲಿ ಇರುತ್ತವೆ. ಶಾಲಾ ಕಟ್ಟಡಗಳೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ, ನನಗೆ ಬಹಳ ದುಃಖವಾಗುತ್ತದೆ, ಸರಕಾರದವರು ಕೊಟ್ಟಿರತಕ್ಕ ಆಜ್ಞೆ ಪ್ರಕಾರ ಎರಡೂವರೆ ಸಾವಿರ ರೂಪಾಯಿಗಳಲ್ಲಿ ಒಂದು ಶಾಲಾ ಕಟ್ಟಡ ಕಟ್ಟಿಸಬೇಕೆಂದು ಇರುವುದು. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ, ಬೆಂಗಳೂರು ನಗರದಲ್ಲಿ ಈ ಒಂದು ಆಜ್ಞೆಯನ್ನು ಏಕೆ ಜಾರಿಗೆ ಕೊಟ್ಟಿಲ್ಲ ? ಬೆಂಗಳೂರು ನಗರದಲ್ಲಿ ದೊಡ್ಡ ದೊಡ್ಡ ಕಾಲೇಜುಗಳನ್ನು ದೊಡ್ಡ ದೊಡ್ಡ ಕ್ಯಾಂಪಸ್‌ಗಳನ್ನು ಕಟ್ಟಿ, ನಾನು ವಿರೋಧ ಮಾಡುವುದಿಲ್ಲ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವುದು ದೇಶಕ್ಕೆ ಬಹಳ ಒಳ್ಳೆಯದು ಆದರೆ, ಅದೇರೀತಿ ಸಮಾನ ಅವಕಾಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೊಟ್ಟಿಲ್ಲ. ಇವತ್ತಿನದಿವಸ ಬೆಲೆಗಳು ಗಗನ ಮುಟ್ಟಿರತಕ್ಕ ಪರಿಸ್ಥಿತಿಯಲ್ಲಿ ಎರಡೂವರೆ ಸಾವಿರ ರೂಪಾಯಿಗಳಲ್ಲಿ ಒಂದು ಶಾಲಾಕಟ್ಟಡವನ್ನು ಕಟ್ಟುವುದು ಹೇಗೆ ? ಈಗ ಪಂಚಾಯತಿಯವರು ಹಣ ಕೊಡಬೇಕಾದುದಿಲ್ಲ, ತಾಲೂಕು ಬೋರ್ಡ್‌ನವರು ಹಣ ಕೊಡಬೇಕಾದುದು ಇಲ್ಲ ಎಂದು ಹೇಳಿ ತಾವು ಈ ಆಜ್ಞೆಯನ್ನು ಯಾವ ಕೈಯಲ್ಲಿ ರುಜು ಮಾಡಿದಿರಿ ಎಂದು ಆಶ್ಚರ್ಯವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ—ಕಮ್ಯೂನಿಟಿ ಪಾರ್ಟಿಸಿಪೇಷನ್ ಇರಬೇಕು.

ಶ್ರೀ ಸಿ. ಬೈರೇಗೌಡ.—ಬೆಂಗಳೂರು ನಗರದಲ್ಲಿ ಮತ್ತು ದೊಡ್ಡ ದೊಡ್ಡ ನಗರಗಳಲ್ಲಿ ಈ ಆಜ್ಞೆಯನ್ನು ಜಾರಿಗೆ ತನ್ನಿ ಅಗನಾನು ಒಪ್ಪಿಕೊಳ್ಳುತ್ತೇನೆ, ಹಳ್ಳಿಗಾಡುಗಳಲ್ಲಿ ಸಾಮಾನ್ಯಜನ ವಾಸ ಮಾಡತಕ್ಕದ್ದು ತಮಗೆ ಗೊತ್ತಿಲ್ಲವೇ ? ಪೀಪಲ್ಸ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಇದೆ. ನಾನು ತಾಲ್ಲೂಕು ಬೋರ್ಡಿನ ಅಧ್ಯಕ್ಷನಾಗಿದ್ದೆ, ಅದರ ಅನುಭವದಿಂದ ಹೇಳುತ್ತಿದ್ದೇನೆ, ಯಾವ ಊರಿನಲ್ಲೂ ಪೀಪಲ್ಸ್ ಕಾಂಟ್ರಿಬ್ಯೂಷನ್ ಕೊಡುವುದಿಲ್ಲಒಂದೆರಡು ಕಡೆ ಕೊಟ್ಟಿರಬಹುದು. ಇನ್ನು ೯೮ ಕಡೆ ಕೊಡುವುದು ಸಾಧ್ಯವಿಲ್ಲ. ಯಾರೋ ಕಂಟ್ರಾಕ್ಟರ್ ವಹಿಸಿಕೊಂಡವರು ಮಾಡುತ್ತಿದ್ದಾರೆಯೋ ಹೊರತು ಜನತೆ ಅದಕ್ಕೆ ಹಣ ಕೊಡುತ್ತಾ ಇಲ್ಲ. ಕಾರಣವೇನೆಂದರೆ ವಾಸ್ತವ ಪರಿಸ್ಥಿತಿಗನುಗುಣವಾಗಿ ಅದು ಸಾಧ್ಯವಿಲ್ಲ. ತಾವು ಈ ಅನ್ಯಾಯವನ್ನು ತಕ್ಷಣವಾಪಸ್ಸು ತೆಗೆದು ಅನೇಕ ತಾಲೂಕು ಅಭಿವೃದ್ಧಿ ಮಂಡಲಿಯವರು, ಸರಕಾರದವರು ೨-೩ ಸಾವಿರಕೊಟ್ಟರೆ, ಮಿಕ್ಕ ಹಣವನ್ನು ಕೈಯಿಂದ, ಸ್ವಂತ ಹಣದಲ್ಲಿ ಶಾಲಾ ಕಟ್ಟಡವನ್ನು ಕಟ್ಟಿಸುತ್ತೇವೆ ಎಂದು ಹೇಳಿದರೂ ಕೂಡ, ಅವರಿಗೆ ಇಚ್ಛೆ ಇದ್ದರೂ ಕೂಡ ಈ ದಿನ ಕಟ್ಟಿಸುವುದಕ್ಕೆ ಸಾಧ್ಯವಿಲ್ಲ.

5-00 P. M.

ನಮ್ಮ ತಾಲೋಕು ಅಭಿವೃದ್ಧಿ ಮಂಡಲಿ ಉದಾಹರಣೆ ತೆಗೆದುಕೊಳ್ಳುವುದಾದರೆ ನಾವು ೧೦ ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ತಯಾರಿದ್ದೇವೆ. ನಿಮ್ಮ ಆಜ್ಞೆ ಒಂದು ನಯಾಪೈಸೆ ಖರ್ಚು ಮಾಡುವಂತೆ ಮಾಡಿಲ್ಲ, ಈ ಬಡ್ಜೆಟ್ ಯೋಜನೆ ಮಾಡಿದಿರಿ, ೫೦ ಸಾವಿರ ರೂಪಾಯಿ ಶಾಲಾ ಕಟ್ಟಡ ಕಟ್ಟುವುದಕ್ಕೆ ಇಟ್ಟಿದ್ದೇವೆ, ಆದರೆ ಸರ್ಕಾರದಿಂದ ಎರಡು ಎರಡೂವರೆ ಸಾವಿರ ರೂಪಾಯಿ ಬರುತ್ತದೆ, ಉಳಿದ ಹಣ ತಾಲೋಕು ಅಭಿವೃದ್ಧಿ ಮಂಡಲಿ ಕೊಟ್ಟು ಪ್ರತಿಯೊಂದು ಹಳ್ಳಿಯಲ್ಲೂ ಪಾಠಶಾಲೆಗಳು ಬೇಕು ಎಂಬ ದೃಷ್ಟಿಯಿಂದ ಕಾರ್ಯಕ್ರಮ ಇಟ್ಟುಕೊಂಡಿದ್ದೆವು. ನಿಮ್ಮ ಆಜ್ಞೆ ಮಾಡಿದ ಮೇಲೆ ನೀರು ಎರಚಿದಂತೆ ತಂದಿದ್ದೀರಿ. ಈ ಆಜ್ಞೆಯನ್ನು ವಾಪಸ್ಸು ತೆಗೆದುಕೊಂಡು ಹೆಚ್ಚಿನ ರೀತಿಯಲ್ಲಿ, ಅಭಿವೃದ್ಧಿ ಮಂಡಲಿ ಮತ್ತು ಪಂಚಾಯಿತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಉಪಾಧ್ಯಾಯರ ಗತಿ ಏನು ? ಇಲ್ಲಿ ನೋಡಿದರೆ ಪೋಲೀಸಿನವರಿಗೆ ಕ್ವಾರ್ಟರ್ಸ್ ಕೊಟ್ಟಿದ್ದಾರೆ. ಪೋಲೀಸಿನವರಿಗಿಂತ ಉಪಾಧ್ಯಾಯರು ಕಡಿಮೆ ಏನು ? ಅನೇಕ ಕಡೆ ಪೋಲೀಸಿನವರ ಮೇಲೆ ಅಪಾದನೆಗಳನ್ನು ಕೇಳುತ್ತೇವೆ. ಅವರು ಯಾವ ತರಹ ಜನ ಗೊತ್ತಿದೆ, ಹೆಚ್ಚಾಗಿ ಹೇಳಬೇಕಾಗಿಲ್ಲ. ಉಪಾಧ್ಯಾಯರು ತಮಗೆ ಏನು ಮಾಡಿದ್ದಾರೆ ? ಅವರು ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರಬೇಕು ಎಂದು ಹೇಳಿದ್ದೀರಿ. ಯಾವ ಸರ್ಕಾರಿ ಅಧಿಕಾರಿ ಎಲ್ಲಿ ಕೆಲಸ ಮಾಡುತ್ತಾನೆ ಅಲ್ಲಿ ಇರಬೇಕು ಎಂದು ಹೇಳುತ್ತೀರಿ ತಾವು ಅವರಿಗೆ ಯಾವ ಅವಕಾಶ ಮಾಡಿಕೊಟ್ಟಿದ್ದೀರಿ. ಅವರು ಕೆಲಸ ಮಾಡುವುದಿಲ್ಲ ಎನ್ನುವ ದೂರು ಉಪಾಧ್ಯಾಯರ ಮೇಲೆ ಬಂದಿದೆ, ಅದನ್ನು ಭಾಗಶಃ ಒಪ್ಪುತ್ತೇನೆ ತಪ್ಪು ಮಾಡಿದಾಗ ಉಗ್ರ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ. ಜೊತೆಯಲ್ಲಿ ಸೌಲಭ್ಯ ಕೂಡ ಕೊಡಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ. ಆದುದರಿಂದ ನಾನು ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತೇನೆ ಇನ್ನು ಲೇಡಿ ಉಪಾಧ್ಯಾಯರು ಅವರ ಪಾಡು ನಾಯಿ ಪಾಡು ಆಗಿದೆ ಅವರಿಗೆ ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ, ಅವರಿಗೆ ಕ್ವಾರ್ಟರ್ಸ್ ಇಲ್ಲದೆ ಇರುವುದರಿಂದ ತೊಂದರೆಯಾಗಿದೆ.

ಈ ತಾಲೋಕು ಅಭಿವೃದ್ಧಿ ಮಂಡಲಿ ಹೈಸ್ಕೂಲುಗಳನ್ನು ಕೂಡ ತಾವು ವಹಿಸಿಕೊಂಡಿದ್ದೀರಿ ಅದು ಬಹಳ ಸಂತೋಷದ ವಿಷಯ. ಇವೊತ್ತಿನ ದಿವಸ ಯೋಗ್ಯವಾದಂಥ ಕಟ್ಟಡಗಳು ಇಲ್ಲ. ಒಂದು ವರ್ಗದಲ್ಲಿ ನೇಮಕವಾಗಿರತಕ್ಕ ಉಪಾಧ್ಯಾಯರಿಗೆ ಟೆಂಪರರಿಯಾಗಿರಿ. ಹೀಗಿರಿ ಎಂದರೆ ಅಂತಹ ಉಪಾಧ್ಯಾಯರಿಗೆ ಯಾವ ಗೌರವ ಇರುತ್ತದೆ ? ಅವರನ್ನು ನೇಮಕ ಮಾಡಿಕೊಂಡದ್ದು ತಪ್ಪಲ್ಲ, ಅಭಿವೃದ್ಧಿ ಮಂಡಲಿ ಕೆಲಸ ಇಲ್ಲದೆ ಮಾಡಿಕೊಂಡಿರತಕ್ಕದ್ದು. ಅವರಿಗೆ ಇವೊತ್ತಿನ ದಿವಸ ನೀವು ನೇಮಕ ಮಾಡಿಕೊಂಡಿರ ತಕ್ಕದ್ದು, ಅವರಿಗೆ ರೆಗ್ಯುಲೇಷನ್ ಮಾಡಬೇಕು, ಎಂದು ನಾನು ಸೂಚಿಸುತ್ತೇನೆ. ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಕೂಡ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇನ್‌ಸ್ಟಿಟ್ಯೂಟ್ ಫಾರ್ ಸೈನ್‌ಟಿಫಿಕ್ ಸೋಷಿಯಲಿಸಮ್ ಎಂದು ಅವರು ಓಪನ್ ಮಾಡಿದ್ದಾರೆ. ಕಳೆದ ವರ್ಷ ೮–೧೦ ಲಕ್ಷ ರೂಪಾಯಿ ಅದಕ್ಕೆ ಬೇಕಾಗುತ್ತದೆ, ಹಣ ಕೊಡಬೇಕು ಎಂದು ವಿಶ್ವವಿದ್ಯಾನಿಲಯದವರು ಸರ್ಕಾರವನು ಪ್ರಾರ್ಥನೆ ಮಾಡಿದ್ದಾರೆ. ಅದಕ್ಕೆ ಕೇಂದ್ರ ಮಟ್ಟದ ಆರ್ಡರ್ ಇರುವುದರಿಂದ ಅವರು ಕೊಡಬೇಕು ಎಂದು ಸರ್ಕಾರದಿಂದ ತಿಳಿಸಿದ್ದಾರೆ, ಅದೇ ರೀತಿ ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಎಂದು ಇದೆ. ಅದಕ್ಕೆ ೩೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ನೇರವಾಗಿ ನಮ್ಮ ಆಡಳಿತಕ್ಕೆ ಒಳಪಟ್ಟಿರತಕ್ಕದ್ದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅವರಿಗೆ ಕೇಂದ್ರ ಸರ್ಕಾರದವರು ಕೊಡುತ್ತಾರೆ. ನಾವು ಜಮೀನು ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ.—ಇವೊತ್ತು ಯಾವರೀತಿ ತಾರತಮ್ಯ ನಡೆಯುತ್ತಿದೆ ಎಂದು ಗೊತ್ತಾಗುತ್ತಿದೆ. ಅವರಿಗೆ ಕೊಡುವುದಕ್ಕೆ ನಮ್ಮಲ್ಲಿ ಹಣ ಇಲ್ಲ, ಆದರೂ ಇಲ್ಲಿ ಇರತಕ್ಕ ಯಾರು ಹೆಚ್ಚಿನ ಪ್ರಭಾವ ಬೀರು ತ್ತಾರೆ, ಯಾರು ಹೆಚ್ಚಿನ ಒತ್ತಾಯ ತರುತ್ತಾರೆ ನಿಮ್ಮ ಸೂತ್ರವನ್ನು ಹಿಡಿದಿರತಕ್ಕವರು ನಿಮ್ಮ ಮೇಲೆ ಮಣೆಯಂದೇ ಇರುವುದು ವ್ಯವಹಾರಕ್ಕೆ ಕಾರಣವಾಗಿದೆ ಎಂದು ಹೇಳುತ್ತಾ ಇಲ್ಲ, ನೀವು ಆ ರೀತಿ ಮಟ್ಟಕ್ಕೆ ಹೋಗುತ್ತೀರಿ ಎಂದು ಹೇಳುವುದಕ್ಕೆ ತಯಾರಿಲ್ಲ. ಈ ಒಂದು ತಾರತಮ್ಯ ಏಕೆ ? ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಕನಾಮಿಕ್ ಅಂಡ್ ಸೋಷಿಯಲ್ ಚೇಂಜ್ ಅಂತ ಏನಿದೆ, ಈ ಇನ್‌ಸ್ಟಿ ಟ್ಯೂಟ್ ಮಾಡತಕ್ಕ ಕೆಲಸ ಅನೇಕ ವಿಶ್ವವಿದ್ಯಾನಿಲಯಗಳು, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ. ರಾಜ್ಯದಲ್ಲಿ ಇರತಕ್ಕ ಈ ಎಲ್ಲಾ ವಿಶ್ವವಿದ್ಯಾನಿಲಯ ಗಳು ಮಾಡುತ್ತಾ ಇವೆ. ಅಷ್ಟು ಮಾಡುತ್ತಾ ಇದ್ದರೂ ಕೂಡ ಡೂಪ್ಲಿಕೇಷನ್ ಏತಕ್ಕೆ ? ಈಗ ಮೈಸೂರಿನಲ್ಲಿ ಯಾವ ಇನ್‌ಸ್ಟಿಟ್ಯೂಟ್ ತೆರೆದಿದ್ದಾರೆ ಅದಕ್ಕೆ ಸಂಪೂರ್ಣವಾಗಿ ಗ್ರಾಂಟ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ತಮ್ಮನ್ನು ಒತ್ತಾಯ ಮಾಡುತ್ತೇನೆ. ಈಗ ಪಿ.ಡಬ್ಲ್ಯು.ಡಿ. ಇಲಾಖೆ ಇದೆ, ರಾಜ್ಯ ಮಟ್ಟದಲ್ಲಿ, ಸೆಕ್ರೆಟರಿಯೇಟ್‌ನಲ್ಲಿ ಪಿ.ಡಬ್ಲ್ಯು.ಡಿ.ಗೆ ಸಂಬಂಧಪಟ್ಟಹಾಗೆ ಅಡಿಷನಲ್ ಸೆಕ್ರೆಟರಿ ಎನ್ನುವವರು ಪಿ.ಡಬ್ಲ್ಯು.ಡಿ. ಇಲಾಖೆಗೆ ಬಂದಿರತಕ್ಕವರು. ಎಜ್ಯುಕೇಷನ್ ಇಲಾಖೆಯಲ್ಲಿ ಅಡಿಷನಲ್ ಸೆಕ್ರೆಟರಿ ಸ್ಥಾನ ಇದೆ ಎಂದು ತಿಳಿದುಬಂದಿದೆ. ಅಲ್ಲಿ ಐ.ಎ.ಎಸ್ ಅಧಿಕಾರಿಗಳನ್ನು ತಂದಿಟ್ಟಿದ್ದೀರಿ. ಬೇರೆ ಇಲಾಖೆ ಗಳಲ್ಲಿ ಆಯಾಯ ಸ್ಪೆಷಲಿಸ್ಟ್ ಯಾರು ಇದ್ದಾರೆ ಅವರನ್ನು ತಂದು ಇಡುತ್ತಿದ್ದೀರಿ. ಮತ್ತೆ ಐ.ಎ.ಎಸ್. ಆಫೀಸರನ್ನು ತಂದು ಇಡುತ್ತಿದ್ದೀರಿ. ಇದರ ಅವಶ್ಯಕತೆ ಏನು ಎಂದು ಅರ್ಥ ಮಾಡುತ್ತಾ ಇಲ್ಲ ವಿದ್ಯಾ ಭ್ಯಾಸ ಕ್ರಮ ಬೇರೆ ಅಲ್ಲಿ ನಡೆಯತಕ್ಕ ಚಟುವಟಿಕೆಗಳು ಬೇರೆ. ಐ.ಎ.ಎಸ್. ಆಫೀಸರ್ ಇನ್‌ಕಾಂಪಿ ಟೆಂಟ್ ಎಂದು ಹೇಳತಕ್ಕದ್ದು ಅಲ್ಲ. ಇಲ್ಲಿ ವಿಷಯ ತಿಳಿದುಕೊಂಡಿರಬೇಕು. ಅಲ್ಲಿ ನಡೆಯುತ್ತಾ ಇರತಕ್ಕ ವಿಷಯ ಬೇರೆ ಆಗಿರುವುದರಿಂದ ಆ ಇಲಾಖೆ ಅಧಿಕಾರಿಯನ್ನು ಈ ಜಾಗಕ್ಕೆ ತಂದಿರತಕ್ಕದು ಅವಶ್ಯಕ ಇದೆ. ಈ ಕೆಲಸ ತಕ್ಷಣ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಹೇಳಿ ಇಷ್ಟು ವೇಳೆಯನ್ನು ಕೊಟ್ಟಿರುವುದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಹಮೀದ್ ಷಾ (ಶಿವಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ನಮ್ಮ ವಿದ್ಯಾ ಸಚಿವರು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಅದರಲ್ಲೂ ವಿದ್ಯಾ ಇಲಾಖೆ ಎಂದರೆ ಸ್ವಲ್ಪ ಸಂತೋಷದಿಂದ ಅನುಮೋದಿಸಬೇಕಾಗಿದೆ, ಅದಕ್ಕೆ ಹಲವಾರು ಕಾರಣಗಳಿವೆ, ವಿದ್ಯಾರ್ಥಿಗಳು ಎಂದರೆ ನನ್ನ ಕಣ್ಣಿಗೆ ಒಂದು ತರಹ ಸನ್ಯಾಸಿ ತರಹ ಕಾಣುತ್ತಾರೆ. ಸನ್ಯಾಸತ್ವ ಮಾಡುವವರು, ತಪಸ್ಸು ಮಾಡುವವರು ಯಾವುದೋ ಒಂದು ದೇವರ ಗುರಿಯನ್ನು ಇಟ್ಟುಕೊಂಡು ತಪಸ್ಸು ಮಾಡುತ್ತಾರೆ. ವಿದ್ಯಾರ್ಥಿಗಳು ತಾಪೇ ಸರಸ್ವತಿ ಮುಂದೆ ಕುಳಿತು ಕೊಂಡು ತಪಸ್ಸು ಮಾಡುತ್ತಾರೆ. ಆ ತಪಸ್ಸು ಮಾಡುವ ವಿದ್ಯಾರ್ಥಿಗಳಿಗೆ ಒಳ್ಳೆಯ ರೀತಿಯಲ್ಲಿ ದಾರಿ ತೋರಿಸಬೇಕಾಗಿದೆ. ಈಗ ನಾವು ಯಾವ ದಾರಿ ತೋರಿಸುತ್ತೇವೆ ಎಂದರೆ, ಕಣ್ಣುಬಿಟ್ಟು ನಾವೇ ನೋಡಿ ಕೊಳ್ಳಬೇಕಾಗಿದೆ. ಈಗ ಬೆಂಗಳೂರಿನಲ್ಲಿ ಮೂರು ತರಹ ಸ್ಕೂಲುಗಳಿವೆ. ಒಂದು ಗವರ್ನಮೆಂಟ್ ಸ್ಕೂಲುಗಳು, ಎರಡು ಕಾರ್ಪೊರೇಷನ್ ಸ್ಕೂಲುಗಳು, ಮೂರು ಪ್ರೈವೇಟ್ ಸ್ಕೂಲುಗಳು. ಗವರ್ನ

ವೇಟ್ ಸ್ಕೂಲುಗಳ ಬಗ್ಗೆ ಹೇಳಬೇಕು ಎಂದರೆ ಅಲ್ಲಿ ಎಷ್ಟು ಜನ ವರ್ಷಕ್ಕೆ ಪಾಸ್ ಆಗುತ್ತಾರೆ ಎಂದರೆ ಅದು ಹೇಳುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಕಾರ್ಪೊರೇಷನ್ ಸ್ಕೂಲುಗಳು ಅವು ಎಲ್ಲಿವೆಯೋ ಏತಕ್ಕೆ ಇಟ್ಟುಕೊಂಡಿದ್ದಾರೋ, ಅದರ ಮೇಲೆ ದುಡ್ಡು ಏತಕ್ಕೆ ಖರ್ಚು ಮಾಡುತ್ತಾ ಇದ್ದಾರೋ ಹೇಳುವುದಕ್ಕೆ ಸಾಧ್ಯವಿಲ್ಲ. ಮೂರನೆಯದು ಪ್ರೈವೇಟ್ ಸ್ಕೂಲುಗಳು ಹೆಚ್ಚು ಮಾಡುತ್ತಾ ಇದ್ದಾರೆ, ಸೋಷಿಯಲಿಸಮ್ ಮಾಡುತ್ತಾ ಇಲ್ಲ ಬಡವರ ಮಕ್ಕಳಿಗೆ ಒಂದು ತರಹ ಸ್ಕೂಲುಗಳು ದೊಡ್ಡ ಶ್ರೀಮಂತರ ಮಕ್ಕಳಿಗೆ ಒಂದು ತರಹ ಸ್ಕೂಲುಗಳು ಈ ರೀತಿ ಇಟ್ಟುಕೊಂಡಿದ್ದಾರೆ ಈ ರೀತಿ ಇದ್ದರೆ ಎಲ್ಲಿಂದ ಸೋಷಿಯಲಿಸಮ್ ತರುತ್ತಾರೆ ? ಸೋಷಿಯಲಿಸಂ ತರುವ ಜನ ನಾವು ಮೊದಲು ಸರಿಯಾಗಿ ನಡೆದುಕೊಳ್ಳಬೇಕು. ನಮ್ಮ ಮಾನ್ಯ ಸಚಿವರು ಅವರ ಮಕ್ಕಳನ್ನು ಕಾನ್ವೆಂಟಿಗೆ ಕಳಿಸುತ್ತಿದ್ದಾರೆ, ಅವರು ಯಾವ ದಾರಿಯಲ್ಲಿ ಹೋಗುತ್ತಿದ್ದಾರೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು ಅವರು ನಡೆಸತಕ್ಕ ಸ್ಕೂಲ್‌ಗಳ ಮೇಲೆ ಅವರಿಗೇ ನಂಬಿಕೆ ಇಲ್ಲ. ವಿದ್ಯಾ ಇಲಾಖೆಯಲ್ಲಿ ಇಂತಕ್ಕ ಡೈರೆಕ್ಟರ್ ಆಫೀಸರ್ಸ್ ಅವರ ಮಕ್ಕಳನ್ನು ಕಾನ್ವೆಂಟಿಗೆ ಕಳಿಸುತ್ತಾರೆಯೇ ವಿನಃ ಗವರ್ನಮೆಂಟ್ ಸ್ಕೂಲ್‌ಗಳಿಗೆ ಕಳಿಸುತ್ತಾ ಇಲ್ಲ. ಮಂತ್ರಿಗಳಲ್ಲೂ ೧೦೦ಕ್ಕೆ ೧೦೦ ಈ ತರಹದ ಸೋಷಿಯಲಿಸಂ ಇದೆ ಇದರಿಂದ ಸೋಷಿಯಲಿಸಂ ತರಲಿಕ್ಕೆ ಆಗುವುದಿಲ್ಲ. ಇವತ್ತು ನಾನು ಸೋಷಿಯಲಿಸಂ ಮತ್ತು ಸೆಕ್ಯುಲರಿಸಂ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಒಂದು ಕಡೆ ಸೆಕ್ಯುಲರಿಸಂ ಎಂದರೆ ಯಾವ ಜಾತಿಯೂ ಇಲ್ಲ, ಆ ಜಾತಿ ಇಲ್ಲ, ಈ ಜಾತಿ ಇಲ್ಲ ಎಂದು ಹೇಳುತ್ತೇವೆ. ಆದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಸ್ಪೆಷಲ್ಲಾಗಿ ಎಷ್ಟು ಸೆಕ್ಯುಲರಿಸಂ ಇದೆ ಎಂದು ತೋರಿಸುವುದಕ್ಕೆ ನಾನು ಕೆಲವು ಪುಸ್ತಕಗಳನ್ನು ತಂದಿದ್ದೇನೆ. ಒಂದು ಪುಸ್ತಕ ನನ್ನ ಕೈಯಲ್ಲಿ ಇದೆ, ಇದರ ಬೆಲೆ ೩೦ ರೂಪಾಯಿ. ಇದರ ಮೇಲೆ ಗುರುಗಳ ಫೋಟೋ ಇದೆ, ಮಾಜಿ ವಿದ್ಯಾ ಇಲಾಖೆಯ ಸಚಿವರ ಫೋಟೋ ಇದೆ ಇದನ್ನು ಸ್ಕೂಲ್ ಗ್ರಂಥಾಲಯಗಳು ಇದೆಯಲ್ಲ ಅಲ್ಲಿ ಕೊಡುತ್ತಾರೆ. ಇದನ್ನು ಮಾನ್ಯ ಅಧ್ಯಕ್ಷರಿಗೆ ಕಳಿಸಿಕೊಡುತ್ತೇನೆ, ಅವರು ವಿದ್ಯಾ ಸಚಿವರಿಗೆ ಕಳಿಸುತ್ತಾರೆ. ಹೈಸ್ಕೂಲ್ ಗ್ರಂಥಾಲಯಗಳಿಗೆ ಗವರ್ನಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಹೋಗಿರುವ ಪುಸ್ತಕಗಳಿವು. ಇದರ ಬೆಲೆ ೩೦ ರೂಪಾಯಿ. ೫೦ ಜನ ಇದರಲ್ಲಿ ಆರ್ಟಿಕಲ್ ಬರೆದಿದ್ದಾರೆ ಅವರು ಯಾರು ಎಂದರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿರುವವರು. ವಿದ್ಯಾ ಇಲಾಖೆಯಲ್ಲಿರುವವರಿಂದ ಆರ್ಟಿಕಲ್ ಬರೆಸಿ, ೩೦ ರೂಪಾಯಿಗೆ ಖಂಡಿತವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ ಮತ್ತೆ ಸೆಕ್ಯುಲರಿಸಂ ಬಗ್ಗೆ ನಾನಾ ತರಹದ ಮಾತುಗಳನ್ನು ಹೇಳುತ್ತಾ ಇರುತ್ತೇವೆ ಇಲ್ಲಿ ನೋಡಿ, ಇನ್ನೂ ಕೆಲವು ಪುಸ್ತಕಗಳನ್ನು ತಂದಿದ್ದೇನೆ ಇದರಲ್ಲಿ ಒಂದು ಸ್ಪೆಷಲ್ಲಾದ ಪುಸ್ತಕ ಇದೆ. 'ವಿಕ್ರಮಾದಿತ್ಯ' ಎಂದು ಇದರ ಹೆಸರು, ಇದರ ಮಧ್ಯದಲ್ಲಿ ಫೋಟೋಗಳು ಇವೆ ಇದನ್ನು ಅಧ್ಯಕ್ಷರಿಗೆ ಕೊಡುತ್ತೇನೆ ಆಮೇಲೆ ವಿದ್ಯಾ ಇಲಾಖೆಯ ಸಚಿವರಿಗೆ ಕೊಡುತ್ತಾರೆ. ಅವರು ನೋಡಿ ಸಂತೋಷಪಡಲಿ. ಮುಂದಿನ ಭವಿಷ್ಯ ರೂಪಿಸಿಕೊಳ್ಳುವಂಥ ಮಕ್ಕಳ ಕೈಯಲ್ಲಿ ಇಂತಹ ಪುಸ್ತಕಗಳನ್ನು ಕೊಡುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆ ಮಂತ್ರಿಗಳು ಕೆಲಸ ಕಳೆದುಕೊಂಡರೂ ಅವರ ಫೋಟೋ ಇರಬೇಡವೇ ?

ಶ್ರೀ ಎಸ್ ಹಮೀದ್ ಷಾ.—ಈ ಪುಸ್ತಕಗಳನ್ನು ಮಿನಿಸ್ಟರ್ ನೋಡಿಬಿಟ್ಟು ವಾಪಸ್ ಮಾಡಬೇಕಾಗಿದೆ. ಏಕೆಂದರೆ, ನಾನು ಯಾವುದೋ ಸ್ಕೂಲಿಗೆ ಹೋಗಿ ದಮ್ಮಯ್ಯ ಹಾಕಿ ತಂದಿದ್ದೇನೆ, ಅವರು ಗ್ರಂಥಾಲಯದಿಂದ ಎತ್ತಿಕೊಟ್ಟಿದ್ದಾರೆ, ಅವರಿಗೆ ಕೊಡಬೇಕಾಗಿದೆ ಮಾನ್ಯ ಮಂತ್ರಿಗಳು ಇದರಲ್ಲಿ ಸೆಕ್ಯುಲರಿಸಂ ಇದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕು, ಇದು ಒಂದು ಸಣ್ಣ ಪುಸ್ತಕ ಇದೆ. ಇದರ ಹಿಂದುಗಡೆ ೪೦-೫೦ ಜನರ ಫೋಟೋಗಳಿವೆ, ನ್ಯಾಷನಲ್ ಲೀಡರ್ಸ್ ಫೋಟೋಗಳನ್ನು ಹಾಕಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರೇ ಆಗಲಿ, ಯಾರೇ ಆಗಲಿ ಅವರ ಮೇಲೆ ಅಪಾದನೆ ಮಾಡುತ್ತೇನೆ ಎಂದು ಇಲ್ಲ, ಅವರ ಮೇಲೆ ಅಪಾರವಾದ ಗೌರವ ಇದೆ, ಅವರು ಯಾವತ್ತಾದರೂ ಸರಿ ಉರ್ದು ಬಗ್ಗೆ ಆಗಲಿ, ಮುಸಲ್ಮಾನರ ಬಗ್ಗೆ ಆಗಲಿ ಒಂದು ಮಾತು ಕೂಡ ಆಡಲಿಲ್ಲವಲ್ಲಾ ಎಂದು ನನಗೆ ದುಃಖ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಂದಿನ ಜನ್ಮದಲ್ಲಿ ಮುಸಲ್ಮಾನರಾಗಿ ಹುಟ್ಟಬೇಕು ಎಂದು ವಿರೋಧಪಕ್ಷದ ನಾಯಕರು ತಪಸ್ಸು ಮಾಡುತ್ತಿದ್ದಾರೆ.

ಶ್ರೀ ಎಸ್. ಹಮೀದ್ ಷಾ.—ಈ ಪುಸ್ತಕದಲ್ಲಿ ೫೦ ಫೋಟೋಗಳು ಪ್ರಿಂಟ್ ಆಗಿವೆ. ಇದರಲ್ಲಿ ಒಬ್ಬ ಮುಸ್ಲಿಂ ನ್ಯಾಷನಲ್ ಲೀಡರ್ ಫೋಟೋ ಕೂಡ ಇಲ್ಲ ಮೌಲಾನಾ ಆಜಾದ್, ಯೂಸೂಫ್, ರಫಿ ಅಹ್ಮದ್, ಕಿದ್ವಾಯ್, ಡಾಕ್ಟರ್ ಜಾಕಿರ್ ಹುಸೇನ್, ಅಜ್ಮಲ್ ಖಾನ್, ಮಹ್ಮದ್ ಅಲಿ ಷೌಕತ್ ಅಲಿ ಮುಂತಾದವರು ಫೋಟೋ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರಾಷ್ಟ್ರೋತ್ಥಾನ ಪರಿಷತ್ತಿನವರು ಅದನ್ನು ಪಬ್ಲಿಷ್ ಮಾಡಿದ್ದಾರೆ, ಆದುದರಿಂದ ಹಾಕಿಲ್ಲ.

ಶ್ರೀ ಎಸ್. ಹಮೀದ್ ಷಾ.—ಕನ್ನಡದ ಬಗ್ಗೆ ನನಗೆ ತುಂಬ ಸಂತೋಷ. ಈ ರಾಜ್ಯದ ಭಾಷೆ ಅದೇ ಇರಬೇಕು. ಅದು ಬಿಟ್ಟು ಹೋದರೆ ಏನೂ ಆಗುವುದಿಲ್ಲ ಎನ್ನುವ ಪೂರ್ಣ ನಂಬಿಕೆ ನನಗೆ ಇದೆ. ಕನ್ನಡವನ್ನು ಕಲಿತುಕೊಳ್ಳುವವರು ಮುಸಲ್ಮಾನರು ಇರಬೇಕೋ, ಇಲ್ಲ ಬರೀ ಹಿಂದೂಗಳೇ ಕಲಿತುಕೊಳ ಬೇಕೆ. ಉರ್ದು ಸ್ಕೂಲಿಗೆ ಎಷ್ಟು ಜನ ಕನ್ನಡ ಟೀಚರ್ಸ್‌ನ್ನು ಅಪಾಯಿಂಟ್ ಮಾಡಿದ್ದೀರಿ? ಹೈಸ್ಕೂಲು ಗಳಲ್ಲಿ ಸರಿಯಾದ ಕನ್ನಡ ಟೀಚರ್ಸ್ ಇಲ್ಲ. ಓದುವುದಕ್ಕೆ ಎಷ್ಟು ಕನ್ನಡ ಪುಸ್ತಕಗಳನ್ನು ಸಪ್ಲೈ ಮಾಡಿದ್ದೀರಿ ಎಂದರೆ, ಅದು ಇಲ್ಲ. ಮತ್ತೆ ಹೇಳುತ್ತಾರೆ, ಮುಸಲ್ಮಾನರು ಕನ್ನಡ ಕಲಿತುಕೊಳ್ಳುವುದಿಲ್ಲ ಎಂದು. ಹೀಗಾದರೆ ಮುಸಲ್ಮಾನರು ಕನ್ನಡ ಹೇಗೆ ಕಲಿತುಕೊಳ್ಳುತ್ತಾರೆ? ಆದುದರಿಂದ ನಾನು ಅಧ್ಯಕ್ಷರಿಗೆ ಕೇಳಿಕೊಳ್ಳುತ್ತಾ ಇದ್ದೇನೆ. ದಯವಿಟ್ಟು ಇದು ಸ್ವಲ್ಪ ಯೋಚನೆ ಮಾಡಬೇಕಾಗಿರುವ ಸಮಾಚಾರ ಇದೆ, ಸರ್ವೇಸಾಧಾರಣವಾದ ಸಮಾಚಾರ ಅಲ್ಲ. ಸ್ಕೂಲುಗಳಲ್ಲಿ ಟೆಕ್ಸ್ಟ್ ಬುಕ್‌ಗಳನ್ನು ಕೊಡುತ್ತಿದ್ದೀರಲ್ಲ ಗ್ರಂಥಾಲಯಗಳಲ್ಲಿ ಇರುವ ಪುಸ್ತಕಗಳನ್ನು ಹುಡುಗರು ಓದಿಬಿಟ್ಟರೆ ಮುಂದಿನ ಜನಾಂಗ ಅವರ ಭವಿಷ್ಯ ಹಾಳಾಗಿ ಹೋದರೆ ದೇಶದ ಸಂಸ್ಕೃತಿ ಬೆಳೆಯುತ್ತದೆಯೋ? ನಮ್ಮ ರಾಜ್ಯದಲ್ಲಿ ಜಾಣರು ಇದ್ದಾರೆ, ಬೇಕಾದಷ್ಟು ಜನ ಗ್ರಂಥಗಳನ್ನು ಬರೆಯತಕ್ಕವರೂ ಇದ್ದಾರೆ. ಇದೇ ಸಂಸ್ಕೃತಿ ಇದ್ದರೆ ದೇಶದ ಮುಂದಿನ ಜನಾಂಗ ಮುಂದೆ ಬರುತ್ತಾರೆಯೋ ಅಥವಾ ಹಿಂದಕ್ಕೆ ಹೋಗುತ್ತಾರೆಯೋ ಹೇಳಲಿ. ತಮಗೆ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ತಾವು ದಯವಿಟ್ಟು ತಮ್ಮ ಕಾಲದಲ್ಲಿ ಇಂಥ ಕೆಲಸಗಳಲ್ಲಿ ಕೈಹಾಕಬೇಡಿ, ಎಂದು, ಇದು ಪಾಪವಾದ ಕೆಲಸ. ದೇಶ ಹಿಂದಕ್ಕೆ ಹೋಗುವಂಥ ಕೆಲಸ ಸರ್ವೇಸಾಧಾರಣವಾಗಿ ನಾವು ಕನ್ನಡದ ಬಗ್ಗೆ ಮಾತನಾಡುತ್ತೇನೆ. ಆದರೆ ಉರ್ದು ಸ್ಕೂಲಿನಲ್ಲಿ ಕನ್ನಡ ಟೀಚರ್ಸ್ ಇಲ್ಲ. ಕನ್ನಡ ಪುಸ್ತಕಗಳು ಇಲ್ಲ. ಸರ್ಕಾರದವರು ಸರ್ಕ್ಯುಲರ್ ಕಳಿಸುತ್ತಾರೆ. ಸುಮ್ಮನೆ ಮಾತಿಗೆ ಕನ್ನಡದಲ್ಲಿ ಕಳಿಸು ತ್ತಾರೆ. ಆದರೆ ಕಳೆದ ೨೫ ವರ್ಷಗಳಿಂದ ಕನ್ನಡದಲ್ಲೇ ವಿದ್ಯಾಭ್ಯಾಸ ಮಾಡಿದ್ದರೆ ಆ ಹೈಸ್ಕೂಲ್‌ಗಳಲ್ಲಿ ಕೂಡ ಕನ್ನಡ ಟೀಚರ್ಸ್ ಇರುತ್ತಾ ಇದ್ದರು, ಆದರೆ ನಮಗೆ ದೇವಭಾಷೆ ಆಕಾಶದಿಂದ ಬಂದಿರುವ ಗುಲಾಮಗಿರಿ ಭಾಷೆ ನಮ್ಮ ದೇಶಕ್ಕೆ ಬಂದಿದೆ. ವಿದ್ಯಾಭ್ಯಾಸದಲ್ಲೂ ಕೂಡ ಗುಲಾಮಗಿರಿ ಭಾಷೆ ಹೋಗಿಲ್ಲ. ಯಾವ ಭಾಷೆಯಲ್ಲಿ ಮಹಾತ್ಮ ಗಾಂಧೀಯವರು ಮಾತನಾಡಿದರು, ಯಾವ ಭಾಷೆಯಲ್ಲಿ ಜವಹರಲಾಲ್ ನೆಹರು ಅವರು ಮಾತನಾಡಿದರು, ಯಾವ ಭಾಷೆಯಲ್ಲಿ ಮೌಲಾನಾ ಅಜಾದ್ ಮಾತನಾಡಿ ದರು, ಆ ಭಾಷೆಯು ಬಾಯಲ್ಲಿ ಮಣ್ಣು ಬೀಳುತ್ತಿದೆ. ನಮ್ಮ ಕರ್ನಾಟಕದಲ್ಲಿ ೪೦ ಲಕ್ಷ ಜನ ಉರ್ದು ಮಾತನಾಡುವವರಿದ್ದಾರೆ. ಅವರಿಗೆ ಒಂದು ಉರ್ದು ಕಾಲೇಜು ಇಲ್ಲ, ಅವರಿಗೆ ಒಂದು ಉರ್ದು ಗವರ್ನಮೆಂಟ್ ಹೈಸ್ಕೂಲು ಇಲ್ಲ. ಈ ರೀತಿ ತಾರತಮ್ಯ ಏಕೆ, ಪಿತೂರಿ ಏಕೆ?

SRI D. B. KALMANKAR.—In Aland there is a Government High School where the medium of instruction is Urdu.

ಶ್ರೀ ಎಸ್. ಹಮೀದ್ ಷಾ.—ಒಂದು ಇದೆ ಸ್ವಾಮಿ, ಆದರೆ ಅದು ಈ ಸರ್ಕಾರ ಬಂದಮೇಲೆ ಪ್ರಾರಂಭ ಮಾಡಿದ್ದು ಅಲ್ಲ, ೩೦ ವರ್ಷಗಳಿಂದಲೂ ಅದು ಇದೆ. ಅದನ್ನು ಈಗ ಮಾಡಿದ್ದು ಅಲ್ಲ. ಈ ೪೦ ಲಕ್ಷ ಉರ್ದು ಮಾತನಾಡತಕ್ಕಂಥ ಜನರು ಇರುವುದರಿಂದ, ಬೇರೆ ಒಂದು ಡೈರೆಕ್ಟರರವರನ್ನು ನೇಮಕ ಮಾಡಿ, ಮುಸ್ಲಿಂ ಹುಡುಗರೂ ಮುಂದೆ ಬರಲಿ. ಈಗ ತಾವು ಒಂದು ತರಹದ ಸ್ಕಾಲರ್ ಶಿಪನ್ನು ಕೊಡುತ್ತೀರಲ್ಲಾ ಹಾಗೆ ಹಿಂದು ಹುಡುಗರು ಉರ್ದು ಓದುತ್ತಿದ್ದರೆ ಅವರಿಗೆ ಒಂದು ಸ್ಪೆಷಲ್ ಸ್ಕಾಲರ್‌ಶಿಪನ್ನು ಕೊಡಿ. ಯಾವ ಮುಸಲ್ಮಾನ ಹುಡುಗ ಕನ್ನಡದಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡುತ್ತಾನೆ ಅವನಿಗೆ ಒಂದು ತರಹದ ಸ್ಕಾಲರ್‌ಶಿಪನ್ನು ಕೊಡಿ. ಆವಾಗಲೇ ಭಾಷೆ ಅಭಿವೃದ್ಧಿ ಹೊಂದುತ್ತದೆ. ಇಲ್ಲದಿದ್ದರೆ ಅದು ಹಾಗೆಯೇ ಹಾಳಾಗಿ ಹೋಗುತ್ತದೆ. ಮತ್ತೊಂದು ವಿಷಯ ಸ್ವಾಮಿ ಕಳೆದ ೨೫ ವರ್ಷಗಳಿಂದ ಒಂದು ಪಿತೂರಿ ನಡೆದಿದೆ ಆದರೆ ಅದು ನಿಮ್ಮ ಕಾಲದಲ್ಲೂ ಆಗಬಾರದು. ಅದು ಆಗದ ಹಾಗೆ ಕಾಪಾಡತಕ್ಕಂಥದ್ದು ತಮ್ಮ ಕರ್ತವ್ಯವೆಂದು ತಿಳಿದುಕೊಳ್ಳಿ. ಇನ್ನೊಂದು ಸ್ವಾಮಿ ಸಿಂಪಲ್ ಆಗಿರುವ ಪತ್ಯ ಪುಸ್ತಕಗಳನ್ನು ಕಳುಹಿಸಿ. ಏತಕ್ಕೆಂದರೆ ಈವಾಗ ಸಣ್ಣ ಮಕ್ಕಳಿಗೆ ಯಾವ ತರಹದ ಪುಸ್ತಕ ಗಳನ್ನು ಕಳುಹಿಸಿಕೊಡುತ್ತಿದ್ದೀರೋ ಅದೇ ತರಹದ್ದು ಕಳುಹಿಸಿ. ಹೋದ ಸಚಿವರು ಇದ್ದಾಗ ಒಂದು ಪುಸ್ತಕಕ್ಕೆ ೩೦ ರೂಪಾಯಿ ಇತ್ತು, ಅದನ್ನು ಕಂಪಲ್‌ಸರಿ ಮಾಡಿದ್ದರು, ಆ ಕನ್ನಡ ಪುಸ್ತಕಕ್ಕೆ ದುಡ್ಡು ಕೊಟ್ಟಿರತಕ್ಕಂಥದ್ದು ಯಾವುದು ಗೊತ್ತೇ, ರೀಡಿಂಗ್ ಫೀ ಎಂದು ಮಕ್ಕಳಿಂದ ತೆಗೆದುಕೊಳ್ಳುತ್ತಾರಲ್ಲ ಆದರಿಂದ ಕೊಟ್ಟಿದ್ದಾರೆ, ಇದು ನಾಚಿಕೆ ಗೇಡು. ಪುಸ್ತಕಗಳು ನಾನ್ ಸೆಕ್ಯೂಲರ್ ಆಗಿದೆ. ಆದರೆ ಪುಸ್ತಕಗಳು ಸೆಕ್ಯೂಲರಿಜಂ ಬಗೆ ಇರಬೇಕು. ಇನ್ನು ಟೆಕ್ನಿಕಲ್ ಎಜುಕೇಷನ್ ಬಗ್ಗೆ ತಮಗೆ ಒಂದು

ಮಾತನ್ನು ತಿಳಿಸಬೇಕೆಂದು ಇದ್ದೇನೆ. ಈಗಾಗಲೇ ಟೆಕ್ನಿಕಲ್ ಗ್ರಾಜ್ಯುಯೇಟ್ಸ್ ಎಷ್ಟೋ ಜನ ಕೆಲಸ ವಿಲ್ಲದ ಹಾಗೆ ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಆದರೂ ಸಹ ಅವರಿಗೆ ಏನು ಮಾಡಿದ್ದೀರಿ, ಈ ಟೆಕ್ನಿಕಲ್ ಎಜುಕೇಷನ್ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ, ಮುಸ್ಲಿಂ ಹುಡುಗರು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕೇಳಿದರೆ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಕೊಡುತ್ತಾರೆ, ಮೆಕ್ಯಾನಿಕಲ್ ಇಂಜಿನಿಯ ರಿಂಗ್ ಕೇಳಿದರೆ ಸಿವಿಲ್ ಇಂಜಿನಿಯರಿಂಗ್ ಕೊಡುತ್ತಾರೆ. ಇದಕ್ಕೆ ಕಾರಣವೇನು ? ಅವರೂ ಸಹ ಫಸ್ಟ್‌ಕ್ಲಾಸ್ ಮಾರ್ಕ್ಸ್‌ನಲ್ಲಿ ಬರುವುದಿಲ್ಲ, ಮೆರಿಟ್‌ನಲ್ಲಿ ಬರುವುದಿಲ್ಲ, ಅವರೆಲ್ಲಾ ಮೆರಿಟ್ಸ್ ಸ್ಟೂಡೆಂಟ್ಸ್ ಅಲ್ಲ. ಆದುದರಿಂದ ಯೋಜನೆ ಮಾಡಿ ಅವರಿಗೆ ಬೇಡವಾದ್ದದನ್ನು ನೋಡಿ ಕೊಡುತ್ತಾರೆ. ಅವರು ಆಗಲೀ ಯಾವುದಾದರೂ ನೋಡಿ ಕೊಡುತ್ತೇನೆಂದು ಹೇಳಿದರೆ, ಅವರ ಮಾತಿನ ಭರವಸೆಯಿಂದ ಯಾರಾ ದರೂ ಎಂ. ಎಲ್. ಎ.—ಎಂ. ಎಲ್. ಸಿಯಿಂದ ರೆಕಮೆಂಡೇಷನ್ ಮಾಡಿಸೋಣವೆಂದು ಅವರ ಮನೆಗೆ ತಿರುಗಿ ತಿರುಗಿ ಸತ್ತು ಸುಣ್ಣಾಗಿ ಆ ಮೇಲೆ ತಿರುಗಿ ಯಾವುದೋ ಒಂದು ಫೈನ್ ವರ್ನಿಂಗ ಅವನು ಕೇಳದೇ ಇರತಕ್ಕಂಥ ಸಬ್ಜೆಕ್ಟನ್ನು ಕೊಡುತ್ತಾರೆ. ಆ ಸಬ್ಜೆಕ್ಟ್ ಬೇಡವಾದವರು ಓದುವುದನ್ನೇ ಬಿಟ್ಟುಬಿಡಬೇಕಾ ಗುತ್ತದೆ. ಆದುದರಿಂದ ನೀವು ಸ್ವಲ್ಪ ಮೈನಾರಿಟೀಸ್ ಬಗ್ಗೆ ಯೋಜನೆ ಮಾಡಬೇಕಾಗಿದೆ, ನಿಮ್ಮ ಕಾಲ ದಲ್ಲಾದರೂ ಈ ಮೈನಾರಿಟೀಸ್ ಹಾಳಾಗಿ ಹೋಗುತ್ತಿರುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಮುಂದೆ ಬರತಕ್ಕಂಥ ಜನ ಹೇಗೆ ಬರುತ್ತಾರೆ ? ಆದುದರಿಂದ ತಾವು ಅವರಿಗೊಂದು ಕಾಲೇಜ್ ಕೊಡಬೇಕಾಗಿದೆ, ಅವರಿಗೆ ಎಜುಕೇಷನ್ ಕೊಡಬೇಕಾಗಿದೆ, ಅವರಿಗೆ ತಾವು ಎಲ್ಲಾ ಸೌಭಾಗ್ಯಗಳನ್ನೂ ಕೊಡಬೇಕಾಗಿದೆ ಇಲ್ಲದೇ ಹೋದರೆ ಅವರು ಏನು ಮಾಡಬೇಕು ? ಹಿಂದೆ ಬ್ರಿಟೀಷರ ಕಾಲದಲ್ಲಿ ಮುಸ್ಲಿಂ ಸನ್ನು ಭಯ ಪಡಿಸಿದರು ಕಾಂಗ್ರೆಸ್ ರಾಜ್ಯ ಬಂದರೆ ಹಿಂದೂ ರಾಜ್ಯವಾಗುತ್ತದೆ. ಹಿಂದೂ ರಾಜ್ಯ ವಾದರೆ ಮುಸ್ಲಿಂ ಧರ್ಮಕ್ಕೆ ಅಭಾವ, ಮುಸ್ಲಿಂ ಮತಕ್ಕೇ ಅಭಾವ, ಅವರ ಜಾತಿಗೇ ಅಭಾವ ಆಗುತ್ತ ದೆಂದು ಭಯ ಪಡಿಸಿದರು. ಆ ರೀತಿ ಭಯ ಪಡಿಸಿದ್ದರಿಂದ ಅವರು ಹಾಳಾಗಿ ಹೋದರು. ಆದುದರಿಂದ ಅವರ ಪರವಾಗಿ ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ ತಮ್ಮ ಕಾಲದಲ್ಲಿಯಾದರೂ ಅವರಿಗೆ ಹೆಚ್ಚಿನ ಉತ್ತೇಜನ ಕೊಡಿ ಅವರೂ ಮುಂದೆ ಬರಲಿ. ಇಲ್ಲದಿದ್ದರೆ ಈ ದೇಶದ ಜನತೆಯೊಂದಿಗೆ ಅವರು ಮುಂದಕ್ಕೆ ಬರುವುದಕ್ಕೆ ಆಗುವುದಿಲ್ಲ ಮೊನ್ನೆ ಮೈಸೂರಿನಲ್ಲಿ ಗಲಾಟೆಯಾದಾಗ ಇಬ್ಬರು ಸತ್ತು ಹೋದರು ಆ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡುವಾಗ ಮಾನ್ಯ ಬಿ. ಪುಟ್ಟಸ್ವಾಮಯ್ಯನವರು ಈ ತರಹದ ಜನ ಸತ್ತು ಹೋದರೂ ಹೋಗಲಿ ಬಿಡಿ ಎಂದು ಹೇಳಿ ಬಿಟ್ಟರು. ಆಗ ನನಗೆ ಅವರ ಮಾತನ್ನು ಕೇಳಿ ತುಂಬ ದುಃಖವಾಯಿತು. ನಮ್ಮ ಶ್ರೀ ಪುಟ್ಟಸ್ವಾಮಯ್ಯನವರು ನನಗೆ ಹತ್ತಿರ ಸ್ನೇಹಿತರು, ಆದುದರಿಂದ ನಮ್ಮವರೇ ಹೀಗೆ ಹೇಳುತ್ತಿದ್ದಾರಲ್ಲ ಹಾಗೆ ಹೇಳಬಾರದಾಗಿತ್ತು ಎಂದು ಅನ್ನಿಸಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಶ್ರೀ ಹಮೀದ್ ಷಾ ರವರೇ ತಾವು ಈಗ ೪೦ ಲಕ್ಷ ಜನರಿದ್ದಾರೆಂದು ಹೇಳಿದಿರಿ, ಅವರು ಮೈನಾರಿಟೀಸ್ ಜನ ಎಂದು ಹೇಳುವುದಕ್ಕೆ ಧೃಢವಾದ ಆಧಾರವೇನು ?

ಶ್ರೀ ಎಸ್. ಹಮೀದ್ ಷಾ.—೪೦ ಲಕ್ಷ ಜನಸಂಖ್ಯೆ ಇದೆ ಎನ್ನತಕ್ಕಂಥದ್ದಕ್ಕೆ ನನ್ನ ಹತ್ತಿರ ಆಧಾರ ವಿಲ್ಲ. ಆದರೆ ಉರ್ದು ಭಾಷೆ ಮಾತನಾಡುವವರ ಬಗ್ಗೆ ನಾನು ಹೇಳುತ್ತಾ ಇರುವುದು. ನಮ್ಮ ಕಡೆ ಹಿಂದೂಗಳೂ ಸಹ ಉರ್ದುವಿನಲ್ಲಿ ಮಾತನಾಡುತ್ತಾ ಇರುವುದರಿಂದ ಬರೀ ಮುಸ್ಲಿಂಸ್ ಬಗ್ಗೆ ನಾನು ಹೇಳುತ್ತಾ ಇಲ್ಲ ಬುದ್ಧಿ. ಈ ಉರ್ದು ಭಾಷೆ ಬಗ್ಗೆ ನಾನು ಹೇಳುತ್ತಿರುವುದು ಗುಲ್ಬರ್ಗ, ಬಿಜಾಪುರ, ರಾಯಚೂರು, ಬೀದರ್ ಈ ಭಾಗಗಳಲ್ಲಿ ಉರ್ದು ಮಾತನಾಡತಕ್ಕಂಥ ಹಿಂದೂಗಳನ್ನೂ ಸೇರಿಕೊಂಡು ಹೇಳುತ್ತಿದ್ದೇನೆ.

ಆದುದರಿಂದ ಮಾನ್ಯ ಅಧ್ಯಕ್ಷರೇ ನಾನು ಈ ಸ್ಕಾಲರ್‌ಶಿಪ್ ಬಗ್ಗೆ ಹೇಳುತ್ತಿದ್ದೆ. ಬೆಳಿಗ್ಗೆ ಆದ ತಕ್ಷಣ ಶೆಡ್ಯೂಲ್ ಕ್ಯಾಸ್ಟ್‌ನವರು ಶೆಡ್ಯೂಲ್ ಟ್ರೈಬ್ಸ್‌ನವರು ಒಂದು ಸ್ಪೆಷಲ್ ಸ್ಕಾಲರ್ ಶಿಪ್ ಫಾರಂನ್ನು ಸೈನಿಗೋಸ್ಕರ ಹಿಡಿದುಕೊಂಡು ಬರುತ್ತಾರೆ. ಸೈನ್ ಮಾಡಿಸಿಕೊಳ್ಳುತ್ತಾರೆ, ಸೀಲ್ ಹಾಕಿಸಿಕೊಂಡು ಹೋಗುತ್ತಾರೆ. ಆದರೆ ಇವತ್ತು ತಾವು ಮುಸ್ಲಿಂ ಹುಡುಗರಿಗೆ ಯಾವುದೇ ವಿಧವಾದಂಥ ಸ್ಕಾಲರ್ ಶಿಪ್ ಫಾರಂನ್ನು ಹಂಚಿದ್ದೀರಾ ? ಇಲ್ಲಿಯವರೆಗೆ ಅವರಿಗೆ ಯಾವುದೇ ಸ್ಕಾಲರ್ ಶಿಪ್ ಫಾರಂ ಕೊಟ್ಟಿರುವುದು ನನ್ನ ಗಮನಕ್ಕೇ ಬರಲಿಲ್ಲ. ಆದುದರಿಂದ ತಮ್ಮ ರಿಪ್ಲೈನಲ್ಲಿ ಎಷ್ಟು ಮುಸ್ಲಿಂ ಹುಡುಗರಿಗೆ ಇಲ್ಲಿಯ ವರೆಗೆ ಸ್ಕಾಲರ್ ಶಿಪನ್ನು ಕೊಟ್ಟಿದ್ದೀರಿ ಎನ್ನುವುದಕ್ಕೆ ಉತ್ತರ ಕೊಡಬೇಕು. ಇನ್ನೊಂದು ಮಾತು ಸ್ವಾಮಿ ಹೋದ ವರ್ಷ ಉರ್ದು ಟೆಕ್ಸ್ಟ್‌ಬುಕ್ ಒಂದು ಪ್ರಿಂಟ್ ಆಗಿ ಬಿಕ್ರಿಗೆ ಬಂದಿತ್ತು. ಅದರ ಒಂದು ಕ್ಯಾಲಿಗ್ರಫಿ ನೋಡಿದರೆ ತುಂಬಾ ಚೆನ್ನಾಗಿತ್ತು ತುಂಬಾ ಸಂತೋಷವಾಯಿತು. ಆದರೆ ತುಂಬಾ ನಷ್ಟವಾಯಿತೆಂದು ಹೇಳಿ ಬೇರೆ ಪ್ರಿಂಟ್ ಮಾಡಿಸಿದ್ದೀರಿ. ಆದರೆ ಮುಂದಿನ ಸಾರಿಯಿಂದ ತಾವು ಆ ರೀತಿ ಮಾಡಬೇಡಿ ಒಳ್ಳೆಯ ಬರವಣಿಗೆಗಾರರಿಂದ ಬರೆಸಿ ಪ್ರಿಂಟ್‌ಗೆ ಕೊಡಿ. ಇನ್ನು ಈ ಟೀಚರ್ಸ್ ಬಗ್ಗೆ ನಮ್ಮ ಮಾನ್ಯ ದೇವೇಗೌಡರವರೋ ಅಥವಾ ಮಾನ್ಯ ಬೈರೇಗೌಡರವರೋ ಹೇಳುತ್ತಿದ್ದರು ಈ ಟೀಚರ್ಸ್‌ನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ ಅವರಿಗೊಂದು ಶಾಪವಿದೆ, ಟೀಚರ್ಸ್‌ಗೆ ಮಕ್ಕಳು ಆಗುವಷ್ಟು

ಮತ್ತೆ ಬೇರೆಯವರಿಗೆ ಆಗುವುದಿಲ್ಲ. ಈ ಟೀಚರ್ಸ್ ಮತ್ತು ಪೋಲೀಸ್‌ನವರಿಬ್ಬರಿಗೂ, ಒಬ್ಬೊಬ್ಬರಿಗೆ ೧೦–೧೨ ರವರೆಗೆ ಮಕ್ಕಳು ಆಗುತ್ತದೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ

ಒಬ್ಬ ಸದಸ್ಯರು —ಅದನ್ನು ಯಾವ ರೀತಿ ಲೆಕ್ಕಕ್ಕೆ ತೆಗೆದುಕೊಂಡಿರಿ ?

ಶ್ರೀ ಎಸ್. ಹಮೀದ್ ಷಾ.— ನನಗೆ ಗೊತ್ತಿದೆ. ಅವರು ಒಳ್ಳೆ ಬಟ್ಟೆ ಹಾಕುವುದಕ್ಕೆ ಆಗುವುದಿಲ್ಲ, ಹೊಟ್ಟೆ ಹಸಿದುಕೊಂಡೇ ಸ್ಕೂಲ್‌ಗಳಿಗೆ ಬರಬೇಕು ಉರ್ದುವಿನಲ್ಲಿ ಒಂದು ಗಾದೆ ಇದೆ. ಅದರ ಪ್ರಕಾರ ಹೊಟ್ಟೆ ಹಸಿದಿದ್ದಾಗ ಪಾಠ ಮಾಡುವುದಕ್ಕೆ ಆಗುವುದಿಲ್ಲ ಭಜನೆ ಮಾಡಬೇಕಾಗುತ್ತದೆ.

5–30 P.M.

ಸ್ವಾಮಿ ಈ ಟೀಚರ್ಸ್ ಬಗ್ಗೆ ಹೇಳಬೇಕಾದರೆ ಫಾಲ್ಸ್ ಪ್ರೆಸ್ಟೀಜನ್ನು ಮೈನಟೇನ್ ಮಾಡಿಕೊಂಡು ಹೋಗಬೇಕೆಂದು ಮುಸಲ್ಮಾನರು ಪಡುತ್ತಿರುವ ಕಷ್ಟವನ್ನು ನೋಡಲಿಕ್ಕಾಗುವುದಿಲ್ಲ. ಸ್ವಾಮಿ, ನಿಮ್ಮ ಡಿಪಾರ್ಟ್‌ಮೆಂಟ್‌ನವರು ಇನ್ನೊಂದು ಕೆಲಸವನ್ನು ಮಾಡುತ್ತಿದ್ದಾರೆ ಅಂದರೆ ಗೌರ್ನ್‌ಮೆಂಟ್‌ನವರು ಒಂದು ಸರ್ಕ್ಯುಲರ್‌ನ್ನು ಹೊರಡಿಸಿದ್ದಾರೆ. ಏನೆಂದರೆ ಒಬ್ಬ ಹೆಂಗಸು ಕೆಲಸದಲ್ಲಿರುವ ಕಡೆಯಲ್ಲಿಯೇ ಅವರ ಗಂಡಂದಿರೂ ಕೂಡ ಅಲ್ಲಿಯೇ ಅಂದರೆ ಅದೇ ಊರಿನಲ್ಲಿಯೇ ಇರಬೇಕು ಎಂದು. ಆದರೆ ಈಗ ಅದು ಹಾಗಾಗುತ್ತಿಲ್ಲ. ಹೆಂಡತಿ ಬೇತಮಂಗಲದಲ್ಲಿದ್ದಾಗ ಆಕೆಯ ಗಂಡನನ್ನು ನಾಗಮಂಗಲಕ್ಕೆ ಹಾಕುತ್ತೀರಿ. ಹೀಗೆ ಮಾಡುವುದರಿಂದ ಏನು ಲಾಭ ಬರುತ್ತದೆ ಇದನ್ನು ನೋಡಿದರೆ ನನಗನಿಸುತ್ತದೆ, ಬಹುಶಃ ಫ್ಯಾಮಿಲಿ ಪ್ಲಾನಿಂಗ್‌ಗೋಸ್ಕರ ಹೀಗೆ ಮಾಡುತ್ತಿದ್ದಾರೋ ಏನೋ ಎಂದು. ನಾನು ಹೇಳುವುದೇನೆಂದರೆ ಟೀಚರ್ಸ್ ಇರುವುದಕ್ಕೋಸ್ಕರ ಅವರಿಗೆ ಮನೆಗಳನ್ನು ಕಟ್ಟಿಸಿಕೊಡಿ, ಇಲ್ಲದೇ ಹೋದರೆ ಅವರ ಕಷ್ಟಗಳನ್ನು ನೋಡುವುದಕ್ಕಾಗುವುದಿಲ್ಲ. ತಾವು ಅವರನ್ನು ವರ್ಗ ಮಾಡಿದರೆ ಅವರು ಏನು ಮಾಡುತ್ತಾರೆಂದರೆ ನನ್ನಂಥವರನ್ನೋ ಅಥವಾ ಮಾನ್ಯ ಪುಟ್ಟಸ್ವಾಮಯ್ಯನವರಂಥವರನ್ನೋ ಬಂದು ಸ್ವಾಮಿ, ನಿಮ್ಮ ಊರನ್ನು ನಾವು ಬಿಟ್ಟು ಹೋಗುವುದಿಲ್ಲ. ನಮ್ಮನ್ನು ಇಲ್ಲಿಂದ ವರ್ಗ ಮಾಡಬೇಡಿ ಎಂದು ಹಿಡಿದುಕೊಳ್ಳುತ್ತಾರೆ. ಅವರಿಗೆ ಮನೆ ಸೌಕರ್ಯ ಇದ್ದರೆ ಅವರು ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಾರೆ, ಮತ್ತು ವರ್ಗ ಮಾಡಿದ ಕಡೆಗೆ ಹೋಗುತ್ತಾರೆ. ನನಗೆ ಗೊತ್ತಿರುವಂತೆ ಬೇರೆ ದೇಶಗಳಲ್ಲಿ ಟೀಚರ್ಸ್‌ಗೆ ಬಹಳ ಒಳ್ಳೆಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಸ್ವಾಮಿ, ನಾನು ಕಳೆದ ಸಾರಿ ಕೂಡ ಇದೇ ಸದನದಲ್ಲಿ ಇದೇ ಸ್ಥಳದಲ್ಲಿ ನಿಂತುಕೊಂಡು ಹೇಳಿದ್ದೇನೆ, ಏನೆಂದರೆ ಮುನಿರೆಡ್ಡಿ ಪಾಳ್ಯದಲ್ಲಿ, ಹಾಗೂ ವಸಂತನಗರದಲ್ಲಿ ಕೆಲವು ಸ್ಕೂಲುಗಳಿವೆ, ಅವು ಇವತ್ತೋ ನಾಳೆಯೋ ಬಿದ್ದು ಹೋಗುವ ಸ್ಥಿತಿಯಲ್ಲಿವೆ ಎಂದು ತಮಿಳುನಾಡಿನ ಮಧುರೆಯಲ್ಲಿ ಒಮ್ಮೆ ಒಂದು ಒಂದು ಸ್ಕೂಲ್ ಬಿದ್ದುಹೋಗಿ ಎಷ್ಟೋ ಮಕ್ಕಳು ಸತ್ತು ಹೋದರು. ಆದರೆ ಅಂಥ ಒಂದು ಪಾಪಕ್ಕೆ ತಾವು ಹೋಗಬೇಡಿ. ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ನಮಗೆ ಮಾರ್ಗದರ್ಶಕರಾಗಿದ್ದರು. ನಾವೂ ಕೂಡ ಅವರ ಮಾರ್ಗವನ್ನೇ ಅನುಸರಿಸಿ, ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳಬೇಕಾಗಿದೆ. ಸ್ವಾಮಿ, ಇವತ್ತಿನ ದಿವಸ ಮೈನಾರಿಟಿ ಭಾಷೆಯನ್ನು ಮಾತನಾಡತಕ್ಕವರ ಕೆಲವು ಸ್ಕೂಲುಗಳಿವೆ, ಅವು ಯಾವುವು ಅಂದರೆ ಉರ್ದು, ತೆಲುಗು, ತಮಿಳು, ಮರಾಠಿ ನಾವು ಇವತ್ತು ಅವರನ್ನು ಕಾಪಾಡಬೇಕಾಗಿದೆ ಇಲ್ಲದೇ ಹೋದರೆ ನಮಗೆ ಒಳ್ಳೆಯದಾಗುವುದಿಲ್ಲ. ಒಂದು ಹೂವಿನ ತೋಟ ಅಂದರೆ ಅದರಲ್ಲಿ ನಾನಾ ತರಹೆಯ ಹೂವುಗಳು ಇರಬೇಕು. ಒಂದೇ ಜಾತಿಯ ಹೂವಿನ ಗಿಡಗಳಿದ್ದರೆ ಅದನ್ನು ಹೂವಿನ ತೋಟವೆಂದು ಯಾರೂ ಹೇಳುವುದಿಲ್ಲ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕದಲ್ಲಿಯೂ ಕೂಡ ನಾನಾ ಭಾಷೆಗಳನ್ನಾಡುವ ಜನರಿದ್ದಾರೆ ಉದಾಹರಣೆಗೆ ಹೇಳುವುದಾದರೆ ಕೆ. ಜಿ. ಎಫ್.ಗೆ ಹೋದರೆ ಅಲ್ಲಿ ತಮಿಳು, ಬೆಳಗಾಂಗೆ ಹೋದರೆ ಮರಾಠಿ, ಕೋಲಾರಕ್ಕೆ ಹೋದರೆ ತೆಲುಗು ಮಾತನಾಡುವವರು ಸಿಕ್ಕುತ್ತಾರೆ. ಬೆಂಗಳೂರು ತೆಗೆದುಕೊಂಡರೆ ಇಲ್ಲಿಂದ ಪ್ರಾರಂಭ ಮಾಡಿದರೆ ಮಳವಳ್ಳಿಯವರೆಗೂ ಮುಸಲ್ಮಾನರು ಸಿಕ್ಕುತ್ತಾರೆ. ನಾನು ಆಗಲೇ ಹೇಳಿದ ಹಾಗೆ ಉರ್ದು ಕಲಿಯುವ ಹಿಂದೂ ಹುಡುಗರಿಗೂ ಕೂಡ ಸ್ಕಾಲರ್‌ಷಿಪ್ ಕೊಡಲಾಗುತ್ತದೆಂದು ಒಂದು ಸರ್ಕ್ಯುಲರ್ ಹೊರಡಿಸಿ ನೋಡಿ ಆಗ ಎಷ್ಟು ಜನ ಉರ್ದು ಕಲಿಯಲು ಬರುತ್ತಾರೆ ಎಂಬುದನ್ನು. ಈ ಕಾಲದಲ್ಲಿ ಒಂದು ಕಿವಿಗೆ ಒಂದು ಮಾತು ಬಿದ್ದರೆ ಸಾಕಾಗುವುದಿಲ್ಲ ಎಂದು ಎರಡು ಕಿವಿಗೂ ಬೀಳುವಂತೆ ಎರಡು ಸಾರಿ ಹೇಳುತ್ತಿದ್ದೇನೆ. ತಮಿಳಿನವರಿಗೆ ಎಷ್ಟು ಸ್ಕೂಲುಗಳಿವೆ, ಎಷ್ಟು ಜನ ಟೀಚರ್ಸ್ ಇದ್ದಾರೆ ಎಂಬುದನ್ನು ನೋಡಬೇಕು. ತಾವು ದಯಪಿಟ್ಟು ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿಯೂ ಕೂಡ ಒಂದೊಂದು ಉರ್ದು ಟೀಚರ್ಸ್ ಟ್ರೈನಿಂಗ್ ಸ್ಕೂಲ್‌ಗಳನ್ನು ತೆಗೆಯಿರಿ. ಅದರಿಂದ ಒಳ್ಳೆಯದಾಗುತ್ತದೆ. ಉರ್ದು ನರ್ಸರಿ ಸ್ಕೂಲುಗಳನ್ನು ತೆಗೆಯಲು ಅರ್ಜಿಗಳು ಬಂದರೆ ತಕ್ಷಣ ಎನ್‌ಕ್ವೈರಿ ಮಾಡಿ ಅವರಿಗೆ ರೆಕಗ್ನೈಸೇಷನ್ ಮಾಡಿ ಕೊಡಿ, ಇವತ್ತಿನ ದಿವಸ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ ಇಲಾಖೆಗಳಲ್ಲಿನ ಡೈರೆಕ್ಟರ್‌ಗಳು, ಜಾಯಿಂಟ್ ಡೈರೆಕ್ಟರ್‌ಗಳು, ಡೆಪ್ಯುಟಿ ಡೈರೆಕ್ಟರ್‌ಗಳು ಒಳ್ಳೆಯವರು ಇರಬಹುದು. ಆದರೆ ಅವರ ಕೈ ಕೆಳಗೆ ಕೆಲಸ ಮಾಡತಕ್ಕವರು ಪೋಲೀಸರಿಗಿಂತ ಹೊಲಸಾಗಿ

ದ್ದಾರೆ. ಒಂದು ಬಿಲ್ ಪಾಸ್ ಮಾಡಿಸಬೇಕಾದರೆ ಅವರಿಗೆ ಕಾಣಿಕೆಯನ್ನು ಕೊಡಬೇಕು, ಇಲ್ಲದೇ ಹೋದರೆ ಬಿಲ್ ಪಾಸ್ ಆಗುವುದಿಲ್ಲ. ಬೆಂಗಳೂರು ನಾರ್ತ್ ಡಿಸ್ಟ್ರಿಕ್ಟ್‌ನಲ್ಲಿ ಇನ್ನೂ ಕೂಡ ಸ್ಯಾಲರಿ ಬಿಲ್ ಆಗಿಲ್ಲ. ಇದನ್ನು ಏತಕ್ಕೆ ಹೇಳುತ್ತೇನೆ ಅಂದರೆ ಕೆಲವು ಹುಡುಗರು ಎಸ್. ಎಸ್. ಎಲ್. ಸಿ. ಪಾಸ್ ಆಗುವುದಿಲ್ಲ, ಆಗ ಅವರು ೪೦ ರೂಪಾಯಿ ಕಟ್ಟಿದರೆ ಮತ್ತೆ ಪರೀಕ್ಷೆಗೆ ಕೂತುಕೊಳ್ಳಬಹುದು. ಅದರಲ್ಲೂ ಪಾಸ್ ಆಗದಿದ್ದರೆ ಮತ್ತೆ ಕಟ್ಟಬೇಕು. ಈ ರೀತಿ ಪಾಸ್ ಆಗದಂಥ ಹುಡುಗರು ಎಂದರೆ ಮುಸ್ಲಿಂ ಹುಡುಗರು ಮೊದಲನೆಯವರು, ಎರಡನೆಯವರು ಎಂದರೆ ಹರಿಜನ ಹುಡುಗರು. ಈಗ ಮೂರನೇ ವರ್ಷಕ್ಕೆ ೫೦ ರೂಪಾಯಿ, ನಾಲ್ಕನೇ ವರ್ಷಕ್ಕೆ ೫೫ ರೂಪಾಯಿ ಮಾಡುತ್ತಿದ್ದೀರಿ. ಅವರಿಗೆ ದುಡ್ಡು ಕಟ್ಟುವುದಕ್ಕೆ ಶಕ್ತಿ ಇರುವುದಿಲ್ಲ. ಆಗ ಯಾರೂ ಹತ್ತಿರಕ್ಕೆ ಬರುವುದಿಲ್ಲ. ಆದ್ದರಿಂದ ತಾವು ಒಂದು ಒಳ್ಳೆಯ ಮನೋಭಾವನೆಯಿಂದ ಇದನ್ನು ತೆಗೆದುಬಿಡಿ. ಇಲ್ಲದೇ ಹೋದರೆ ಅವರು ಮುಂದಕ್ಕೆ ಬರುವುದಕ್ಕಾಗುವುದಿಲ್ಲ. ಹಿಂದಿನ ಕಾಲದಲ್ಲಿ ಎಸ್. ಎಸ್. ಎಲ್. ಸಿ. ಆಗಿದೆ ಎಂದರೆ ಆಗ ಅದೇ ದೊಡ್ಡದಾಗಿತ್ತು. ಆದರೆ ಈಗ ಈ ಎಸ್. ಎಸ್. ಎಲ್. ಸಿ. ಗೆ ಏನೇನೂ ಬೆಲೆ ಇಲ್ಲ, ಅಷ್ಟಕ್ಕೆ ಕೆಲಸವೂ ಸಿಕ್ಕುವುದಿಲ್ಲ. ಆದ್ದರಿಂದ ನಾನು ಇದುವರೆಗೂ ಹೇಳಿದ ಎಲ್ಲ ಕುಂದುಕೊರತೆಗಳೂ ಕೂಡ ತಮ್ಮ ಕಾಲದಲ್ಲಿಯೇ ಆಗಬೇಕೆಂದು ಹೇಳಿ ನನಗೆ ಇದ ವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಸಭಾಧ್ಯಕ್ಷರೆ ಮಾನ್ಯ ವಿದ್ಯಾಮಂತ್ರಿಗಳು ಈ ಸದನದ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ; ಈಗಾಗಲೇ ಈ ಸದನದ ಅನೇಕ ಸದಸ್ಯರು ಹೇಳಿರುವಂತೆ ಈ ಇಲಾಖೆ ನಮ್ಮ ದೇಶದ ಬೊಕ್ಕಸದಿಂದ ಸುಮಾರು ಒಂದನೇ ಮೂರು ಭಾಗದಷ್ಟು ಹಣವನ್ನು ತಿನ್ನುತ್ತಾ ಇದೆ. ಈ ಹಣ ಎಷ್ಟರಮಟ್ಟಿಗೆ ಖರ್ಚಾಗುತ್ತಾ ಇದೆ, ಈ ಖರ್ಚಾಗುವಂತೆ ಹಣ ಎಷ್ಟರಮಟ್ಟಿಗೆ ನಿರೀಕ್ಷಿತ ಫಲವನ್ನು ಕೊಡುತ್ತಾ ಇದೆ ಎನ್ನುವುದರ ಬಗ್ಗೆ ವಿಚಾರ ಮಾಡತಕ್ಕಂಥದ್ದು ಬಹಳ ಅವಶ್ಯಕವಾಗಿದೆ. ಈ ದಿನ ಶಿಕ್ಷಣ ಮಟ್ಟ ಎಷ್ಟರಮಟ್ಟಿಗೆ ಇಳಿಮುಖವಾಗಿದೆ ಎನ್ನುವುದರ ಬಗ್ಗೆ ಅನೇಕ ಸ್ನೇಹಿತರು ಮಾತನಾಡಿದರು. ಇಲಾಖೆಯೇನೋ ಬಹಳ ವಿಸ್ತಾರವಾಗಿ ಬೆಳೆದಿದೆ. ಆದರೆ ಶಿಕ್ಷಣ ಮಟ್ಟ ಮಾತ್ರ ಸುಧಾರಣೆ ಹೊಂದಲಿಲ್ಲ ಎನ್ನತಕ್ಕ ಮಾತುಗಳನ್ನು ಅನೇಕ ಜನರು ಹೇಳಿದರು. ಈ ಒಂದು ಗುಣಮಟ್ಟದ ಅವನತಿಗೆ ಕಾರಣವಾದರೂ ಏನು ಎಂದು ನಾವು ಬಹಳ ತೀವ್ರವಾಗಿ ವಿಚಾರ ಮಾಡಿ ಕಾರಣವೇನು ಎನ್ನುವುದನ್ನು ನಾವು ಕಂಡುಹಿಡಿದುಕೊಳ್ಳಬೇಕಾಗಿದೆ. ನಾನು ಈ ಸಮಯದಲ್ಲಿ ತಿಳಿಸುವುದಕ್ಕೆ ಇಷ್ಟಪಡುವ ವಿಚಾರವೇನೆಂದರೆ ಪ್ರಧಾನವಾಗಿ ಈ ಶಿಕ್ಷಣ ಇಲಾಖೆ, ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅಭ್ಯರ್ಥಿಗಳು ಕೂಡ ಮೂರನೆ ದರ್ಜೆಯಲ್ಲಿ ಪಾಸ್ ಮಾಡಿದವರಾಗಿರುತ್ತಾರೆ. ಅಂಥವರನ್ನು ಆಯ್ಕೆ ಮಾಡಿಕೊಳ್ಳುವಂತ ಕಾಲದಲ್ಲೂ ಸಹಿತ ಅನೇಕ ವಿಧವಾದಂತ ಅಕ್ರಮಗಳು ಸಹಿತ ನಡೆದಿವೆ ಎನ್ನತಕ್ಕ ವಿಚಾರವನ್ನು ನಾನು ಧೈರ್ಯವಾಗಿ ಹೇಳುತ್ತಾ ಇದ್ದೇನೆ. ಬುದ್ಧಿವಂತರಾದವರು, ಬಹಳ ಅಂಕಗಳನ್ನು ಪರೀಕ್ಷೆಗಳಲ್ಲಿ ಪಡೆದಂತವರು ಈ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಬರುವುದಿತ. ಆದ ದರಿವ ಸಹಜವಾಗಿ ಯಾರು ಯಾರು ಪರೀಕ್ಷೆಯಲ್ಲಿ ಹೆಚ್ಚಿಗೆ ಅಂಕಗಳನ್ನು ಪಡೆದುಕೊಂಡಿಲ್ಲವೋ ಅಂಥವರು ಕೊನೆಯಲ್ಲಿ ಈ ವಿದ್ಯಾ ಇಲಾಖೆಗೆ ಬರತಕ್ಕ ಒಂದು ಪ್ರವೃತ್ತಿ ಸಾಮಾನ್ಯವಾಗಿ ನಾವು ಕಾಣಬಹುದಾಗಿದೆ. ನೇಮಕಾತಿ ಸಂದರ್ಭದಲ್ಲಿ ಸಹಿತ ಕೆಲವು ಅವ್ಯವಹಾರಗಳು, ಭ್ರಷ್ಟಾಚಾರಗಳು ನಡೆದಿವೆ ಎಂದರೆ ಮಾನ್ಯ ಮಂತ್ರಿಗಳು ತಪ್ಪುತಿಳಿದುಕೊಳ್ಳಬಾರದು. ಹತ್ತಾರು ಜನರ ಬಾಯಲ್ಲಿ ಒಂದೇ ವಿಚಾರ ಬಂದಾಗ ಅದಕ್ಕೆ ಬೆಲೆಯನ್ನು ಕೊಡಬೇಕಾದುದು ಅತ್ಯಾವಶ್ಯಕ. ಬೆಂಕಿ ಇಲ್ಲದೆ ಹೊಗೆ ಬರುವುದಿಲ್ಲ. ಲಂಚ ತೆಗೆದುಕೊಳ್ಳುವ ವಿಚಾರದಲ್ಲಿ ತಿಳಿಸುವುದಾದರೆ, ಲಂಚ ತೆಗೆದುಕೊಳ್ಳತಕ್ಕ ಮನುಷ್ಯ ಬಹಿರಂಗ ಪಡಿಸುವುದಿಲ್ಲ. ಲಂಚ ಕೊಡತಕ್ಕ ಮನುಷ್ಯ ಬಹಿರಂಗಪಡಿಸುವುದಿಲ್ಲ. ವ್ಯವಹಾರ ಬಹಳ ಗುಟ್ಟಿನ ವ್ಯವಹಾರವಾಗಿರುವುದರಿಂದ ಇದನ್ನು ಪತ್ತೆಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಪತ್ತೆ ಮಾಡುವುದಕ್ಕೆ ವಿಶೇಷವಾದ ಸಲವತ್ತುಗಳನ್ನು ಹೊಂದಿರತಕ್ಕ ವಿಶೇಷ ಅಧಿಕಾರಗಳನ್ನು ಪಡೆದಿರತಕ್ಕ ಜನಗಳಿಂದ ಸಾಧ್ಯವೆಂದು ಹೊರಗಡೆ ಇರತಕ್ಕವರಿಗೆ ಇದು ಹಾದಿ ಮಾತು ಬೀದಿಮಾತಾಗಿದೆ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ರಿಕ್ರುಟ್‌ಮೆಂಟ್ ನಡೆದಾಗ ಆಯ್ಕೆಯಾಗುವ ಸಮಯದಲ್ಲಿ ಹಣವನ್ನು ಪಡೆದುಕೊಂಡು ಅವರಿಗೆ ನೌಕರಿಯನ್ನು ಕೊಟ್ಟಿದ್ದಾರೆಂದು ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಮಾನ್ಯ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಯಾವ ಇಲಾಖೆಯಲ್ಲಿಯಾದರೂ ಸ್ವಲ್ಪಮಟ್ಟಿನ ಲಂಚ ಇದ್ದರೂ ಅದನ್ನು ಸ್ವಲ್ಪಮಟ್ಟಿಗೆ ಸಹಿಸಿಕೊಳ್ಳಬಹುದು. ಆದರೆ ವಿದ್ಯಾ ಇಲಾಖೆಯಲ್ಲಿ ಭ್ರಷ್ಟಾಚಾರದ ಒಂದು ವಾತಾವರಣ ಇದ್ದರೆ ಅದು ಬೆಳೆಯುವಂತ ಸನ್ನಿವೇಶ ಇದ್ದರೆ ಅದನ್ನು ಪ್ರಾರಂಭದಲ್ಲಿಯೇ ಮೊಟಕು ಮಾಡತಕ್ಕಂಥದ್ದು, ನಿರ್ನಾಮ ಮಾಡತಕ್ಕಂಥದ್ದು ಬಹಳ ಅತ್ಯಾವಶ್ಯಕ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ ನಾವು ಸಮಾಜವಾದವನ್ನು ಒಪ್ಪಿಕೊಂಡು ಸಮಾಜವಾದವನ್ನು ಜಾರಿಗೆ ತರತಕ್ಕಂಥ ಒಂದು ಸರ್ಕಾರವನ್ನು ಪಡೆದಿದ್ದೇವೆ. ನಾವು ಸಹಿತ ಸಮಾಜವಾದಕ್ಕೆ ಬದ್ಧರಾಗಿ ನಡೆದುಕೊಳ್ಳತಕ್ಕ ಜನರಾಗಿದ್ದೇವೆ. ಅದು ನಮ್ಮ ಆದರ್ಶ. ಆದರೆ ಈವತ್ತಿನ ದಿವಸ ಏನನ್ನು ನಾವು ನೋಡುತ್ತಿದ್ದೇವೆ ಎಂದರೆ ಸಮಾಜದಲ್ಲಿ ಇರತಕ್ಕ ಬಡವರಿಗೆ ಒಂದು ರೀತಿಯಾದ ಶಿಕ್ಷಣ ವ್ಯವಸ್ಥೆ. ಶ್ರೀಮಂತರಿಗೆ ಒಂದು ರೀತಿಯಾದ ಶಿಕ್ಷಣ ವ್ಯವಸ್ಥೆ ಇರುವುದನ್ನು ಕಾಣಬಹುದು. ಉದಾಹರಣೆಗಾಗಿ ಹೇಳುವುದಾದರೆ ದೊಡ್ಡ ದೊಡ್ಡ ನೌಕರಿಯಲ್ಲಿರತಕ್ಕವರ ಮಕ್ಕಳು, ಶ್ರೀಮಂತರ ಮಕ್ಕಳು ಓದತಕ್ಕ ಶಾಲೆಗಳು ಯಾವುವು ಇದೆ, ಬಡವರ ಮಕ್ಕಳು ಓದತಕ್ಕ ಶಾಲೆಗಳು ಯಾವುವು ಇವೆ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಚಾರ ಮಾಡಿದರೆ ಒಂದಕ್ಕೊಂದು ತಾರತಮ್ಯ ಇರುವುದನ್ನು ನಾವು ಕಾಣಬಹುದು ನರ್ಸರಿ ಸ್ಕೂಲಿನಿಂದ ಹಿಡಿದು ಕಾಲೇಜು ಶಿಕ್ಷಣದ ತನಕ ಒಂದು ರೀತಿಯಾದ ವ್ಯತ್ಯಾಸಕ್ಕೆ ಅವಕಾಶವಾಗಿದೆ. ಶ್ರೀಮಂತರು ಚಿಕ್ಕಮಕ್ಕಳಿಂದಲೇ ಸರ್ಕಾರಿ ಸ್ಕೂಲಿನಿಂದ ವ್ಯಾಸಂಗವನ್ನು ಪ್ರಾರಂಭಿಸಿ ದೊಡ್ಡ ಮಕ್ಕಳಾಗುವತನಕ ಉತ್ತಮವಾದ ಶಾಲೆಗಳಲ್ಲಿ ಶಿಕ್ಷಣವನ್ನು ಕೊಡಿಸುತ್ತಾರೆ, ಅವರಿಗೆ ತಿಂಗಳಿಗೆ ಮುನ್ನೂರು ರೂಪಾಯಿಗಳಿಂದ ನಾನೂರು ರೂಪಾಯಿಗಳವರೆಗೂ ಖರ್ಚುಮಾಡತಕ್ಕ ಶಕ್ತಿ ಅವರಿಗಿದೆ. ಸ್ವಾಭಾವಿಕವಾಗಿ ಉತ್ತಮ ಮಟ್ಟದ ಶಿಕ್ಷಣವನ್ನು ಪಡೆದಂತೆ ಮಕ್ಕಳು ಮುಂದೆ ಉತ್ತಮ ಪ್ರಜೆಗಳು ಆಗಿಯೇ ಆಗುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸ್ಕೂಲುಗಳ ವ್ಯವಸ್ಥೆ ಮತ್ತು ಶಿಕ್ಷಣ ಸೌಲಭ್ಯಗಳನ್ನು ನೋಡುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳು ಸಮಾಜದಲ್ಲಿ ಏನು ಬಡತನದ ರೇಖೆಯಿಂದ ಕೆಳಗಿರತಕ್ಕ ಜನರು ಮಕ್ಕಳು ಉತ್ತಮವಾದಂತ ಶಿಕ್ಷಣವನ್ನು ಪಡೆಯುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರದಲ್ಲಿರತಕ್ಕ ಎಲ್ಲಾ ಸ್ಥಾನಮಾನಗಳು, ನೌಕರಿಗಳು ಸಹಿತ ತಮಗೆ ಗೊತ್ತಿರುವಹಾಗೆ ಪಬ್ಲಿಕ್ ಸರ್ವೀಸ್ ಕಮೀಷನ್ ಪರೀಕ್ಷೆ ಆಗಿರಬಹುದು, ಅಥವಾ ಕಾಲೇಜು ಮಟ್ಟದಲ್ಲಿ ಇಟ್ಟಿರತಕ್ಕ ಪರೀಕ್ಷೆಗಳೇ ಆಗಿರಬಹುದು ಅದರಲ್ಲಿ ಉತ್ತಮವಾದಂತ ಅಂಕೆಗಳನ್ನು ಪಡೆದುಕೊಂಡು ಉತ್ತಮವಾದಂತ ರೀತಿಯಲ್ಲಿ ಅವರು ಉತ್ತೀರ್ಣರಾದರೆ ಮಾತ್ರ ಉತ್ತಮವಾದ ಸ್ಥಾನಗಳು ದೊರಕುವಂಥಾ ಸ್ಥಿತಿ ಈವತ್ತಿನ ದಿವಸ ಇದೆ. ಆದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಮಕ್ಕಳಿಗೆ ದೊರಕತಕ್ಕ ಒಂದು ಶಿಕ್ಷಣ ಅಷ್ಟು ಉತ್ತಮವಾದಂತ ಶಿಕ್ಷಣವಾಗಿಲ್ಲ. ಇದಕ್ಕೆ ಕಾರಣವಾದರೂ ಇಷ್ಟೆ, ನಮ್ಮ ಸ್ನೇಹಿತರು ಈಗಾಗಲೇ ಹೇಳಿದಂತೆ ಹಳ್ಳಿಗಳಲ್ಲಿರತಕ್ಕ ಶಾಲೆಗಳ ವಾತಾವರಣವನ್ನು ತಾವು ಮೊದಲು ಗಮನಿಸಬೇಕು. ಶಾಲೆಗಳಿರತಕ್ಕ ಜಾಗದಲ್ಲಿ ನಿರ್ಮಲವಾದ ವಾತಾವರಣವಿರುವುದಿಲ್ಲ. ಚೊಕ್ಕತನವಿರುವುದಿಲ್ಲ ಅಲ್ಲಿಗೆ ಬರತಕ್ಕಂಥ ಮಕ್ಕಳನ್ನು ಸಹಿತ ಚೊಕ್ಕತನದಲ್ಲಿಟ್ಟುಕೊಳ್ಳತಕ್ಕಂಥ ಮನೋಧರ್ಮವುಳ್ಳ ಶಿಕ್ಷಕರು ಇರುವುದಿಲ್ಲ. ಪ್ರೀ ಪ್ರೈಮರಿ ಎಜುಕೇಷನ ಲೆವೆಲ್‌ನಲ್ಲಿ ಇರಬಹುದು, ತಾಲ್ಲೂಕ್‌ಬೋರ್ಡ್ ಮಂಡಳಿಗಳವರು ಬಾಲವಾಡಿಗಳನ್ನು ನಡೆಸುತ್ತಾ ಇರಬಹುದು, ಅವರೂ ಕೂಡ ಚೆನ್ನಾಗಿ ನಡೆಸುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣವಾದರೂ ಇಷ್ಟೆ, ಅಲ್ಲಿ ಶಿಕ್ಷಣವನ್ನು ಹೊಂದಿರುವಂತ ಉಪಾಧ್ಯಾಯರನ್ನು ನೇಮಿಸಿಕೊಳ್ಳುವುದಿಲ್ಲ. ಶಿಕ್ಷಣ ಪಡೆದಂತ ಉಪಾಧ್ಯಾಯರುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಾಲವಾಡಿಗಳಿಗೆ ನೇಮಕಮಾಡಿಕೊಂಡು ಅವರೂ ಸಹ ಸ್ವಲ್ಪ ಹಣವನ್ನು ಸಂಸ್ಥೆಗಳನ್ನು ನಡೆಸುವುದಕ್ಕೆ ಕೊಡುವುದಾದರೆ. ನಾನು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಶೇಕಡಾ ೫೦ ಭಾಗ ಹಣವಾದರೂ ಸಹ ಮೇನ್‌ಟನೆನ್ಸ್ ಗ್ರಾಂಟ್ ರೂಪದಲ್ಲಿ ಇಂಥ ಸಂಸ್ಥೆಗಳಿಗೆ ಕೊಡುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ತಕ್ಕಂಥ ಮಕ್ಕಳಿಗೆ ಫ್ರೀ ಪ್ರೈಮರಿ ಎಜುಕೇಶನ್‌ಗೆ, ಎಲ್ಲ ಗ್ರೂಪ್‌ಗೆ ಸೇರಿದಂಥವರಿಗೂ ವಿಶೇಷವಾಗಿ ಅನುಕೂಲವಾಗುತ್ತದೆಂದು, ಈ ದಿಸೆಯಲ್ಲಿ ತಾವು ಯೋಚನೆ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ಯಾವುದಾದರೂ ಸ್ಥಳೀಯ ಸಂಸ್ಥೆಗಳು ಮುಂದೆ ಬಂದು ಸರ್ಕಾರದ ನಿಯಮಗಳಿಗನುಸಾರವಾಗಿ ಶಿಕ್ಷಕರನ್ನು ನೇಮಿಸಿಕೊಂಡು ಶಿಕ್ಷಣ ಕೊಡುತ್ತೇವೆಂದರೆ ಸರ್ಕಾರ ಹಿಂದು ಮುಂದು ನೋಡದೆ ೫೦ ಪರ್ಸೆಂಟ್ ಹಣವನ್ನು ಕೊಡತಕ್ಕದು ನ್ಯಾಯವಾದದ್ದು, ಧರ್ಮವಾದದ್ದು ಎಂದು ಹೇಳು .

ಕಳೆದ ವರ್ಷ, ನಾನು ತಿಳಿದುಕೊಂಡಿರುವಂತೆ ಹೆಚ್ಚು ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ತೆಗೆದಿಲ್ಲ. ಒಂದು ವೇಳೆ ತೆಗೆದಿದ್ದರೂ ಅದು ಬಹಳ ಕಡಿಮೆ ಸಂಖ್ಯೆ. ಅವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದಿಲ್ಲ. ಬಹು ಮುಖ್ಯವಾಗಿ ಪ್ರಾಥಮಿಕ ಶಾಲೆಗಳು ಗ್ರಾಮಾಂತರ ಶಾಲೆಗಳಲ್ಲಿ ಬಹಳ ಬೇಕಾಗಿವೆ ಕೆಲವು ಕಡೆ ಎರಡು ಮೂರು ಮೈಲಿ ದೂರ ಮಕ್ಕಳು ನಡೆದುಕೊಂಡು ಶಾಲೆಗೆ ಹೋಗಿ ವಾಪಸು ಬರತಕ್ಕ ಪರಿಸ್ಥಿತಿ ಇದೆ. ಅಂಥ ಕಡೆ ಶಾಲೆಗಳನ್ನು ಪ್ರಾರಂಭ ಮಾಡಬೇಕು. ಕನಿಷ್ಟ ಪಕ್ಷ ೩೦ ಮಕ್ಕಳಿದ್ದರೆ ಶಾಲೆಗಳನ್ನು ಪ್ರಾರಂಭ ಮಾಡುವುದಾಗಿ ವರದಿಯಲ್ಲಿ ಹೇಳಿದ್ದಾರೆ. ಬಹಳ ಸಂತೋಷ ಆದರೆ ಎಲ್ಲೆಲ್ಲಿ ಇಂಥ ಶಾಲೆಗಳನ್ನು ತೆಗೆಯುವುದಕ್ಕೆ ಅವಕಾಶವಿದೆಯೋ, ಅತ್ಯಾವಶ್ಯಕವಾಗಿದೆಯೋ, ಅದರ ಬಗ್ಗೆ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ಶಾಲೆಗಳನ್ನು ಮಂಜೂರು ಮಾಡಬೇಕೆಂದು ನಾನು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರತಕ್ಕ ಉಪಾಧ್ಯಾಯರುಗಳ ಬಗ್ಗೆ ಎಷ್ಟು ಕಡಿಮೆ ಹೇಳಿದರೆ ಅಷ್ಟೂ ಒಳ್ಳೆಯದು. ಕಳೆದ ವರ್ಷ ಒಂದು ಸ್ವಾಗತಾರ್ಹವಾದ ತೀರ್ಮಾನವನ್ನು ಸರ್ಕಾರದವರು ತೆಗೆದುಕೊಂಡರು ಎಂದು ನಾನು ಅಂದುಕೊಂಡಿದ್ದೇನೆ. ಉಪಾಧ್ಯಾಯರು ಯಾರು ಇದ್ದಾರೆ ಅವರನ್ನು ದೂರದ ಊರಿಗೆ ವರ್ಗ ಮಾಡುವುದು ಅವರು ಹುಟ್ಟಿದಂಥ ಊರಿಗೂ ನಮ್ಮದಿ ಮತ್ತು ಆ ಶಾಲೆಗೂ ಸ್ವಲ್ಪ ಮಟ್ಟಿಗೆ ಒಳಿತಾಗಬಹುದು ಎನ್ನುವ ಅಭಿಪ್ರಾಯದಿಂದ. ಉಪಾಧ್ಯಾಯರು ಅವರವರ ತಾಲ್ಲೂಕುಗಳಲ್ಲಿ ಇರಹಂದು, ಬೇರೆ ತಾಲ್ಲೂಕುಗಳಿಗೆ ಹಾಕಬೇಕು ಎನ್ನುವ ತೀರ್ಮಾನವನ್ನು ಕೈಗೊಂಡದ್ದು ನ್ಯಾಯ. ಆದರೆ ಶ್ರೇಷ್ಠ ನ್ಯಾಯಾಲಯ ಇಂಥ ಆಜ್ಞೆಯಿಂದ ತಾರತಮ್ಯ ಮಾಡಿದ ಹಾಗಾಗುತ್ತದೆ. ಬೇರೆ ಸರ್ಕಾರಿ ನೌಕರರಿಗೆ ಅನ್ವಯಿಸದೆ ಇರತಕ್ಕ ಹುಕುಮನ್ನು ಇವರಿಗೆ ಅನ್ವಯಿಸತಕ್ಕದ್ದು ಅನ್ಯಾಯ ಎನ್ನುವ ತೀರ್ಪನ್ನು ಕೊಟ್ಟಿದ್ದರಿಂದ ಅದನ್ನು ಪೂರ್ಣವಾಗಿ ಜಾರಿಗೆ ಕೊಡುವುದಕ್ಕಾಗಲಿಲ್ಲ. ಆದರೂ ಆಯಾ ಗ್ರಾಮದಿಂದಲಾದರೂ ತಪ್ಪಿಸಿ ನಾಲ್ಕೈದು ಮೈಲಿ ದೂರದಲ್ಲಿದ್ದರೆ ಬಹಳ ಕ್ಷೇಮ. ಕನಿಷ್ಟ ಪಕ್ಷ ಐದು ಮೈಲಿಗೀತ ದೂರದಲ್ಲಿರಲಿ. ಉಪಾಧ್ಯಾಯರು ಪ್ರತಿ ದಿನ ಬೆಳಿಗ್ಗೆ ಎದ್ದು, ಅವರ ಸ್ವಂತ ಕೆಲಸಗಳನ್ನು ಮಾಡಿಕೊಂಡು, ಇನ್ನು ಏನಾದರೂ ಉಪಕಸಬು ಇದ್ದರೆ ಅದನ್ನೆಲ್ಲ ಮುಗಿಸಿಕೊಂಡು, ತಿಂಡಿ ತಿಂದು ಆ ನಂತರ ಶಾಲೆಗೆ ಹೋಗತಕ್ಕ ಪದ್ಧತಿ ಇದೆ. ಅಲ್ಲಿ ಕೂಡ ಅವರು ನಡೆಯುವ ರೀತಿ ಬಗ್ಗೆ ಹೇಳಿದರೆ ಯಾರು ತಪ್ಪು ತಿಳಿದುಕೊಳ್ಳಬಾರದು. ಮಕ್ಕಳ ಮನೋಧರ್ಮ ಏನು ಎಂದು ಅರ್ಥ ಮಾಡಿಕೊಂಡು, ಅವರಿಗೆ ಯಾವ ವಿಚಾರದಲ್ಲಿ ಅಭಿರುಚಿ ಇದೆ ಎಂದು ತಿಳಿದುಕೊಂಡು ಅವರಿಗೆ ಪಾಠ ಹೇಳಿಕೊಡತಕ್ಕ ಗೋಜಿಗೇ ಹೋಗುವುದಿಲ್ಲ. ಅದರ ಬದಲು ಅವರ ಉಪಾಧ್ಯಾಯರು ಹಿಂದೆ ಅವರಿಗೆ ಏನು ಹೇಳಿಕೊಟ್ಟಿದ್ದರು ಅದೇ ರೀತಿಯಾಗಿ ನಾಲ್ಕು ವಿಷಯಗಳನ್ನು ಅವರಿಗೆ ತಿಳಿಸಿ, ಹುಡುಗರು ಕಲಿತಿದ್ದಾರೆಯೋ ಬಿಟ್ಟಿದ್ದಾರೆಯೋ ಎಂದು ಪರೀಕ್ಷೆ ಮಾಡುವುದಕ್ಕೂ ಹೋಗದೆ ತನ್ನ ಕೆಲಸವಾಯಿತು ಎಂದು ತಿಳಿದುಕೊಂಡು ಉಪಾಧ್ಯಾಯರು ವಿದ್ಯಾರ್ಥಿಗಳ ಮುಂದೆ ಬೀಡಿ ಸಿಗರೇಟ್ ಸೇದುತ್ತಾ ಕುಳಿತಿರುತ್ತಾರೆ. ಮಕ್ಕಳ ಮನಸ್ಸು, ತಮಗೆಲ್ಲ ಗೊತ್ತಿರುವ ಹಾಗೆ, ಅನುಕರಣೆ ಮಾಡತಕ್ಕ ವಿಚಾರದಲ್ಲಿ ಬಹಳ ಮುಂದು. ದೊಡ್ಡವರು ಯಾವ ರೀತಿ ಮಾಡುತ್ತಾರೆಯೋ ಅದನ್ನು ಅನುಕರಣೆ ಮಾಡತಕ್ಕದ್ದು ಅವರ ಪ್ರಬಲವಾದ ಪ್ರವೃತ್ತಿ. ಹುಡುಗರ ಮುಂದೆ ಉಪಾಧ್ಯಾಯರು ಬೀಡಿ ಸಿಗರೇಟ್ ಸೇದಿದರೆ ಅವರೂ ಅದನ್ನು ಅನುಕರಿಸುತ್ತಾರೆ. ನಮ್ಮ ಮೇಷ್ಟರು ಪ್ರಾಥಮಿಕ ಶಾಲೆಯಲ್ಲಿ ನಾನು ಓದುತ್ತಿದ್ದಾಗ ಬೀಡಿ ಸೇದುತ್ತಿದ್ದರು. ನಾನು ಮಿಡಲ್ ಸ್ಕೂಲಿಗೆ ಸೇರಿದನಂತರ ಬೀಡಿ ಸೇದಲು ಶುರುಮಾಡಿದೆ, ಅದು ಒಳ್ಳೆಯದೇನೋ ಎನ್ನುವ ಕಲ್ಪನೆಯಿಂದ ಹಾಗೆ ಮಾಡಿದೆ. ಹುಡುಗರ ಮನಸ್ಸು ಯಾವ ರೀತಿ ಇರುತ್ತದೆ ಎನ್ನುವುದಕ್ಕೆ ನನ್ನ ಉದಾಹರಣೆಯನ್ನು ಹೇಳುತ್ತಿದ್ದೇನೆ. ಉಪಾಧ್ಯಾಯ ವೃತ್ತಿಯಲ್ಲಿ ಕೆಲಸ ಮಾಡತಕ್ಕ ಜನ ಇನ್ನು ಮುಂದಾದರೂ ಸಹ ಒಳ್ಳೆಯ ಆದರ್ಶಗಳನು ಪ್ರದರ್ಶಿಸುವಂತೆ ಇರಬೇಕು. ಅವರ ಶೀಲ, ಕ್ಯಾರೆಕ್ಟರ್ ಚೆನ್ನಾಗಿರಬೇಕು. ಹೊರಗಡೆ ಏನಾದರೂ ಮಾಡಿಕೊಳ್ಳಲಿ, ಮಕ್ಕಳ ಮುಂದೆ ಆದರೂ ಸರಿಯಾದ ರೀತಿ ನೀತಿಯಿಂದ ಇರಬೇಕು.

ತನಿಖಾ ಸಿಬ್ಬಂದಿಯಲ್ಲಿ ಬೇಕಾದಷ್ಟು ಸಬ್ಜೆಕ್ಟ್ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡಿದ್ದಾರೆ. ಅವರ ಸಬ್ಜೆಕ್ಟ್ ಯಾವುದೋ ಇದ್ದು ಅವರು ಬೇರೆ ಯಾವುದೋ ಸಬ್ಜೆಕ್ಟ್ ಇನ್‌ಸ್ಪೆಕ್ಟರ್ ಆಗಿರುತ್ತಾರೆ. ಈ ರೀತಿ ಇರುವುದನ್ನು ತಪ್ಪಿಸಬೇಕು.

ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳು ಇನ್ನೊಂದು ಅವ್ಯವಹಾರದಲ್ಲಿ ತೊಡಗಿದ್ದಾರೆ. ಎಲ್ಲರೂ ಎಂದು ಹೇಳತಕ್ಕದು ಸತ್ಯಕ್ಕೆ ದೂರವಾದ ಮಾತಾಗಬಹುದು. ಆದರೆ ಬಹುತೇಕ ಮಂದಿ ಈ ಅಪರಾಧದಿಂದ ಹೊರತಾಗಿಲ್ಲ. ಅಮೆರಿಕಾ ದೇಶದ ಸರ್ಕಾರದವರೋ ಅಥವಾ 'ಕೇರ್' ಸಂಸ್ಥೆಯವರೋ ಹುಡುಗರ ಮಧ್ಯಾಹ್ನದ ಉಪಹಾರಕ್ಕಾಗಿ ಕೊಡತಕ್ಕ ಆಹಾರ ಪದಾರ್ಥಗಳನ್ನು ಕದ್ದು ಮಾರಾಟ ಮಹಾಪಾಪ ಕೃತ್ಯವನ್ನು ಎಸಗುತ್ತಿದ್ದಾರೆ. ಕೇರ ಸಂಸ್ಥೆಯಿಂದ ಬರುವ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಯಾವ ಶಾಲೆಗೆ ಕೊಡುತ್ತಾರೆ, ಅದು ಮೇಲ್ವಿಚಾರಣೆಯನ್ನು ನಡೆಸತಕ್ಕ ಉಪಾಧ್ಯಾಯರು ಒಂದೆರಡು ವರ್ಷಗಳ ಅವಧಿಯಲ್ಲಿ ಏನಾದರೂ ಒಂದು ಆಸ್ತಿಯನ್ನು ಮಾಡಿಕೊಂಡಿರುತ್ತಾರೆ. ಈ ಬಗ್ಗೆ ತನಿಖೆ ನಡೆಸಿದರೆ, ಬಹುಶಃ ಅವರಿಗೆ ಹೀಗೆ ಆಸ್ತಿಪಾಸ್ತಿಗಳು ಬಂದವು ಎನ್ನುವುದರ ಬಗ್ಗೆ ಸ್ವಲ್ಪಮಟ್ಟಿಗಾದರೂ ಬೆಳಕು ಚೆಲ್ಲಿದಂತಾಗುತ್ತದೆ. ಅವರುಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸಂಸ್ಥೆಯಿಂದ ಬಂದಂಥ ಆಹಾರ ಪದಾರ್ಥಗಳನ್ನು ಕದ್ದು ಮಾರುವಂಥವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡಿದರೆ, ಅದರಲ್ಲಿ ಸ್ವಲ್ಪವೇ ಜನ ಸಿಕ್ಕಿಬಿದ್ದರೂ ಕೂಡ ಅದರಿಂದ ಬೇರೆಯವರು ಪಾಠ ಕಲಿತುಕೊಂಡು ಮುಂದೆ ಇಂಥ ಅನಾಹುತಗಳು, ಅವ್ಯವಹಾರಗಳು ನಡೆಯುವುದು ತಪ್ಪಿಹೋಗುತ್ತದೆ. ಆ ದೃಷ್ಟಿಯಿಂದ ಇದರ ಬಗ್ಗೆ ತನಿಖೆ ನಡೆಸುವುದು ಉತ್ತಮ ಎಂದು ನಾನು ಸಲಹೆ ಮಾಡುತ್ತೇನೆ.

ಶಾಲಾ ಕಟ್ಟಡಗಳ ವಿಚಾರದಲ್ಲಿ ಈಗಾಗಲೇ ಮಾನ್ಯ ದೇವೇಗೌಡರೂ ಹೇಳಿದ್ದಾರೆ. ಪ್ರಾಥಮಿಕ ಶಾಲಾ ಕಟ್ಟಡಗಳ ವಿಚಾರದಲ್ಲಿ ಹೇಳುವುದಾದರೆ ಕೆಲವು ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಉತ್ತಮವಾದ ಕೆಲಸ ಮಾಡಿವೆ. ಸರ್ಕಾರದವರು ಎಷ್ಟೇ ಹಣವನ್ನು ಕೊಡಲಿ, ಅವರು ಹೆಚ್ಚು ಹಣವನ್ನು ತಮ್ಮ ಕಡೆಯಿಂದ ಪೂರಕ ಮಾಡಿಕೊಂಡು ಶಾಲಾ ಕಟ್ಟಡಕ್ಕೆ ಆಗತಕ್ಕ ಖರ್ಚಿಗೆ ಸೇರಿಸಿ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಆದರೆ ಸರ್ಕಾರದ ಕಡೆಯಿಂದ ಬರತಕ್ಕ ಇತ್ತೀಚಿನ ವರ್ಷಗಳಲ್ಲಿ ಬಹಳ ಕಡಿಮೆಯಾಗಿದೆ. ಮೂರು ವರ್ಷದ ಹಿಂದೆ ಮೂರು ನಾಲ್ಕು ಸಾವಿರ ರೂಪಾಯಿಗಳಿಗೆ ಒಂದು ಕಟ್ಟಡವನ್ನು ಮಾಡುವುದಕ್ಕೆ ಸಾಧ್ಯವಿತ್ತು, ಈ ದಿವಸ ಏಳೆಂಟು ಸಾವಿರ ರೂಪಾಯಿ ಆದರೂ ಅದೇ ತರಹ ಕಟ್ಟಡವನ್ನು ನಾವು ಕಟ್ಟಿ ಮುಗಿಸುವುದಕ್ಕಾಗುವುದಿಲ್ಲ. ದರಗಳು ಬಹಳ ಹೆಚ್ಚಾಗಿವೆ. ಇಂಥ ಪರಿಸ್ಥಿತಿಯಲ್ಲಿ ಒಂದು ಕೊಠಡಿಗೆ ಎರಡೂವರ ಸಾವಿರ ಮಾತ್ರ ಸರ್ಕಾರದಿಂದ ಕೊಡುವುದಾಗಿ ಒಂದು ಹುಕುಂ ಹೊರಡಿಸಿ, ಯಾವ ಪದಾರ್ಥಗಳನ್ನಾದರೂ ಉಪಯೋಗಿಸಿಕೊಳ್ಳಿ, ಹೇಗೆ ಬೇಕಾದರೂ ಕಟ್ಟಿಕೊಳ್ಳಿ ಎಂದು ಹೇಳುತ್ತಾರೆ. ಪಂಚಾಯಿತಿಯವರು ಮತ್ತು ತಾಲ್ಲೂಕು ಬೋರ್ಡಿನವರು ಯಾವ ದೇಣಿಗೆಯನ್ನೂ ಕೊಡಬಾರದು ಎನ್ನುವ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಪಂಚಾಯಿತಿಗಳ ಹಣಕಾಸಿನ ಸ್ಥಿತಿ ಚೆನ್ನಾಗಿದ್ದರೆ ಅವರು ಕೊಡುವುದಕ್ಕೆ ಸರ್ಕಾರದವರು ಏಕೆ ಪ್ರತಿಬಂಧಕ ಹಾಕಬೇಕು? ವಿದ್ಯಾಭ್ಯಾಸದ ಬಗ್ಗೆ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡು ಸಹ ಹೊತ್ತಿದೆ.

6-10 P.M.

ತಾಲ್ಲೂಕ್ ಬೋರ್ಡಿನವರು ತಮ್ಮ ತಾಲ್ಲೂಕ್‌ನಲ್ಲಿ ವಿದ್ಯಾಸಂಸ್ಥೆಗಳು ಚೆನ್ನಾಗಿರಬೇಕು, ಅದಕ್ಕಾಗಿ ತಾವೂ ಸಹ ಹಣ ಖರ್ಚು ಮಾಡುತ್ತೇವೆಂದು ಮುಂದೆ ಬಂದರೆ ಅದಕ್ಕೆ ಸರ್ಕಾರದವರು ಅಡ್ಡಿ ಮಾಡಬಾರದೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಸರ್ಕಾರದವರು ಈ ವಿಚಾರದಲ್ಲಿ ಇತ್ತೀಚೆಗೆ ಏನು ಒಂದು ಆಜ್ಞೆ ಹೊರಡಿಸಿದ್ದಾರೆ, ಅದನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಉಪಾಧ್ಯಾಯರಿಗೆ ಶಿಕ್ಷಣ ಕೊಡತಕ್ಕಂಥ ಒಂದು ಸಂಸ್ಥೆ ನಮ್ಮ ತಾಲ್ಲೂಕ್ ಕೇಂದ್ರದಲ್ಲಿ ಇದೆ. ಅದಕ್ಕೆ ಸ್ವಂತ ಕಟ್ಟಡ ಇಲ್ಲ, ಮತ್ತು ಅಲ್ಲಿ ಟ್ರೈನಿಂಗ್ ಪಡೆಯುವವರಿಗೆ ವಾಸ ಮಾಡಲು ಮನೆಗಳಿಲ್ಲ, ಮುಖ್ಯವಾಗಿ ಶಾಲೆಗಳನ್ನು ನಡೆಸುವುದಕ್ಕೆ ಮತ್ತು ವಿದ್ಯಾರ್ಥಿನಿಲಯಗಳನ್ನು ನಡೆಸುವುದಕ್ಕೆ ಅವಶ್ಯಕವಾದಂಥ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ವ್ಯವಸೆ ಮಾಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಹಂತ ಹಂತವಾಗಿಯಾಗಿದರು ಕಟ್ಟಿಸುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿ ಶಾಲೆಗಳು ಉತ್ತಮ ರೀತಿಯಿಂದ ನಡೆಸುವುದಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾರ್ಥಿ ವೇತನದ ಬಗ್ಗೆ ನಾನು ಕೇಳಿಕೊಳ್ಳುವುದಿಷ್ಟೆ, ವಿದ್ಯಾರ್ಥಿ ವೇತನಗಳನ್ನು ಕೊಡುವಾಗ ಮೆರಿಟ್‌ಗಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳ ಬಡತನವನ್ನೇ ಆಧಾರವನ್ನಾಗಿ ಇಟ್ಟುಕೊಂಡು ವಿದ್ಯಾರ್ಥಿ ವೇತನ ಕೊಡುವ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ದುರಾದೃಷ್ಟಕ್ಕೆ ಈಗ ಏನಾಗಿದೆ ಎಂದರೆ, ಈಗ ಸೋಷಿಯಲ್ಲಿ ಮತ್ತು ಎಕನಾಮಿಕಲಿ ಬ್ಯಾಕ್‌ವರ್ಡ್ ಎಂದು ತಹಶೀಲ್‌ದಾರರಿಂದ ಸರ್ಟಿಫಿಕೇಟ್ ಪಡೆದುಕೊಂಡು ಕೆಲವರು ಏನು ಸ್ಕಾಲರ್‌ಷಿಪ್ ಪಡೆಯುತ್ತಿದ್ದಾರೆ, ಅವರುಗಳ ಪೈಕಿ ಶೇಕಡ ೮೦ರಷ್ಟು ಮಂದಿ ಸರ್ಕಾರಕ್ಕೆ ಮೋಸ ಮಾಡುತ್ತಾರೆ. ಇವರ ಬಗ್ಗ ಒಂದು ಕಟ್ಟುನಿಟ್ಟಾದ ವ್ಯವಸ್ಥೆ ಬೇಕಾಗುತ್ತದೆ. ಇಂತಹ ದೋಷಗಳ ಇನ್ನು ಮುಂದೆ ಮರುಕಳಿಸದಂತೆ ಒಂದು ಸುಧಾರಿತವಾದ ನೀತಿಯನ್ನು ಸರ್ಕಾರದವರು ಅನುಸರಿಸಬೇಕೆಂದು ಈ ಸಂದರ್ಭನಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ವಿದ್ಯಾರ್ಥಿ ವೇತನಗಳನ್ನು ಪರೀಕ್ಷೆ ಇನ್ನು ೮–೧೦ ದಿವಸಗಳಿವೆ ಎನ್ನುವ ಸಮಯದಲ್ಲಿ ಕೊಡಲಾಗುತ್ತಿದೆ. ಇದರ ಬದಲು ವರ್ಷದ ಮಧ್ಯಭಾಗದಲ್ಲಿ ಕೊಡುವ ಒಂದು ನೀತಿಯನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಹಾಫ್–ಎ–ಮಿಲಿಯನ್ ಜಾಬ್ ಸ್ಕೀಮ್ ಪ್ರಕಾರ ಸರ್ಕಾರದವರು ಕೆಲವು ಟೀಚರ್ಸ್‌ಗಳನ್ನು ಕೆಲಸಕ್ಕೆ ತೆಗೆದುಕೊಂಡರು. ಈಗ ಅವರನ್ನು ಕೆಲಸದಿಂದ ತೆಗೆದಿದ್ದಾರೆ. ಇವರುಗಳ ಪೈಕಿ ಕೆಲವರಿಗೆ ವಯಸ್ಸಾಗಿಬಿಟ್ಟಿದೆ. ಅಂತಹವರನ್ನು ಕೆಲಸದಲ್ಲಿ ಮುಂದುವರೆಸುವ ಬಗ್ಗೆ ರಿಯಾಯಿತಿ ತೋರಿಸಬೇಕೆಂದು ಹೇಳುತ್ತೇನೆ. ಕೆಲವರಿಗೆ ಬೇರೆ ಜೀವನ ಮಾಡುವುದಕ್ಕೆ ಅವಕಾಶವಿದ್ದರೆ ಅಂತಹವರ ವಿಚಾರದಲ್ಲಿ ಸರ್ಕಾರದವರು ಯಾವ ರೀತಿ ಬೇಕಾದರೂ ನಡೆದುಕೊಳ್ಳಬಹುದು, ಆದರೆ ಕೆಲವರು ಪೂರ್ಣವಾಗಿ ಸರ್ಕಾರದ ಕೆಲಸವನ್ನೇ ನಂಬಿಕೊಂಡಿದ್ದಾರೆ. ಅಂತಹವರಿಗೆ ಈ ಸ್ಕೀಂನಲ್ಲಿ ಕೆಲಸ ಒದಗಿಸಬೇಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ನಾವು ಅವರಿಗೆ ಬರೀ ಟ್ರೈನಿಂಗ್ ಮಾತ್ರ ಕೊಡುತ್ತಿದ್ದೇವೆ, ಕೆಲಸ ಕೊಟ್ಟಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಟ್ರೈನಿಂಗ್ ಮುಗಿಸಿರುವವರು ಅದರಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರೀ ನೌಕರಿ ಪಡೆಯುವುದಕ್ಕೆ ಅವರ ಅರ್ಹರಾಗಿದ್ದಾರೆ. ಆದಕಾರಣ ಅವರನ್ನು ಅದರಂತೆ ಮೇರೆಗೆ ಖಾಯಂ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ನೇಮಕ ಮಾಡಿಕೊಂಡಿರುವವರಿಗೆ ನಾವು ಸಂಬಳ ಕೊಡುತ್ತಿಲ್ಲ, ಕೇವಲ ಸ್ಟೈಫಂಡ್ ಕೊಡುತ್ತಿದ್ದೇವೆ. ಟಿ.ಸಿ.ಎಚ್. ಮತ್ತು ಬಿ.ಇಡಿ. ಟ್ರೈನಿಂಗನ್ನು ಕೆಲವರು ಪೂರೈಸಿಕೊಂಡಿದ್ದಾರೆ. ಅಂತಹವರಿಗೆ ಟೀಚಿಂಗ್ ಎಬಿಲಿಟಿ ಇನ್ನೂ ಜಾಸ್ತಿ ಬರಲಿ, ಅವರ ಒಂದು ವಿದ್ಯಾರ್ಹತೆಯನ್ನು ಇನ್ನೂ ಹೆಚ್ಚು ಮಾಡಿಕೊಳ್ಳಲಿ ಎನ್ನುವ ದೃಷ್ಟಿಯಿಂದ ಈ ಹಾಫ್-ಎ-ಮಿಲಿಯನ್ ಜಾಬ್ ಸ್ಕೀಂನಲ್ಲಿ ಟ್ರೈನಿಂಗ್ ಕೊಡುತ್ತಿದ್ದೇವೆ. ಆದರೆ ಅವರಿಗೆ ನಾವು ಪೇ ಕೊಡುತ್ತಿಲ್ಲ, ಸ್ಟೈಫಂಡ್ ಮಾತ್ರ ಕೊಡುತ್ತಿದ್ದೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದು ಸರ್ಕಾರದ ಕರ್ತವ್ಯವಾಗಿರುವುದರಿಂದ ಅವರಿಗೆ ಕೆಲಸ ಒದಗಿಸಬೇಕೆಂದು ಹೇಳುತ್ತೇನೆ.

ಈಗ ಸರ್ಕಾರದವರು ಕೆಲವು ಕಡೆ ಜೂನಿಯರ್ ಕಾಲೇಜುಗಳನ್ನು ತೆಗೆದಿದ್ದಾರೆ, ಆದರೆ ಕೆಲವು ಕಡೆಗಳಲ್ಲಿ ೮ ಜನ ವಿದ್ಯಾರ್ಥಿಗಳಿದ್ದರೆ, ೧೫ ಜನ ಉಪಾಧ್ಯಾಯರುಗಳಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇನ್ನು ಮುಂದೆ ಮುಂದುವರೆಯುವುದಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ಈ ವಿಚಾರದಲ್ಲಿ ಸರ್ಕಾರದವರು ರಾಜ್ಯದ ಎಲ್ಲ ಕಡೆಗಳಿಂದಲೂ ಅಂಕಿ ಅಂಶಗಳನ್ನು ತರಿಸಿಕೊಂಡು ಕಡಿಮೆ ವಿದ್ಯಾರ್ಥಿಗಳಿದ್ದಾರೋ ಅಂತಹ ಕಡೆಗಳಲ್ಲಿರುವ ಜೂನಿಯರ್ ಕಾಲೇಜುಗಳನ್ನು ರದ್ದುಮಾಡಿ ಅವಶ್ಯಕತೆಯಿರುವ ಕಡೆಗಳಲ್ಲಿ ಹೊಸದಾಗಿ ಪ್ರಾರಂಭ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Bussiness of the House.

MR. DEPUTY SPEAKER.—The discussions will continue tomorrow. Before adjourning the House, I have an announcement to make.

On the representation of Members it has been decided that there will be no sitting on 12th March. On the 14th March 1975, there will be two sittings, one in the morning from 8-30 a.m. to 12-30 p.m. and other in the afternoon from 2-00 p.m. to 6-00 p.m.

The discussion and voting of Supplementary Demands for grants put down for the 12th March 1975, will be taken up on the 14th March 1975, at the morning Session,

The House now stands adjourned and meet tomorrow at 8-00 A.M.

The House adjourned at Ten Minutes past Six of the Clock to meet at Thirty Minutes past Eight of the Clock on Saturday the 8th March 1975.